ಕನ್ನಡ

# ಬಾಲಭಾರತಿ

ಆರನೆಯ ಇಯತ್ತೆ







# ಟೆಲಿ ಮಾನಸ ಸಹಾಯವಾಣಿ.

**Tele-MANAS (Tele Mental Health Assistance and Networking Across States)**

**(14416/1800-89-14416)**

ರಾಷ್ಟ್ರೀಯ ಮಾನಸಿಕ ಆರೋಗ್ಯದ ಕಾರ್ಯಕ್ರಮದಡಿಯ ಕೇಂದ್ರ ಪುರಸ್ಕೃತ ಟೆಲಿಮಾನಸ ಈ ಯೋಜನೆಯನ್ನು ಅಕ್ಟೋಬರ 2022ರಿಂದ ಮಹಾರಾಷ್ಟ್ರ ರಾಜ್ಯದಲ್ಲಿ ಜಾರಿಗೆ ತರಲಾಗಿದೆ. ಟೆಲಿಮಾನಸ ಕಾರ್ಯಕ್ರಮದಡಿಯಲ್ಲಿ 24×7 ಉಚಿತ, ಏಕಾತ್ಮಕ ಮತ್ತು ಸಮಗ್ರ ಮಾನಸಿಕ ಸೇವೆಯನ್ನು 14416 ಈ ಸಹಾಯವಾಣಿ ಮೂಲಕ ನೀಡಲಾಗುತ್ತದೆ. ಇದರಲ್ಲಿ ವಿವಿಧ ಮಾನಸಿಕ ಸಮಸ್ಯೆಗಳಿಗಾಗಿ ತಜ್ಞರ ಮೂಲಕ ಚಿಕಿತ್ಸೆ ಹಾಗೂ ಸಮಾಲೋಚನೆ ನೀಡಲಾಗುತ್ತದೆ. ಟೆಲಿಮಾನಸ ಸಹಾಯವಾಣಿ ಕರೆ ಮಾಡಿದ ನಂತರ ತಾವು ನೀಡುವ ಮಾಹಿತಿಯನ್ನು ಸಂಪೂರ್ಣವಾಗಿ ಗೌಪ್ಯವಾಗಿಡಲಾಗುವುದು. ಆದ್ದರಿಂದ ವಿದ್ಯಾರ್ಥಿಗಳು ಯಾವುದೇ ರೀತಿಯ ಸಂಕೋಚವಿಲ್ಲದೇ ತಮ್ಮ ಸಮಸ್ಯೆಗಳನ್ನು ಈ ಸಹಾಯವಾಣಿ ಸಂಖ್ಯೆಗೆ ಕರೆ ಮಾಡಿ ಹೇಳಬೇಕು ಮತ್ತು ಮನಸ್ಸಿನಲ್ಲಿರುವ ಅನುಮಾನಗಳನ್ನು ಕೇಳಿ ತಮ್ಮ ಸಮಸ್ಯೆಗಳಿಗೆ ಪರಿಹಾರವನ್ನು ಪಡೆದು ಮತ್ತು ಇತರರಿಗೂ ಸಹಾಯ ಪಡೆಯಲು ತಿಳಿಸಬೇಕು.

## ಮನೋದರ್ಪಣ

ಮನೋದರ್ಪಣ (8448440632) ಇದು ಉಚಿತ ದೂರವಾಣಿ ಸೇವೆಯಾಗಿದ್ದು, ಜುಲೈ 2020ರಿಂದ ಶಿಕ್ಷಣ ಮಂತ್ರಿಮಂಡಳದ ಮೂಲಕ ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಹಾಗೂ ತರಬೇತಿ ಪರಿಷತ್ತಿನಲ್ಲಿ ಮನೋದರ್ಪಣ ಕಕ್ಷೆಯ ಮೂಲಕ ವಿದ್ಯಾರ್ಥಿಗಳಿಗೆ ಪಾಲಕರಿಗೆ ಅದರಂತೆಯೇ ಶಿಕ್ಷಕರಿಗೆ ಮನೋವಿಜ್ಞಾನದ ಮಾರ್ಗದರ್ಶನ ಹಾಗೂ ಸಹಾಯವನ್ನು ಪಡೆಯುವುದಾಕ್ಕಾಗಿ ಬೆಳಿಗ್ಗೆ 8 ರಿಂದ ಸಾಯಂಕಾಲ 8.00 ಈ ಕಾಲಾವಧಿಯಲ್ಲಿ ವಾರದಲ್ಲಿರುವ ಎಲ್ಲಾ ದಿವಸ ಉಪಲಬ್ಧ ಮಾಡಿಕೊಡಲಾಗಿದೆ. ವಿದ್ಯಾರ್ಥಿ, ಪಾಲಕರು ಹಾಗೂ ಶಿಕ್ಷಕರು ಅವಶ್ಯಕವಿರುವ ಮಾರ್ಗದರ್ಶನ ಹಾಗೂ ಸಮಾಲೋಚನೆ ದೊರಕಿಸಲು ಈ ಸಹಾಯವಾಣಿ ಸಂಖ್ಯೆಗೆ ಕರೆ ಮಾಡಬಹುದು.

ಸರಕಾರ ನಿರ್ಣಯ ಕ್ರಮಾಂಕ : ಅಭ್ಯಾಸ 2116/(ಪ್ರ.ಕ್ರ. 43/16) ಎಸ್‌ಡಿ-4 ದಿನಾಂಕ 25.04.2016
ಅನ್ವಯ ಸ್ಥಾಪಿಸಲಾದ ಸಮನ್ವಯ ಸಮಿತಿಯು ದಿನಾಂಕ 01.06.2026 ರಂದು ನಡೆದ ಸಭೆಯಲ್ಲಿ ಈ
ಪಠ್ಯ ಪುಸ್ತಕವನ್ನು ಕ್ರಿ.ಶ. 2026-2027 ಈ ಶೈಕ್ಷಣಿಕ ವರ್ಷದಿಂದ ನಿರ್ಧರಿಸಲು ಮಾನ್ಯತೆ ಕೊಡಲಾಗಿದೆ.

# ಕನ್ನಡ ಬಾಲಭಾರತಿ

## ಆರನೆಯ ಇಯತ್ತೆ




ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ - 4.

ಇಲ್ಲಿರುವ ಚೌಕಟ್ಟಿನಲ್ಲಿಯ Q.R. Code ಸ್ಮಾರ್ಟಫೋನ ಮೂಲಕ ಸ್ಕ್ಯಾನ ಮಾಡಿದರೆ ನಿಮಗೆ ಡಿಜಿಟಲ್ ಪಠ್ಯಪುಸ್ತಕ ಹಾಗೂ ಪಠ್ಯ ಪುಸ್ತಕದಲ್ಲಿಯ ಘಟಕಗಳಿಗೆ ಸಂಬಂಧಿಸಿದ ದೃಕ್, ಶ್ರಾವ್ಯ ಮತ್ತು ದೃಕ್‌ಶ್ರಾವ್ಯ ಸ್ವರೂಪದಲ್ಲಿ ಅಧ್ಯಯನ-ಅಧ್ಯಾಪನ ಸಾಹಿತ್ಯ ಉಪಲಬ್ಧವಾಗುವುದು.

प्रथमावृत्ति 2026

© ಮಹಾರಾಷ್ಟ್ರ ರಾಜ್ಯ ಪಠ್ಯಪುಸ್ತಕ ನಿರ್ಮಿತಿ ಹಾಗೂ ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ - 411014.

ಮಹಾರಾಷ್ಟ್ರ ರಾಜ್ಯ ಪಾಠ್ಯ-ಪುಸ್ತಕ ನಿರ್ಮಿತಿ ಹಾಗೂ ಅಭ್ಯಾಸಕ್ರಮ ಸಂಶೋಧನ ಮಂಡಳವು ಈ ಪುಸ್ತಕದ ಎಲ್ಲ ಹಕ್ಕುಗಳನ್ನು ಕಾಯ್ದಿರಿಸಿದೆ. ಮಹಾರಾಷ್ಟ್ರ ರಾಜ್ಯ ಪಠ್ಯಪುಸ್ತಕ ನಿರ್ಮಿತಿ ಹಾಗೂ ಅಭ್ಯಾಸಕ್ರಮ ಸಂಶೋಧನ ಮಂಡಳದ ಸಂಚಾಲಕರ ಲಿಖಿತ ಅನುಮತಿ ಇಲ್ಲದೆ ಈ ಪುಸ್ತಕದ ಯಾವುದೇ ಭಾಗವನ್ನು ಉದ್ಧೃತಗೊಳಿಸಬಾರದು.

**ಕನ್ನಡ ಭಾಷಾ ಸಮಿತಿ ಸದಸ್ಯ**

ಶ್ರೀಮತಿ ಶೈಲಜಾ ದೇಶಪಾಂಡೆ (ಅಧ್ಯಕ್ಷ)

ಶ್ರೀಮತಿ ಮೀನಾಕ್ಷಿ ಹನಗಂಡಿ (ಸದಸ್ಯ)

ಶ್ರೀಮತಿ ಸುವರ್ಣಾ ವಿ. ದೀಕ್ಷಿತ (ಸದಸ್ಯ )

ಶ್ರೀ. ಮಹಾದೇವ ಎಸ್. ಜಾವೀರ (ಸದಸ್ಯ )

ಶ್ರೀ. ಭೀಮಾಶಂಕರ ಎಚ್. ಸಲಗರ (ಸದಸ್ಯ)

ಶ್ರೀ. ಪ್ರವೀಣ ಜಿ. ಗಿರಣಿ (ಸದಸ್ಯ)

ಶ್ರೀ. ದಯಾನಂದ ಟಿ. ಹಂಜಗಿ (ಸದಸ್ಯ)

ಶ್ರೀ. ಆನಂದ ಎನ್. ಭಾವಿಕಟ್ಟಿ (ಸದಸ್ಯ)

ಶ್ರೀ. ಶಿವರಾಜ ಕೆ. ಕೂಟನೂರ (ನಿಮಂತ್ರಿತ-ಸದಸ್ಯ)

ಶ್ರೀಮತಿ ರತ್ನಾ ಎಸ್. ಪಟ್ಟಣ (ನಿಮಂತ್ರಿತ-ಸದಸ್ಯ)

ಶ್ರೀಮತಿ ಕೇತಕಿ ಜಾನಿ (ಪ್ರಭಾರಿ ವಿಶೇಷಾಧಿಕಾರಿ, ಕನ್ನಡ)

**ಮುಖಪುಟ ಚಿತ್ರಕಾರ :** ಭಟು ರಾಮದಾಸ ಬಾಗಲೆ

**ಚಿತ್ರಕಾರ :** ವಿವೇಕಾನಂದ ಪಾಟೀಲ

**ಅಕ್ಷರ ಜೋಡಣೆ:** ಕೇಸನ್ ಲ್ಯಾಂಗ್ವೇಜ್ ಬ್ಯುರೋ, ಮುಂಬಯಿ

**ಕಾಗದ :** 70 ಜಿ. ಎಸ್. ಎಮ್. ಕ್ರಿಮವೋವ್ಹ

**ಮುದ್ರಣಾದೇಶ :**

**ಮುದ್ರಕ :**

**ಕನ್ನಡ ಸಂಯೋಜನ ಪ್ರಮುಖರು**

ಶ್ರೀಮತಿ ಕೇತಕಿ ಜಾನಿ

ಪ್ರಭಾರಿ ವಿಶೇಷಾಧಿಕಾರಿ, ಕನ್ನಡ

ಮತ್ತು

ವಿದ್ಯಾಸಚಿವೆ (ಭಾಷಾ)

ಪಾಠ್ಯಪುಸ್ತಕ ನಿರ್ಮಿತಿ ಮಂಡಳ, ಪುಣೆ-4.

**ನಿರ್ಮಿತಿ**

**ಶ್ರೀಮತಿ ಮಿತಾಲಿ ಶಿತಪ**

ಪ್ರಭಾರಿ ಮುಖ್ಯ ನಿರ್ಮಿತಿ ಅಧಿಕಾರಿ

**ಶ್ರೀ. ರಾಜೇಂದ್ರ ಪಾಂಡಲೋಸ್ಕರ**

ನಿರ್ಮಾಣ ಅಧಿಕಾರಿ

**ಗುಣವತ್ತತೆಯ ಸಮೀಕ್ಷಕರು**

ಶ್ರೀ. ಶ್ರೀಶೈಲ ಅವಟಿ (ಗುಣವತ್ತತೆಯ ಪರೀಕ್ಷಕ)

ಶ್ರೀ. ಚಂದ್ರಕಾಂತ ದೇಶಪಾಂಡೆ (ಕಾನೂನು ತಜ್ಞ)

ಶ್ರೀ. ಬಿ. ಎನ್. ಶೋಭಾ (CWSN ತಜ್ಞ)

**ಪ್ರಕಾಶಕ**

**ಶ್ರೀ ಹೇಮಂತ್ ಬಾಬರ**

ಪ್ರಭಾರಿ ಮುಖ್ಯ ನಿರ್ಮಿತಿ ಅಧಿಕಾರಿ

ಪಾಠ್ಯ ಪುಸ್ತಕ ನಿರ್ಮಿತಿ ಮಂಡಳ

ಪ್ರಭಾದೇವಿ, ಮುಂಬಯಿ-25,

# ಭಾರತದ ಸಂವಿಧಾನ

**ಪೀಠಿಕೆ**

**ಭಾರತದ ಪ್ರಜೆಗಳಾದ ನಾವು, ಭಾರತವನ್ನು ಒಂದು ಸಾರ್ವಭೌಮ**
**ಸಮಾಜವಾದಿ ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ** ನಿರ್ಮಿಸಲು
ಹಾಗೂ ಅದರ ಸಮಸ್ತ ನಾಗರಿಕರಿಗೆ :
ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ;**
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಶ್ರದ್ಧೆ
ಮತ್ತು ಉಪಾಸನಾ **ಸ್ವಾತಂತ್ರ್ಯ;**
ಸ್ಥಾನಮಾನ ಹಾಗೂ ಅವಕಾಶ **ಸಮಾನತೆಯು;**
ನಿಶ್ಚಿತವಾಗಿ ದೊರೆಯುವಂತೆ ಮಾಡಲು
ಮತ್ತು ವ್ಯಕ್ತಿಗೌರವವನ್ನು
ಹಾಗೂ ರಾಷ್ಟ್ರದ ಐಕ್ಯತೆ ಮತ್ತು ಏಕಾತ್ಮತೆಯನ್ನು
ಆಶ್ವಾಸನೆ ನೀಡುವ **ಬಂಧುತ್ವವನ್ನು**
ವೃದ್ಧಿಗೊಳಿಸಲು ದೃಢಸಂಕಲ್ಪದ ನಿರ್ಧಾರ ಮಾಡಿ ;
**ನಮ್ಮ ಸಂವಿಧಾನ ಸಭೆಯಲ್ಲಿ**
ಇಂದು ದಿನಾಂಕ ಇಪ್ಪತ್ತಾರನೆಯ ನವ್ಹೆಂಬರ, ೧೯೪೯ ನೆಯ ಇಸವಿ
**ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ ಮತ್ತು ಅಧಿನಿಯಮಿತ**
**ಗೊಳಿಸಿ ಸ್ವತ: ಅರ್ಪಿಸಿಕೊಂಡಿದ್ದೇವೆ.**

## ಭಾರತದ ಸಂವಿಧಾನ

ಭಾಗ 4 ಕ

## ನಾಗರಿಕರ ಮೂಲಭೂತ ಕರ್ತವ್ಯಗಳು

**ಅನುಚ್ಛೇದ 51 ಕ**

**ಮೂಲಭೂತ ಕರ್ತವ್ಯಗಳು-ಪ್ರತಿಯೊಬ್ಬ ಭಾರತೀಯ ನಾಗರಿಕನ ಈ ಕರ್ತವ್ಯಗಳು ಇರುತ್ತವೆಯೆಂದರೆ ಅವನು-**

(ಕ) ಪ್ರತಿಯೊಬ್ಬ ನಾಗರಿಕನು ಸಂವಿಧಾನವನ್ನು ಪಾಲಿಸಬೇಕು. ಸಂವಿಧಾನದಲ್ಲಿಯ ಆದರ್ಶಗಳು ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಗಳನ್ನು ಗೌರವಿಸಬೇಕು.
(ಖ) ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟಕ್ಕೆ ಸ್ಫೂರ್ತಿ ನೀಡುವ ಆದರ್ಶಗಳನ್ನು ಪಾಲಿಸಬೇಕು.
(ಗ) ದೇಶದ ಸಾರ್ವಭೌಮತ್ವ ಐಕ್ಯತೆ ಮತ್ತು ಸಮಗ್ರತೆಯನ್ನು ಸುರಕ್ಷಿತವಾಗಿಡುವ ಸಲುವಾಗಿ ಪ್ರಯತ್ನಶೀಲರಾಗಿರಬೇಕು.
(ಘ) ನಮ್ಮ ದೇಶದ ರಕ್ಷಣೆ ಮಾಡಬೇಕು. ದೇಶದ ಸೇವೆ ಮಾಡಬೇಕು.
(ಙ) ಎಲ್ಲ ಪ್ರಕಾರದ ಭೇದಭಾವಗಳನ್ನು ಮರೆತು ಒಗ್ಗಟ್ಟನ್ನು ಬೆಳೆಸಬೇಕು ಹಾಗೂ ಸಹೋದರ ಭಾವನೆಯನ್ನು ಉತ್ತೇಜಿಸಬೇಕು. ಸ್ತ್ರೀಯರ ಗೌರವಕ್ಕೆ ಚ್ಯುತಿ ತರುವಂತಹ ರೂಢಿಗಳನ್ನು ತ್ಯಜಿಸಬೇಕು.
(ಚ) ನಮ್ಮ ಸಮ್ಮಿಶ್ರ ಸಂಸ್ಕೃತಿಯ ಪರಂಪರೆಯನ್ನು ಕಾಪಾಡಬೇಕು.
(ಛ) ನೈಸರ್ಗಿಕ ಪರಿಸರವನ್ನು ಸಂರಕ್ಷಿಸಬೇಕು. ಸಜೀವ ಪ್ರಾಣಿಗಳ ಮೇಲೆ ದಯೆ ತೋರಿಸಿರಿ.
(ಜ) ವೈಜ್ಞಾನಿಕ ಮನೋಭಾವನೆ, ಮಾನವೀಯತೆ ಮತ್ತು ಜಿಜ್ಞಾಸು ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು.
(ಝ) ಸಾರ್ವಜನಿಕ ಆಸ್ತಿ-ಪಾಸ್ತಿಗಳನ್ನು ರಕ್ಷಿಸಬೇಕು. ಹಿಂಸಾಚಾರವನ್ನು ತ್ಯಜಿಸಬೇಕು.
(ಞ) ರಾಷ್ಟ್ರದ ಉತ್ತರೋತ್ತರ ಪ್ರಗತಿಯನ್ನು ಸಾಧಿಸಲು ವೈಯಕ್ತಿಕ ಹಾಗೂ ಸಾಮೂಹಿಕ ಚಟುವಟಿಕೆಗಳಲ್ಲಿ ಭಾಗವಹಿಸಬೇಕು.
(ಟ) 6 ರಿಂದ 14 ವರ್ಷ ವಯೋಮಾನದಲ್ಲಿಯ ತಮ್ಮ ಮಕ್ಕಳಿಗೆ ಪೋಷಕರು ಶಿಕ್ಷಣದ ಅವಕಾಶಗಳನ್ನು ಕಲ್ಪಿಸಿಕೊಡಬೇಕು.

## ರಾಷ್ಟ್ರಗೀತೆ

ಜನಗಣಮನ-ಅಧಿನಾಯಕ ಜಯ ಹೇ
ಭಾರತ-ಭಾಗ್ಯವಿಧಾತಾ ।

ಪಂಜಾಬ, ಸಿಂಧು, ಗುಜರಾತ, ಮರಾಠಾ,
ದ್ರಾವಿಡ, ಉತ್ಕಲ, ಬಂಗ,

ವಿಂಧ್ಯ, ಹಿಮಾಚಲ, ಯಮುನಾ, ಗಂಗಾ,
ಉಚ್ಛಲ ಜಲಧಿತರಂಗ,

ತವ ಶುಭ ನಾಮೇ ಜಾಗೇ, ತವ ಶುಭ ಆಶಿಸ ಮಾಗೇ,
ಗಾಹೇ ತವ ಜಯಗಾಥಾ,

ಜನಗಣ ಮಂಗಲದಾಯಕ ಜಯ ಹೇ,
ಭಾರತ-ಭಾಗ್ಯವಿಧಾತಾ ।

ಜಯ ಹೇ, ಜಯ ಹೇ, ಜಯ ಹೇ,
ಜಯ ಜಯ ಜಯ, ಜಯ ಹೇ ॥

## ಪ್ರತಿಜ್ಞೆ

ಭಾರತ ನನ್ನ ದೇಶ. ಭಾರತೀಯರೆಲ್ಲರೂ ನನ್ನ ಬಂಧು-ಭಗಿನಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ನನಗೆ ನನ್ನ ದೇಶದ ಸಮೃದ್ಧವಾದ ಹಾಗೂ ಬಹುವಿಧವಾದ ಪರಂಪರೆಯ ಬಗ್ಗೆ ಅಭಿಮಾನವಿದೆ. ಈ ಪರಂಪರೆಗೆ ತಕ್ಕವನಾಗಿರಲು ನಾನು ಯಾವಾಗಲೂ ಪ್ರಯತ್ನಿಸುತ್ತೇನೆ.

ನಾನು ನನ್ನ ತಾಯಿ-ತಂದೆ, ಗುರು-ಹಿರಿಯರನ್ನು ಆದರಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ನಡೆದುಕೊಳ್ಳುತ್ತೇನೆ.

ನಾನು ನನ್ನ ದೇಶ ಹಾಗೂ ನನ್ನ ದೇಶ ಬಾಂಧವರಲ್ಲಿ ನಿಷ್ಠೆ ಇಡುವೆನೆಂದು ಪ್ರತಿಜ್ಞೆ ಮಾಡುತ್ತೇನೆ. ಅವರ ಕಲ್ಯಾಣ ಹಾಗೂ ಉತ್ಕರ್ಷ ಇವುಗಳಲ್ಲಿಯೇ ನನ್ನ ಸುಖವುಂಟು.

# ಪ್ರಸ್ತಾವನೆ

ಆತ್ಮೀಯ ವಿದ್ಯಾರ್ಥಿಗಳೇ,

ಹೊಸ ಶೈಕ್ಷಣಿಕ ವರ್ಷ ಪ್ರಾರಂಭವಾಗಿದೆ. ಆರನೆಯ ತರಗತಿಯ 'ಬಾಲಭಾರತಿ' ಕನ್ನಡ ಭಾಷಾ ಪಠ್ಯಪುಸ್ತಕವನ್ನು ನಿಮ್ಮ ಕೈಯಲ್ಲಿ ನೋಡಿ ನೀವು ಸಂತೋಷಪಟ್ಟಿರಬೇಕು.

ಪಠ್ಯಪುಸ್ತಕದಲ್ಲಿರುವ ಎಲ್ಲ ಕವಿತೆಗಳನ್ನು ಹೇಳಲು ಮತ್ತು ಹಾಡಲು ನೀವು ಖಂಡಿತವಾಗಿಯೂ ಇಷ್ಟಪಡುತ್ತೀರಿ. ವಿವಿಧ ಪಾಠಗಳು ಮತ್ತು ಮಾಹಿತಿಯುಕ್ತ ಲೇಖನಗಳನ್ನು ಓದುವ ಮೂಲಕ ನೀವು ನಿಮ್ಮ ಸ್ವಂತ ಅನುಭವಗಳನ್ನು ನೆನಪಿಸಿಕೊಳ್ಳುತ್ತೀರಿ. ಪಠ್ಯಪುಸ್ತಕದಲ್ಲಿನ ಪಾಠಗಳು ಮತ್ತು ಕವಿತೆಗಳನ್ನು ಅರ್ಥಮಾಡಿಕೊಳ್ಳುವಾಗ ನಿಮ್ಮ ಕಲ್ಪನೆಯು ಉತ್ತೇಜಿಸಲ್ಪಡುತ್ತದೆ. ಪ್ರತಿ ಪಾಠ ಮತ್ತು ಕವಿತೆಗೆ ಒದಗಿಸಲಾದ ವರ್ಣರಂಜಿತ, ಆಕರ್ಷಕ ಮತ್ತು ಸಂದರ್ಭೋಚಿತ ಚಿತ್ರಗಳು ವಿಷಯವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ನಿಮಗೆ ಸಹಾಯ ಮಾಡುತ್ತದೆ. ಪಠ್ಯಪುಸ್ತಕದಲ್ಲಿರುವ ಚಿತ್ರಗಳನ್ನು ನೀವು ಖಂಡಿತವಾಗಿಯೂ ಇಷ್ಟಪಡುತ್ತೀರಿ. ಈ ಪಠ್ಯಪುಸ್ತಕವು ಅಧ್ಯಯನಕ್ಕಾಗಿ ಇದ್ದರೂ, ಇದು ನಿಮ್ಮ ಯೋಚಿಸುವ ಮತ್ತು ಕಾರ್ಯನಿರ್ವಹಿಸುವ ಸಾಮರ್ಥ್ಯವನ್ನು ಮತ್ತಷ್ಟು ಅಭಿವೃದ್ಧಿಪಡಿಸುತ್ತದೆ.

'ಹೊಂದಿಸೋಣ ಬಾ, ಶಬ್ದಾರ್ಥ, ಶಬ್ದಕೋಶದಲ್ಲಿ ಹುಡುಕಿ ಬರೆ'ಎಂಬ ಶೀರ್ಷಿಕೆಯಡಿಯಲ್ಲಿ ನೀಡಲಾದ ಪಾಠದಲ್ಲಿನ ಹೊಸ ಪದಗಳನ್ನು, ಸಂದರ್ಭಗಳನ್ನು ಮತ್ತೆ ಮತ್ತೆ ಓದಿ. ಅವುಗಳ ಅರ್ಥವನ್ನು ತಿಳಿದುಕೊಳ್ಳಿ. ಮಾತನಾಡುವಾಗ ಹೊಸ ಪದಗಳನ್ನು ಸರಿಯಾಗಿ ಬಳಸಿ. ಇದು ನಿಮಗೆ ಕನ್ನಡ ಭಾಷೆಯ ವಿಭಿನ್ನ ಪದಗಳನ್ನು ಪರಿಚಯಿಸುತ್ತದೆ ಮತ್ತು ಹೀಗಾಗಿ ನೀವು ಕನ್ನಡವನ್ನು ಚೆನ್ನಾಗಿ ಮಾತನಾಡಲು ಸಾಧ್ಯವಾಗುತ್ತದೆ. 'ನನಗೆ ತಿಳಿದಂತೆ, ಸಾಲುಗಳ ಮೇಲೆ ಚರ್ಚೆ, ಯೋಚಿಸಿ ಬರೆ' ಎಂಬ ಶೀರ್ಷಿಕೆಯಡಿಯಲ್ಲಿ ನೀಡಲಾದ ಜ್ಞಾನ ಮತ್ತು ತಿಳುವಳಿಕೆಯ ಕುರಿತು ವಿವಿಧ ಸ್ವ-ಅಧ್ಯಯನದ ಕೃತಿಗಳನ್ನು ಪರಿಹರಿಸುವ ಮೂಲಕ, ನೀವು ಪಾಠದ ವಿಷಯದ ಬಗ್ಗೆ ಹೆಚ್ಚಿನ ತಿಳುವಳಿಕೆಯನ್ನು ಪಡೆಯುತ್ತೀರಿ.

'ರಚಿಸೋಣ ಬಾ, ಕಲ್ಪನೆ ಮಾಡಿ ಬರೆ, ತಿಳಿಯೋಣ, ನಿನ್ನ ಹುಡುಕಾಟ' ಮುಂತಾದ ಚಟುವಟಿಕೆಗಳು ನಿಮ್ಮಲ್ಲಿ ಯೋಚಿಸುವ, ಕಲ್ಪಿಸಿಕೊಳ್ಳುವ, ಮಾಹಿತಿಯನ್ನು ಪಡೆಯುವ ಮತ್ತು ವಿವಿಧ ಸಮಸ್ಯೆಗಳನ್ನು ಪರಿಹರಿಸುವ ಆಸಕ್ತಿಯನ್ನು ಬೆಳೆಸುತ್ತವೆ. ಪುಸ್ತಕಗಳು, ಪತ್ರಿಕೆಗಳು, ವಿವಿಧ ಲೇಖನಗಳು ಮತ್ತು ಕಂಪ್ಯೂಟರ್‌ಗಳನ್ನು ಬಳಸುವ ಮೂಲಕ ನೀವು ಹೊಸ ಮತ್ತು ಹೆಚ್ಚುವರಿ ಮಾಹಿತಿಯನ್ನು ಪಡೆಯಲು ರೂಢಿ ಬೆಳೆಸಿಕೊಳ್ಳುತ್ತೀರಿ. 'ಪದಬಂಧ, ಅಂತ್ಯಕ್ಷರಿ' ಅಂತಹ ಕೃತಿಗಳಲ್ಲಿ ವಿಭಿನ್ನ ಅಕ್ಷರಗಳು ಮತ್ತು ಪದಗಳಿಂದ ಮಾಡಿದ ಸ್ವಯಂ ಅಧ್ಯಯನದಿಂದ ನಿಮ್ಮ ಶಬ್ದಸಂಪತ್ತು ಹೆಚ್ಚಿಸುವುದಕ್ಕೆ ಸಹಾಯವಾಗುತ್ತದೆ.

'ಭಾಷೆ ತಿಳಿಯೋಣ ಬಾ'ನಲ್ಲಿ ನಿಮಗೆ ಹೊಸ ಹೊಸ ವ್ಯಾಕರಣದ ಅಂಶಗಳ ಪರಿಚಯವಾಗುತ್ತದೆ. ಈ ಎಲ್ಲಾ ಚಟುವಟಿಕೆಗಳನ್ನು ಮಾಡುವುದರಿಂದ, ನೀವು ಶುದ್ಧ, ನಿಖರ ಮತ್ತು ಪರಿಣಾಮಕಾರಿ ಕನ್ನಡ ಭಾಷೆಯನ್ನು ಮಾತನಾಡಲು, ಓದಲು ಮತ್ತು ಬರೆಯಲು ಕಲಿಯುವಿರಿ. ನೀವು ಮನೆಯಲ್ಲಿ, ಶಾಲೆಯಲ್ಲಿ, ಆಟವಾಡುವಾಗ ಅಥವಾ ಸ್ನೇಹಿತರೊಂದಿಗೆ ಮಾತನಾಡುವಾಗ ಹೆಮ್ಮೆಯಿಂದ ಕನ್ನಡ ಭಾಷೆಯನ್ನು ಬಳಸುತ್ತೀರಿ. ನನ್ನ ವಿದ್ಯಾರ್ಥಿಗಳೇ, ಈ ಪಠ್ಯಪುಸ್ತಕದೊಂದಿಗೆ ಸ್ನೇಹ ಬೆಳೆಸಿಕೊಳ್ಳಿ, ಓದಿ, ಅರ್ಥಮಾಡಿಕೊಳ್ಳಿ, ಮಾತನಾಡಿ, ಬರೆಯಿರಿ ಮತ್ತು ಸಂತೋಷದಿಂದ ಕಲಿಯಿರಿ.

ನಿಮ್ಮ ಶೈಕ್ಷಣಿಕ ಪ್ರಯಾಣ ಮತ್ತು ಕನ್ನಡ ಭಾಷೆಯಲ್ಲಿ ಪ್ರಗತಿಗಾಗಿ ನಿಮಗೆ ಹೃತ್ಪೂರ್ವಕ ಶುಭಾಶಯಗಳು!

(ಅನುರಾಧಾ ಓಕ್)

ಸಂಚಾಲಕರು

ಮಹಾರಾಷ್ಟ್ರ ರಾಜ್ಯ ಪಠ್ಯಪುಸ್ತಕ ನಿರ್ಮಾಣ ಮತ್ತು ಪಠ್ಯಕ್ರಮ ಸಂಶೋಧನಾ ಮಂಡಳಿ, ಪುಣೆ.

ಪುಣೆ

ದಿನಾಂಕ : ೦೧ ಮೇ ೨೦೨೬

ಭಾರತೀಯ ಸೌರ : ವೈಶಾಖ ಶು. ೧೧, ಶಕೆ ೧೯೪೮

ಮಹಾರಾಷ್ಟ್ರ ದಿನ

# ಅಧ್ಯಯನ ಕ್ಷಮತೆ ಮತ್ತು ಅಧ್ಯಯನ ನಿಷ್ಪತ್ತಿ

| CG | ಕ್ಷಮತೆಗಳು | ಅಧ್ಯಯನ ಕ್ಷಮತೆಗಳ ಕ್ರ. ನಿಷ್ಪತ್ತಿ | ವಿವರಣೆ | ಪುಟ ಸಂಖ್ಯೆ |
|---|---|---|---|---|
| CG-1: | C-1.1: | 1.1.1: | ಕೇಳಿದ ಮತ್ತು ಓದಿದ ಸುದ್ದಿಗಳಲ್ಲಿಯ ಮುಖ್ಯಾಂಶ ಮತ್ತು ಸಾರಾಂಶ ಹೇಳುತ್ತಾನೆ. (ವೃತ್ತ, ಲೇಖನ, ಸಂಪಾದಕೀಯ ಇತ್ಯಾದಿ) | 26,32,51,67 |
| | | 1.1.2: | ಜಾಹೀರಾತುಗಳನ್ನು ತಿಳಿದುಕೊಂಡು ಓದುತ್ತಾನೆ ಮತ್ತು ಜಾಹೀರಾತುಗಳ ಮೇಲೆ ಆಧರಿಸಿದ ಪ್ರಶ್ನೆಗಳಿಗೆ ಉತ್ತರಿಸುತ್ತಾನೆ. | 50, 96 |
| | C-1.2: | 1.2.1: | ಪರಿಚಿತ ವ್ಯಕ್ತಿಗಳ ಸಂದರ್ಶನ, ಸಂದರ್ಶನದ ನಿಯೋಜನೆ/ಆಯೋಜನೆ. | 90, 94 |
| | C-1.3: | 1.3.1: | ಯೋಗ್ಯ ಭಾಷೆಯನ್ನು ಉಪಯೋಗಿಸಿ ಆಶಯಾಧಾರಿತ ಸಾಮಾಜಿಕ ಅನುಭವ ವಿಷಯದಲ್ಲಿ ಅನೌಪಚಾರಿಕ ಮತ್ತು ಔಪಚಾರಿಕ ಪ್ರಶ್ನೆಗಳನ್ನು ಕೇಳುತ್ತಾನೆ. | 89, 93 |
| | C-1.4: | 1.4.1: | ಯೋಗ್ಯ ಶೈಲಿಯನ್ನು ಉಪಯೋಗಿಸಿ ವಿವಿಧ ಉದ್ದೇಶಕ್ಕಾಗಿ ಅನೌಪಚಾರಿಕ ಪತ್ರ, ವರ್ಣನಾತ್ಮಕ ನಿಬಂಧ ಮತ್ತು ವರದಿ ಇವುಗಳ ಲೇಖನ ಮಾಡುತ್ತಾನೆ. | 11, 66, 88, 89, 93 |
| | C-1.5: | 1.5.1: | ದೃಕ್ ಶ್ರಾವ್ಯ ಮಾಧ್ಯಮಕ್ಕಾಗಿ ವಿಷಯಾನುರೂಪ ಮತ್ತು ಪ್ರಸಂಗಾನುಸಾರ ಘೋಷ ವಾಕ್ಯ, ಸಂದೇಶ ಮತ್ತು ಸಂವಾದ ಇವುಗಳ ಲೇಖನ ಮಾಡುತ್ತಾನೆ. | 6, 25, 26, 43, 48 |
| CG-2: | C-2.1: | 2.1.1: | ವಿವಿಧ ಸಂಸ್ಕೃತಿ ಮತ್ತು ಕಾಲಖಂಡದಲ್ಲಿಯ ಸಾಹಿತ್ಯದಲ್ಲಿಯ ವಿವಿಧ ಪ್ರಕಾರದ ರಸಾಸ್ವಾದವನ್ನು ತೆಗೆದುಕೊಳ್ಳುತ್ತಾನೆ ಮತ್ತು ವೈಶಿಷ್ಟ್ಯಗಳನ್ನು ಹೇಳುತ್ತಾನೆ (ಜನಪದ ಸಾಹಿತ್ಯ ಮತ್ತು ಕರ್ನಾಟಕದಲ್ಲಿಯ ವಿವಿಧ ಆಡು ಭಾಷೆಯಲ್ಲಿಯ ಸಾಹಿತ್ಯ) | 27, 31,32, 33, 43, 52 |
| | C-2.2: | 2.2.1: | ಪ್ರಾಸ, ಅನುಪ್ರಾಸ, ಶ್ಲೇಷ, ಶಬ್ದಾಲಂಕಾರಗಳನ್ನು ಗುರುತಿಸಿ ಸಂಬೋಧನೆ ಸ್ಪಷ್ಟಪಡಿಸುತ್ತಾನೆ. | 73, 85, 95 |
| | | 2.2.2: | ಪಠಿತ ಪಠ್ಯಾಂಶ, ಗಾದೆ ಮಾತುಗಳು, ಪಡೆನುಡಿ ಇವುಗಳ ಅರ್ಥ ಹೇಳಿ ವಾಕ್ಯದಲ್ಲಿ ಉಪಯೋಗ ಮಾಡುತ್ತಾನೆ, ವಿವಿಧ ಪದಬಂಧಗಳನ್ನು ಬಿಡಿಸುತ್ತಾನೆ. | 16, 17, 78, 97, 98, 99 |
| | C-2.3: | 2.3.1: | ಮನೆ ಮತ್ತು ಪರಿಸರದಲ್ಲಿ ಆಚರಿಸಲಾಗುವ ಹಬ್ಬ ಮತ್ತು ಉತ್ಸವದ ವಿಷಯಗಳ ಬಗ್ಗೆ ಸ್ವಂತದ ಕಲ್ಪನೆ ಅಭಿಪ್ರಾಯ ಮೌಖಿಕ ಮತ್ತು ಲಿಖಿತ ಸ್ವರೂಪದಲ್ಲಿ ವ್ಯಕ್ತ ಮಾಡುತ್ತಾನೆ. | 8, 11, 27, 31 |
| CG-3: | C-3.1: | 3.1.1: | ನಾಮ, ನಾಮಪದದ ಪ್ರಕಾರಗಳು, ಸರ್ವನಾಮ, ಸರ್ವನಾಮದ ಪ್ರಕಾರಗಳು, ವಿಶೇಷಣ ಮತ್ತು ವಿಶೇಷ್ಯ ವಿಶೇಷಣದ ಪ್ರಕಾರ, ಕ್ರಿಯಾಪದ ಮತ್ತು ಕ್ರಿಯಾಪದದ ಪ್ರಕಾರಗಳು, ಶುದ್ಧ ಲೇಖನದ ನಿಯಮ ಈ ವ್ಯಾಕರಣ ಘಟಕಗಳ ಮಾಹಿತಿ ಪಡೆಯುತ್ತಾನೆ ಮತ್ತು ಅದನ್ನು ಬರಹದಲ್ಲಿ ಯೋಗ್ಯ ಉಪಯೋಗವನ್ನು ಮಾಡುತ್ತಾನೆ. | 7, 12, 17, 21, 32, 34, 40, 47, 54, 61, 66, 68, 72, 78, 82 |
| | C-3.2: | 3.2.1: | ಕಥೆ ಮತ್ತು ಕವಿತೆ ಈ ಸಾಹಿತ್ಯ ಪ್ರಕಾರದ ವೈಶಿಷ್ಟ್ಯಗಳು, ಶೈಲಿ, ಮಹತ್ವದ ಮುಖ್ಯಾಂಶಗಳನ್ನು ಗುರುತಿಸುತ್ತಾನೆ. | 1, 8, 19, 20, 52, 97 |
| | | 3.3.1: | ಸ್ವಭಾಷೆಯಲ್ಲಿ ಕಥೆ, ಕವಿತೆ ಬರೆಯುತ್ತಾನೆ. | 3, 11, 17, 20, 47, 82, |
| CG-4: | C-4.1: | 4.1.1: | ವಿವಿಧ ಸಾಹಿತ್ಯ ಪ್ರಕಾರದಲ್ಲಿಯ ಪುಸ್ತಕಗಳನ್ನು ಓದಿ ಸಾರಾಂಶ ಹೇಳುತ್ತಾನೆ ಮತ್ತು ಬರೆಯುತ್ತಾನೆ. | 43, 51, 79, 82 |
| | C-4.2: | 4.2.1: | ಪ್ರಕಲ್ಪಗಳ ಉಪಕ್ರಮಗಳಿಗಾಗಿ ಶಿಕ್ಷಕರ ಸಹಾಯದಿಂದ ಸಂದರ್ಭ ಸಾಹಿತ್ಯ ಹುಡುಕುತ್ತಾನೆ. | 3, 17, 21, 32, 38, 43, 48,55,66,79,88,94,99 |
| | C-4.3: | 4.3.1: | ವಿವಿಧ ನಿಯತಕಾಲಿಕೆಯಲ್ಲಿಯ ಘಟನೆಗಳನ್ನು ಓದಿ ಸ್ವಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾನೆ. | 7, 50, 67, 79 |

| | | | | |
|---|---|---|---|---|
| CG-5: | C-5.1: | 5.1.1: | ಭಾಷೆಯಲ್ಲಿಯ ವರ್ಣಮಾಲೆಯಲ್ಲಿಯ ಸ್ವರ ಮತ್ತು ವ್ಯಂಜನಗಳ ಉಚ್ಚಾರ ಇವುಗಳ ಬಗ್ಗೆ ಮೂಲಭೂತ ಮಾಹಿತಿ ಹೇಳುತ್ತಾನೆ. | 18, 21 |
| | C-5.2: | 5.2.1: | ಭಾಷಣವು ಹೆಚ್ಚೆಚ್ಚು ಮನೋರಂಜಕ ಮತ್ತು ಆನಂದದಾಯಿಯಾಗಿರಲು ಭಾಷೆಯಲ್ಲಿಯ ಯಮಕ, ಅನುಪ್ರಾಸ, ಅಲಂಕಾರದ ಉಪಯೋಗ ಮಾಡುತ್ತಾನೆ. | 83, 95 |
| | C-5.3: | 5.3.1: | ವಿವಿಧ ಭಾಷಿಕ ಆಟಗಳ ಮಾಹಿತಿ ಮಾಡಿಕೊಳ್ಳುತ್ತಾನೆ. (ಉದಾ: ವಿನೋದ, ಅಕ್ಷರಗಳನ್ನು ಹಿಂದೆ ಮುಂದೆ ಮಾಡಿಕೊಂಡು ಹೊಸ ಶಬ್ದ ತಯಾರಿಸುತ್ತಾನೆ). | 3, 12, 17, 21, 32, 48, 54, 61, 99 |
| | C-5.4: | 5.4.1: | ಸರಳ ಪದಬಂಧ, ಶಬ್ದಗಳ ಆಟ ಸ್ವತಃ ತಯಾರಿಸುತ್ತಾನೆ. | 16, 32, 61, 99 |

**ಪುಸ್ತಕವನ್ನು ಅವಲೋಕಿಸುವಾಗ..........**

★ ರಾಷ್ಟ್ರೀಯ ಶಿಕ್ಷಣ ಧೋರಣೆ 2020 ರ ಮೇಲೆ ಆಧಾರಿತವಾದ ಈ ಪಠ್ಯಪುಸ್ತಕವು ಮಕ್ಕಳ ಭಾಷಾ ಕೌಶಲ್ಯ ವಿಕಾಸದಲ್ಲಿ ಮಹತ್ವಪೂರ್ಣ ಪಾತ್ರ ವಹಿಸಲಿದೆ ಈ ಪಠ್ಯಪುಸ್ತಕದಿಂದ ಮಕ್ಕಳ ಪ್ರಾಥಮಿಕ ಶಿಕ್ಷಣವನ್ನು ಸುಲಭಗೊಳಿಸಲಾಗಿದೆ ಇದರಲ್ಲಿ ಮಕ್ಕಳ ಅಧ್ಯಯನ ಮತ್ತು ಅಭ್ಯಾಸದ ಹಂತಗಳನ್ನು ಗಮನದಲ್ಲಿಟ್ಟುಕೊಂಡು ವಿವಿಧ ವಿಷಯಗಳು ಸೇರಿಸಲಾಗಿದೆ.

★ ವಿವಿಧ ವಿಷಯಗಳು ಪರಿಸ್ಥಿತಿ, ಘಟನೆ ,ಅನುಭವಗಳು ,ಕಥೆ, ಕವಿತೆ ಇತ್ಯಾದಿ ಸ್ವಂತ ಪದ್ಧತಿಯಿಂದ ಮತ್ತು ತಮ್ಮ ಭಾಷೆಯಲ್ಲಿ ಹೇಳುವುದು ಕೇಳುವುದು ಇವುಗಳಿಗೆ ಹೆಚ್ಚಿನ ಅವಕಾಶವನ್ನು ಒದಗಿಸಿ ಕೊಡಲಾಗಿದೆ.

★ ಕವಿತೆಗಳು ಮನೋರಂಜನಾತ್ಮಕ ಮತ್ತು ಲಯಬದ್ಧವಾಗಿವೆ.ಪ್ರಕೃತಿಯ ಸೊಬಗನ್ನು ವರ್ಣಿಸುವ 'ಅರ್ಚನೆ' , ತಾಯ್ನಾಡಿನ ಮುನ್ನಡೆಗಾಗಿ ಸಂದೇಶ ನೀಡುವ 'ಭಾಗ್ಯರವಿ', ಕನ್ನಡ ನಾಡು ನುಡಿಯ ಐಕ್ಯತೆಗಾಗಿ 'ಹಚ್ಚೇವು ಕನ್ನಡದ ದೀಪ' ಕನಕದಾಸರ ಕೀರ್ತನೆ, ಹಾಸ್ಯ ಕವಿತೆ 'ಗಿರಗಿಟಿ', ವೀರವನಿತೆ ರಾಣಿ ಚೆನ್ನಮ್ಮರ ಬಗ್ಗೆ 'ಕನ್ನಡದ ಕಣ್ಮಣಿ' ಮತ್ತು ದೇಶಭಕ್ತಿಯನ್ನು ಸಾರುವ 'ಭವ್ಯ ಭಾರತ' ಈ ಎಲ್ಲಾ ಕವಿತೆಗಳು ಮಕ್ಕಳ ಮನವನ್ನು ಮುದಗೊಳಿಸುವವು ಮತ್ತು ಮಕ್ಕಳಿಗೆ ಸ್ವತಃ ಕವಿತೆ ರಚಿಸಲು ಪ್ರೇರೇಪಿಸುವವು.

★ ಗದ್ಯದಲ್ಲಿ ಉತ್ಸವದ ಸಲುವಾಗಿ 'ಹುತ್ತರಿ ಹಬ್ಬ', ಕಂಸಾಳೆಯ ಬಗ್ಗೆ ವರ್ಣನೆ ಕೊಡಲಾಗಿದೆ. 'ಒಡನಾಟ', ಮಿಡಿದ ಮನ, ಸೋತು ಗೆದ್ದವ, ಧನಾತ್ಮಕ ದೃಷ್ಟಿ, ಬಣ್ಣ ಬಯಲಾಯಿತು ಈ ಪಾಠಗಳು ಮಕ್ಕಳಿಗೆ ಒಳ್ಳೆಯ ಸಂದೇಶಗಳನ್ನು ನೀಡುವವು ಮತ್ತು ಜೀವ ಉಳಿಸಿದ ಬಾಲಕರು, ನಭದ ನಾರಿ ಸುನೀತಾ, ಮುಂತಾದ ಗದ್ಯಗಳಿಂದ ಮಕ್ಕಳಲ್ಲಿ ಸಂಯಮ, ಸಮಯಪ್ರಜ್ಞೆ, ಧೈರ್ಯ, ಸಾಹಸ, ದೇಶಪ್ರೇಮ, ಪರಿಸರ ರಕ್ಷಣೆ, ವೈಜ್ಞಾನಿಕ ಮನೋಭಾವವು ಬೆಳೆಯುವುದು.

★ ಮಕ್ಕಳಿಗೆ ಮುಖ್ಯಾಂಶ ಗುರುತಿಸಲು, ಸಾರಾಂಶ ಬರೆಯಲು, ಜಾಹಿರಾತು ವಾಚನ, ಸಂದರ್ಶನ, ಪ್ರಶ್ನೆ ಕೇಳಲು, ಘೋಷವಾಕ್ಯ ತಯಾರಿಸಲು, ಭಿತ್ತಿ ಚಿತ್ರ ತಯಾರಿಸಲು, ಭಾಷಿಕ ಆಟ ಮತ್ತು ವರದಿ, ಪತ್ರ ಲೇಖನ, ಇ-ಮೇಲ್ ತಯಾರಿಸುವ ಕೃತಿಗಳನ್ನು ಅಳವಡಿಸಲಾಗಿದೆ.

★ ವ್ಯಾಕರಣದಲ್ಲಿ ನಾಮಪದ, ಸರ್ವನಾಮ, ವಿಶೇಷಣ, ಕ್ರಿಯಾಪದ, ಶುದ್ಧ ಲೇಖನದ ನಿಯಮಗಳು, ವಾಕ್ಯ ಪ್ರಕಾರಗಳು, ಸ್ವರ-ವ್ಯಂಜನ ಉಚ್ಚಾರ, ವಿಭಕ್ತಿ ಪ್ರತ್ಯಯಗಳು, ಸಂಧಿ,ಸಮಾಸ ಮತ್ತು ಅಲಂಕಾರಗಳನ್ನು ಸುಲಭವಾಗಿ ಪರಿಚಯಿಸಲಾಗಿದೆ.



**ಶಿಕ್ಷಕರಿಗೆ ಸೂಚನೆ:** ಅಗತ್ಯವಿರುವ ವಿದ್ಯಾರ್ಥಿಗಳಿಗೆ ಅಧ್ಯಯನ-ಅಧ್ಯಾಪನ ಪ್ರಕ್ರಿಯೆಯನ್ನು ನಡೆಸುವಾಗ ಸಾಂಕೇತಿಕ ಭಾಷೆ (ಸೈನ್ ಲ್ಯಾಂಗ್ವೇಜ್) ಮತ್ತು ಇತರ ಪೂರಕ ಅಧ್ಯಾಪನ ಪದ್ಧತಿಗಳನ್ನು ಬಳಸಿಕೊಳ್ಳಬೇಕು. ವಿಶೇಷ ಅಗತ್ಯವಿರುವ ವಿದ್ಯಾರ್ಥಿಗಳಿಗೆ ಅವರಿಂದ ಸಾಧ್ಯವಾಗುವ ಯಾವುದೇ ಪದ್ಧತಿಯಿಂದ ವ್ಯಕ್ತಪಡಿಸಲು ಅವಕಾಶವನ್ನು ಒದಗಿಸಿ ಕೊಡಬೇಕು.

ಆರನೆಯ ಇಯತ್ತೆ ಕನ್ನಡ ಬಾಲಭಾರತಿ

# ಪರಿವಿಡಿ


| ಅ.ಕ್ರ. | ಭಾಗ - (1) | |
|---|---|---|
| 1) | ಅರ್ಚನೆ (ಕವಿತೆ) - ಜಂಬುನಾಥ ಕಂಚ್ಯಾಣಿ | 1 |
| 2) | ಒಡನಾಟ | 4 |
| 3) | ಮಿಡಿದ ಮನ | 8 |
| 4) | ಸೋತು ಗೆದ್ದವ - ಡಾ|| ಶ್ರೀಮತಿ ಜಯಶ್ರೀ ಎಸ್ ಮುದಿಗೌಡರ | 14 |

| ಅ.ಕ್ರ. | ಭಾಗ - (2) | |
|---|---|---|
| 5) | ಭಾಗ್ಯರವಿ (ಕವಿತೆ) - ಡಿ.ಎನ್. ಅಕ್ಕಿ | 19 |
| 6) | ಧನಾತ್ಮಕ ದೃಷ್ಟಿ | 22 |
| 7) | ಹುತ್ತರಿ ಹಬ್ಬ | 27 |
| 8) | ಹಚ್ಚೇವು ಕನ್ನಡದ ದೀಪ (ಕವಿತೆ) - ಡಿ.ಎಸ್. ಕರ್ಕಿ | 35 |
| 9) | ಮೈದಾನದ ರಾಜ ಹೆಬ್ಬಕ | 43 |







| ಅ.ಕ್ರ. | ಭಾಗ - (3) | |
|---|---|---|
| 10) | ತಲ್ಲಣಿಸದಿರು ಕಂಡ್ಯ ತಾಳುಮನವೇ (ಕವಿತೆ) - ಕನಕದಾಸ | 51 |
| 11) | ಲೋಕಕವಿ ರತ್ನ ಹಲ್ದಾರ್‌ನಾಗ್ | 56 |
| 12) | ನಭದ ನಾರಿ ಸುನೀತಾ | 62 |
| 13) | ಗಿರಿಗಿಟಿ (ಕವಿತೆ) - ಕೆಮ್ಮಿಂಜೆ ಸುಬ್ರಾಯ್ ಪಾಧ್ಯಾಯ | 69 |
| 14) | ಜೀವ ಉಳಿಸಿದ ಬಾಲಕರು | 75 |

| ಅ.ಕ್ರ. | ಭಾಗ - (4) | |
|---|---|---|
| 15) | ಕನ್ನಡದ ಕಣ್ಮಣಿ (ಕವಿತೆ) | 80 |
| 16) | ಐತಿಹಾಸಿಕ ಪಯಣ | 84 |
| 17) | ಸಂದರ್ಶನ | 90 |
| 18) | ಬಣ್ಣ ಬಯಲಾಯಿತು | 97 |
| 19) | ಭವ್ಯ ಭಾರತ (ಕವಿತೆ) - ಕೆ. ರಾಜಕುಮಾರ | 100 |
| • | ಶಬ್ದಕೋಶ | 101 |










ಕೇಳು   ಮಾತು/ಚರ್ಚೆ   ಓದು   ಬರೆ   ಹಾಡು   ಅಭಿನಯಿಸು   ಕಥೆ ಹೇಳು   ಶೋಧಿಸು   ಶಬ್ದಕೋಶ   ನಾಲಿಗೆ ನುಲಿ   ಸನ್ನೆ

# 1. ಅರ್ಚನೆ

**ಕವಿ ಪರಿಚಯ –** ಮಕ್ಕಳ ಸಾಹಿತ್ಯ ರಚಿಸಿದವರಲ್ಲಿ ಪ್ರಖ್ಯಾತರಾದವರು ಜಂಬುನಾಥ ಕಂಚ್ಯಾಣಿಯವರು. ಇವರು ಹುಟ್ಟಿದ್ದು ಬಾಗಲಕೋಟೆ ಜಿಲ್ಲೆಯ ಬೇವೂರು. ತಂದೆ ಶರಣಪ್ಪ ತಾಯಿ ಬಸವಂತೆವ್ವ. ಸ್ನಾತಕೋತ್ತರ ಪದವಿಧರರಾದ ಇವರು ಪ್ರಸ್ತುತ ಪ್ರೌಢಶಾಲೆಯ ಮುಖ್ಯ ಶಿಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಮಕ್ಕಳಿಗಾಗಿ ಅನೇಕ ಪುಸ್ತಕಗಳನ್ನು ಬರೆದಿದ್ದಾರೆ ಅವುಗಳಲ್ಲಿ ಮುಖ್ಯವಾದವುಗಳು ನಂದನವನ, ಇಣಚಿ, ಚುಕುಬುಕು ರೈಲು, ಭುವನೇಶ್ವರಿ ಇತ್ಯಾದಿ. ಮೇಲಿನ ಕವಿತೆಯನ್ನು ಅವರ 'ನಂದನವನ' ಕವಿತಾ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.

ಮನುಷ್ಯನು ತನ್ನ ಶ್ರದ್ಧಾ ಭಕ್ತಿಯನ್ನು ತೋರಿಸಿಕೊಳ್ಳಲು ಪೂಜೆ–ಪುನಸ್ಕಾರಗಳನ್ನು ಮಾಡುತ್ತಾನೆ. ಅದೇ ರೀತಿ ಪ್ರಕೃತಿಯು ಕೂಡ ಜಗತ್ತಿಗೆ ಬೆಳಕು ಮತ್ತು ಜೀವನ ಕೊಡುವ ಸೂರ್ಯನಿಗೆ ತನ್ನದೇ ಆದ ರೀತಿಯಲ್ಲಿ ಅರ್ಚನೆ ಮಾಡುತ್ತದೆ ಎಂದು ಕವಿ ಜಂಬುನಾಥ ಕಂಚ್ಯಾಣಿ ಅವರು ಈ ಪದ್ಯದಲ್ಲಿ ಹೇಳಿದ್ದಾರೆ.

ಸಕಲ ಜೀವ ರಾಶಿಗಳನು ಪೊರೆವ ದೇವನೆ
ಮಲೆಯ ಕಾಡಿನಲ್ಲಿ ನಿನಗೆ ನಿತ್ಯ ಅರ್ಚನೆ

ಬೆಳಗಿನಲ್ಲಿ ರೆಕ್ಕೆ ಬಡಿದು ಹಕ್ಕಿ ಬಳಗವು
ಉದಯರಾಗ ಹಾಡಿದಾಗ ಸುಪ್ರಭಾತವು

ಮುಗಿಲು ಮಳೆಯ ಸುರಿಸಿದಾಗ ನಿನಗೆ ಮಜ್ಜನ
ರವಿಯ ಪ್ರಥಮ ಹೊನ್ನಗಿರಣ ಗಂಧ ಲೇಪನ

ಬಿಲ್ವಪತ್ರಿ ಸುಮದ ರಾಶಿ ಅಡಿಗೆ ಅರ್ಪಣ
ಮಾವು ಹಲಸು ಮಧುರ ಜೇನು ಭೋಜ್ಯ ತರ್ಪಣ

ಸಿಂಹ ಚಿರತೆ ಗುಡುಗಲದುವೆ ಶಂಖವಾದನ
ಶಿರದ ಮೇಲೆ ಮೇರು ಗಿರಿಯ ಮಕುಟ ಕಾಂಚನ

ಕಾಡು ಬಳ್ಳಿ ಚಿಗುರು ಎಲೆಯು ಹಸಿರು ತೋರಣ
ಗರಿಯ ಬಿಚ್ಚಿ ನವಿಲು ಕುಣಿಯೆ ತನನ ರಿಂಗಣ

ಗಿರಿಯನೇರಿ ಬರುವನದೋ ದೀಪ ದಿನಕರ
ತಲೆಯ ಮೇಲೆ ತೆಂಗು ಕಂಗುಗರಿಯ ಚಾಮರ

–ಜಂಬುನಾಥ ಕಂಚ್ಯಾಣಿ



## ನನಗೆ ತಿಳಿದಂತೆ

**ಕೆಳಗೆ ಕೊಟ್ಟ ಪ್ರಶ್ನೆಗಳ ಸರಿಯಾದ ಉತ್ತರ ಯಾವುದಿದೆ? ಅದರ ಎದುರಿಗೆ ಚುಕ್ಕಿ (★) ಈ ಚಿಹ್ನೆಯನ್ನು ತೋರಿಸಿ ಆಯ್ಕೆ ಮಾಡಿದ ಉತ್ತರಗಳ ಕಾರಣ ಹೇಳು.**

**ಅ) ಕಾಡಿನಲ್ಲಿ ಅರ್ಚನೆ ಯಾರಿಗೆ ಮಾಡುತ್ತಾರೆ?**

1) ದೇವರಿಗೆ ☐ 2) ಮಾನವನಿಗೆ ☐ 3) ಪ್ರಾಣಿಗೆ ☐ 4) ಪಕ್ಷಿಗೆ ☐

**ಆ) ಹಕ್ಕಿ ಬಳಗವು ಉದಯರಾಗ ಹಾಡಿದಾಗ ಏನಾಗುವುದು?**

1) ಮಧ್ಯಾಹ್ನ ☐ 2) ಸುಪ್ರಭಾತ ☐ 3) ರಾತ್ರಿ ☐ 4) ಸಂಜೆ ☐

**ಇ) ಸಿಂಹ ಚಿರತೆ ಗುಡುಗಿದಾಗ ಏನಾಗುತ್ತದೆ?**

1) ಶಂಖವಾದನ ☐ 2) ಗಂಟೆವಾದನ ☐ 3) ಗೆಜ್ಜೆನಾದ ☐ 4) ವೀಣಾವಾದನ ☐

## ಹೊಂದಿಸೋಣ ಬಾ

ಕೆಳಗೆ ಕೊಟ್ಟ ಶಬ್ದಗಳನ್ನು ಸರಿಯಾದ ಅರ್ಥ ಅಥವಾ ಸಂದರ್ಭಗಳೊಂದಿಗೆ ಹೊಂದಿಸಿರಿ. ಇದಕ್ಕಾಗಿ ನೀವು ಶಬ್ದಕೋಶ, ಅಂತರ್ಜಾಲ ಇಲ್ಲವೇ ನಿಮ್ಮ ಶಿಕ್ಷಕರ ಸಹಾಯವನ್ನು ತೆಗೆದುಕೊಳ್ಳಿರಿ.

| ಶಬ್ದಗಳು | ಅರ್ಥ/ಸಂಧರ್ಭ |
|---|---|
| 1) ಅರ್ಚನೆ | ತಲೆಯ ಮೇಲೆ ಧರಿಸಿದ ಆಭರಣ |
| 2) ಉದಯರಾಗ | ಭಕ್ತಿ ಪೂರ್ವಕವಾಗಿ ಅರ್ಪಿಸುವ ಸೇವೆ |
| 3) ಮುಗಿಲು ಮಳೆ | ಸುಂದರವಾದ ಬೀಸಣಿಕೆ |
| 4) ಮಕುಟ | ಮಳೆಯನ್ನು ಹೊತ್ತು ತಂದ ಮೋಡ |
| 5) ಚಾಮರ | ಸೂರ್ಯನು ಉದಯಿಸುವಾಗ ಹಾಡುವ ರಾಗ |

## ಸಾಲುಗಳ ಮೇಲೆ ಚರ್ಚೆ :

ಪದ್ಯದಲ್ಲಿಯ ಕೆಲವು ಸಾಲುಗಳನ್ನು ಕೆಳಗೆ ನೀಡಲಾಗಿದೆ. ಈ ಸಾಲುಗಳನ್ನು ಗಮನವಿಟ್ಟು ಓದಿ ವಿಚಾರ ಮಾಡಿರಿ. ನೀವು ಈ ಸಾಲುಗಳಿಂದ ಏನನ್ನು ಅರ್ಥೈಸಿಕೊಂಡಿರಿ. ನಿಮ್ಮ ವಿಚಾರಗಳನ್ನು ಗುಂಪಿನಲ್ಲಿ ಹಂಚಿಕೊಂಡು ಬರೆಯಿರಿ.

1) ''ಬಿಲ್ವಪತ್ರಿ ಸುಮದ ರಾಶಿ ಅಡಿಗೆ ಅರ್ಪಣ''

2) ''ಕಾಡು ಬಳ್ಳಿ ಚಿಗುರು ಎಲೆಯು ಹಸಿರು ತೋರಣ''

## ಯೋಚಿಸಿ ಬರೆ.

ಕವಿತೆಯನ್ನು ಇನ್ನೊಮ್ಮೆ ಓದು ಮತ್ತು ಕೆಳಗೆ ಕೊಟ್ಟ ಪ್ರಶ್ನೆಗಳ ಮೇಲೆ ವಿಚಾರ ಮಾಡಿ ಬರೆ.

1. ರವಿಯಿಂದ ಎಂತಹ ಕಿರಣಗಳು ಬರುವುವು?

2. ಸೂರ್ಯೋದಯದ ವರ್ಣನೆಯನ್ನು ಬರೆಯಿರಿ.

❖ **ಮಕುಟದಂತೆ ಇನ್ನೂ ಯಾವ ಯಾವ ಆಭರಣಗಳು ನಿನಗೆ ಗುರುತಿವೆ, ಅವುಗಳ ಹೆಸರುಗಳನ್ನು ಬರೆ.**

### ರಚಿಸೋಣ ಬಾ

ಪ್ರಾಸಪದಗಳನ್ನು ಉಪಯೋಗಿಸಿ ಕವಿತೆಯನ್ನು ರಚಿಸಿ ಅದಕ್ಕೆ ತಲೆಬರಹವನ್ನು ಕೊಡು.

### ಕಲ್ಪನೆ ಮಾಡಿರಿ. ಗುಂಪಿನಲ್ಲಿ ಚರ್ಚಿಸಿರಿ.

i) ದಿನನಿತ್ಯ ಏಕೆ ಅರ್ಚನೆ ಮಾಡುತ್ತಾರೆ?

ii) ಯಾರಿಗೆ ಅರ್ಚನೆ ಮಾಡುತ್ತಾರೆ?

iii) ಹೇಗೆ ಅರ್ಚನೆ ಮಾಡುತ್ತಾರೆ?

### ಪದರಚನೆ

ಕಂಸಿನಲ್ಲಿನ ಪದಗಳಿಗೆ 'ಸೂರ್ಯ' ಪದವನ್ನು ಜೋಡಿಸಿ ಹೊಸ ಅರ್ಥಪೂರ್ಣ ಪದವನ್ನು ತಯಾರಿಸು.

(ಕಿರಣ, ಉದಯ, ಅಸ್ತ, ಮಂಡಲ, ನಮಸ್ಕಾರ, ಪುತ್ರ, ಗ್ರಹಣ, ಪ್ರಕಾಶ)




### ನಿನ್ನ ಹುಡುಕಾಟ

**ಪ್ರಕೃತಿಯ ಕುರಿತಾದ ಹಾಡುಗಳನ್ನು ಸಂಗ್ರಹಿಸಿರಿ.**

**ಒಗಟು**

ಗುಂಡಾಗಿರುವೆ ಚಕ್ರವಲ್ಲ,
ಸುಡುತ್ತಿರುವೆ ಬೆಂಕಿಯಲ್ಲ,
ಪ್ರಕಾಶಿಸುವೆ ದೀಪವಲ್ಲ
ಹೇಳು ನಾನಾರು?

# 2. ಒಡನಾಟ

(ಒಂದು ರಾತ್ರಿ ಮಲ್ಲಪ್ಪ ಶೆಟ್ಟರು ಅಂಗಡಿಗೆ ಬೀಗ ಹಾಕಿ ಒಳಗೆ ಮಲಗಲು ಹೋದರು. ಬೀಗ ಹಾಕಿದ ತಕ್ಷಣವೇ ಅಂಗಡಿಯೊಳಗಿನ ಧಾನ್ಯಗಳಿಗೆ ನಿದ್ದೆ ಬರಲೇ ಇಲ್ಲ! ಕಡಲೆ, ಹೆಸರು, ಉದ್ದು, ತೊಗರಿ, ಅವರೆ, ನೆಲಗಡಲೆ ಮತ್ತು ಮೂಕಣಿ ಎಲ್ಲರೂ ಒಂದೇ ಸಾರಿ ''ನಾನು ಶ್ರೇಷ್ಠ, ನಾನು ಶ್ರೇಷ್ಠ!'' ಎಂದು ಕೂಗತೊಡಗಿದವು. ಅದಕ್ಕೆ ಕಡಲೆ ಗಂಟಲು ಕೆರೆದುಕೊಂಡು ಹೇಳಿತು).



**ಕಡಲೆ :** ಏಯ್, ತಡೆಯಿರಿ, ತಡೆಯಿರಿ ! ಎಲ್ಲರೂ ಒಂದೇ ಸಾರಿ ಬಾಯಿಬಿಟ್ಟರೆ ಮಲ್ಲಪ್ಪ ಶೆಟ್ಟರು ಎದ್ದು ಬಿಡುತ್ತಾರೆ! ಒಬ್ಬೊಬ್ಬರಾಗಿ ಹೊಗಳಿಕೊಳ್ಳೋಣ!

**ನೆಲಗಡಲೆ:** ಅಯ್ಯೋ! ಹೊಗಳಿಕೆ ಅಂದ್ರೆ ನಾನೇ ಮೊದಲು. ನಾನು ಬಡವರ ಬಾದಾಮಿ ಅಲ್ವಾ? ನನ್ನಿಂದ ಉಸುಳಿ, ಉಂಡೆ, ಚಟ್ನಿ, ಸಾರು... ಎಣ್ಣೆ ಕೂಡ ! ನನ್ನ ಹಿಂಡಿ ತಿಂದ ಪಶುಗಳು ಹಾಲು ಕೊಟ್ಟರೆ ಹಾಲಿನ ನದಿ ಹರಿಯುತ್ತದೆ. ಇನ್ನು ನಾನು ಶ್ರೇಷ್ಠ ಅಲ್ಲ ಅಂದ್ರೆ ಯಾರು?

**ತೊಗರಿ:** ಹೌದಾ? ಹಾಗಾದ್ರೆ ಅನ್ನಕ್ಕೆ ನಿಜವಾದ ಗೆಳೆಯ ಯಾರು ಗೊತ್ತಾ? ನಾನೇ! ನನ್ನ ಸಾರು ಇಲ್ಲದೆ ಅನ್ನಕ್ಕೆ ಬೆಲೆ ಇಲ್ಲ! ದಿನನಿತ್ಯ ಎಲ್ಲರ ಮನೆಯ ಅತಿಥಿ ನಾನು !

**ಮೂಕಣಿ:** ಓಹೋ! ನೀವು ಸಾರು–ಉಸುಳಿ ಅಂದರೆ, ನನ್ನ ಮೊಳಕೆ ಉಸಳಿ, ಹಪ್ಪಳ, ಸಂಡಿಗೆ ಅಂದ್ರೆ ಎಲ್ಲರ ಬಾಯಿಗೆ ನೀರು. ನನ್ನ ಮುಂದೆ ನೀವು ಎಲ್ಲರೂ ಮೌನ!

**ಹೆಸರು:** ಏಯ್... ಮೂಕಣಿ ಬಾಯಿ ಮುಚ್ಕೊಂಡ್ ಕೂಡು. ರುಚಿ, ಪೌಷ್ಟಿಕತೆ ಎರಡೂ ಒಂದೇ ಕಡೆ ಬೇಕಾ? ಹಾಗಾದ್ರೆ ನಾನೇ ಬೇಕು. ನನ್ನ ಉಸುಳಿ, ಸಾರು, ಉಂಡೆ, ಪಾಯಸ, ದೋಸೆ... ಆಹಾ! ನನ್ನನ್ನು ತಿಂದವರು ಡಯಟ್ ಮಾತೇ ಮರೆತುಬಿಡುತ್ತಾರೆ!

**ಅವರೆ:** (ಎದೆ ಉಬ್ಬಿಸಿ) ನೋಡಿ ನನ್ನ ಗಾತ್ರ! ನನ್ನ ಪ್ರಕಾರಗಳು ! ನೆಲದ ಅವರೆ, ಬಳ್ಳಿ ಅವರೆ, ಕರಿ ಅವರೆ, ತಿಂಗಳ ಅವರೆ ! ಇಷ್ಟು ರೂಪಗಳು ನಿಮ್ಮಲ್ಲಿ ಯಾರಿಗಿವೆ ಹೇಳಿ? ನನ್ನದೇ ಮೇಳ ನಡೆಯುತ್ತದೆ ಗೊತ್ತಾ? ನಾನೇ ಶ್ರೇಷ್ಠ!

**ಕಡಲೆ:** ಶ್ರೇಷ್ಠ ಅಂತೆ ಶ್ರೇಷ್ಠ ! ಹಬ್ಬದ ಹೋಳಿಗೆ, ಕರಿಗಡುಬು, ಬುಂದಿ ಲಾಡು, ಮೈಸೂರು ಪಾಕ್ ಎಲ್ಲವೂ ನನ್ನದೇ! ಕುರುಕುರು ಹುರಿಗಡಲೆ ಎಂದರೆ ಮಕ್ಕಳು ನನ್ನ ಹಿಂದೆ ಓಡ್ತಾರೆ!

**ಉದ್ದು:** (ಶಾಂತವಾಗಿ) ನಾನು ಜಾಸ್ತಿ ಮಾತಾಡಲ್ಲ... ಇಡ್ಲಿ, ದೋಸೆ, ವಡೆ ಎಲ್ಲಕ್ಕೂ ನಾನೇ ಬೇಕು. ನಾನಿಲ್ಲದೆ ಉಡುಪಿ ಹೋಟೆಲ್‌ಗಳು ನಡೆಯುವದೇ ಇಲ್ಲ.

(ಅಷ್ಟರಲ್ಲಿ ಮೂಲೆಯಲ್ಲಿದ್ದ ಏಕದಳ ಧಾನ್ಯ ಅಕ್ಕಿ ಮಧ್ಯೆ ಬಾಯಿ ಹಾಕಿತು)

**ಅಕ್ಕಿ :** ಓ ಗೆಳೆಯರೇ ! ಇಷ್ಟು ಜಗಳ ಯಾಕೆ? ನಾನು ಇಲ್ಲದೆ ನಿಮ್ಮನ್ನೆಲ್ಲ ಯಾರು ತಿನ್ನುತ್ತಾರೆ? ನಾವು ಎಲ್ಲರೂ ಸೇರಿದರೆ ಮಾತ್ರ ಊಟ ಪೂರ್ಣ! ಪ್ರತಿಯೊಬ್ಬರಿಗೂ ಒಂದೊಂದು ರುಚಿ ಇದೆ! ಒಂದೊಂದು ಶಕ್ತಿ ಇದೆ!

ಅದಕ್ಕೆ ಎಲ್ಲ ದ್ವಿದಳ ಧಾನ್ಯಗಳು ಒಂದೆಸಾರಿ:

''ಹೌದು... ಹೌದು...! ಜಗಳ ಬಿಡೋಣ... ಇಂದಿನಿಂದ ನಾವೆಲ್ಲರೂ ಒಟ್ಟಿಗೆ ಸಂತಸದಿಂದ ಇರೋಣ''

---

## ❖ ವಿಶೇಷ ವಿಚಾರ.

ದ್ವಿದಳ ಧಾನ್ಯ –ಎರಡು ದಳಗಳಿರುವ ಕಾಳುಗಳು

ಗಂಟಲು ಕೆರೆದುಕೊಳ್ಳುವುದು – ಮಾತನಾಡಲು ತಯಾರಿ ಮಾಡಿಕೊಳ್ಳುವುದು

ಬಡವರ ಬಾದಾಮಿ – ಕಡಿಮೆ ಖರ್ಚಿನಲ್ಲಿ ಹೆಚ್ಚು ಪೌಷ್ಟಿಕಾಂಶ ಕೊಡುವ ನೆಲಗಡಲೆಗೆ ಇರುವ ಹೆಸರು.

ಮೊಳಕೆ – ನೆನೆದ ಕಾಳಿನಿಂದ ಬರುವ ಸಣ್ಣ ಚಿಗುರು

ಪೌಷ್ಟಿಕತೆ – ದೇಹಕ್ಕೆ ಬೇಕಾದ ಪೋಷಕಾಂಶಗಳು;

## ನನಗೆ ತಿಳಿದಂತೆ

**1. ಈ ಕಥೆಯ ಮುಖ್ಯ ನೀತಿ ಯಾವುದು?**

ಅ. ಜಗಳ ಮಾಡುವುದು ಒಳ್ಳೆಯದು

ಬ. ಒಬ್ಬನೇ ಶ್ರೇಷ್ಠನಾಗಿರುವುದು

ಕ. ರಾತ್ರಿ ನಿದ್ದೆ ಮಾಡಬಾರದು

ಡ. ಒಗ್ಗಟ್ಟಿನಲ್ಲಿ ಬಲವಿದೆ ಮತ್ತು ಪ್ರತಿಯೊಬ್ಬರಿಗೂ ಸ್ವಂತ ಮೌಲ್ಯವಿದೆ

**2. ನಿಮ್ಮ ಕಡೆಯ ಹೊಲಗದ್ದೆಗಳಲ್ಲಿ ಹೆಚ್ಚಾಗಿ ಬೆಳೆಯುವ ದ್ವಿದಳ ಧಾನ್ಯ ಯಾವುದು?**

ಅ) ಬಟಾಣಿ ಬ) ತೊಗರಿ ಕ) ಕಡಲೆ ಡ) ಮೂಕಣಿ

## ಹೊಂದಿಸೋಣ ಬಾ

| | | |
|---|---|---|
| ಅ) ಕಡಲೆ | 1) ಪಾಯಸ | -------------------- |
| ಬ) ಹೆಸರು | 2) ಇಡ್ಲಿ | -------------------- |
| ಇ) ಉದ್ದು | 3) ಭಜಿ | -------------------- |
| ಈ) ತೊಗರಿ | 4) ಸಾರು | -------------------- |

## ಸಾಲುಗಳ ಮೇಲೆ ಚರ್ಚೆ :

ಕೆಳಗೆ ನೀಡಲಾದ ವಾಕ್ಯಗಳನ್ನು ಗಮನವಿಟ್ಟು ಓದಿ ವಿಚಾರ ಮಾಡಿ. ನೀವು ಈ ಪರಿಚ್ಛೇದದಲ್ಲಿಯ ವಾಕ್ಯಗಳಿಂದ ಏನನ್ನು ಅರ್ಥೈಸಿಕೊಂಡಿರಿ. ನಿಮ್ಮ ವಿಚಾರಗಳನ್ನು ಗುಂಪಿನಲ್ಲಿ ಚರ್ಚಿಸಿ ಬರೆಯಿರಿ.

1) ಅಯ್ಯೋ! ಹೊಗಳಿಕೆ ಅಂದ್ರೆ ನಾನೇ ಮೊದಲು ನಾನು ಬಡವರ ಬಾದಾಮಿ

2) ಇಡ್ಲಿ, ದೋಸೆ, ವಡೆ ಎಲ್ಲಕ್ಕೂ ನಾನೇ ಬೇಕು. ನಾನಿಲ್ಲದೆ ಉಡುಪಿ ಹೋಟೆಲ್ ನಡೆಯುವುದೇ ಇಲ್ಲ.

3) ಓ ಗೆಳೆಯರೇ! ಇಷ್ಟು ಜಗಳ ಯಾಕೆ? ನಾನು ಇಲ್ಲದೆ ನಿಮ್ಮನ್ನೆಲ್ಲ ಯಾರು ತಿನ್ನುತ್ತಾರೆ? ನಾವು ಎಲ್ಲರೂ ಸೇರಿದರೆ ಮಾತ್ರ ಊಟ ಪೂರ್ಣ!

## ಯೋಚಿಸಿ ಬರೆ

1. ಕೇವಲ ಒಬ್ಬನೇ ಶ್ರೇಷ್ಠ ಎಂದು ವಾದಿಸುವುದು ಸರಿಯೇ? ನಮ್ಮ ಆರೋಗ್ಯಕ್ಕೆ ಕೇವಲ ಒಂದು ಧಾನ್ಯ ಸಾಕೇ ಅಥವಾ ಎಲ್ಲವೂ ಬೇಕೇ? ಎಂಬುದನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.
2. ಕಥೆಯಲ್ಲಿ ಬಂದಿರುವ ಪ್ರತಿಯೊಂದು ಧಾನ್ಯಗಳಲ್ಲಿಯ (ಕಡಲೆ, ಹೆಸರು, ಉದ್ದು, ತೊಗರಿ ಇತ್ಯಾದಿ) ಪೌಷ್ಟಿಕಾಂಶದ ಗುಣಗಳನ್ನು ಬರೆಯಿರಿ.
3. ಮಲ್ಲಪ್ಪ ಶೆಟ್ಟರ ಅಂಗಡಿಯಲ್ಲಿರುವ ಯಾವುದಾದರೂ ಒಂದು ಧಾನ್ಯವನ್ನು ಮಾರಾಟ ಮಾಡಲು ಆಕರ್ಷಕವಾದ ಜಾಹೀರಾತು ತಯಾರಿಸು.

## ❖ ರಚಿಸೋಣ ಬಾ

1. ಕಥೆಯಲ್ಲಿಲ್ಲದ ಮತ್ತೊಂದು ಹೊಸ ಪಾತ್ರವನ್ನು (ಉದಾಹರಣೆಗೆ: ರಾಗಿ ಅಥವಾ ಗೋಧಿ) ಸೇರಿಸಿ, ಅದು ಜಗಳವನ್ನು ಹೇಗೆ ನಿಲ್ಲಿಸುತ್ತದೆ ಎಂಬುದನ್ನು ಸಂವಾದ ಮೂಲಕ ತೋರಿಸು.
2. ಹೋಳಿಗೆ, ಇಡ್ಲಿ, ದೋಸೆ, ಪಾಯಸ ತಯಾರಿಸಲು ಯಾವ ಧಾನ್ಯ ಬೇಕು ಎಂಬುದನ್ನು ಕಂಪ್ಯೂಟರ್ ಅಥವಾ ಟ್ಯಾಬ್ ಬಳಸಿ ಒಂದು ಸುಂದರವಾದ 'ಕೋಷ್ಟಕ' ತಯಾರಿಸು.

## ಕಲ್ಪನೆ ಮಾಡಿ ಬರೆ.

1. ''ಧಾನ್ಯಗಳು ಮತ್ತೆ ಜಗಳ ಮಾಡಿದರೆ...'' ಎಂಬ ಶೀರ್ಷಿಕೆಯಲ್ಲಿ ಸಂಭಾಷಣೆ ಬರೆಯಿರಿ (5-8 ಸಾಲು).

### ❖ ಭಾಷೆ ತಿಳಿಯೋಣ ಬಾ.

**ಕೆಳಗಿನ ವಾಕ್ಯಗಳಲ್ಲಿ ಇರುವ ನಾಮಪದಗಳನ್ನು ಗುರುತಿಸಿ ಬರೆ.**

ಅ) ಕಡಲೆ ಬಡವರ ಬಾದಾಮಿ. ------------------

ಆ) ಉದ್ದು ಇಡ್ಲಿ, ದೋಸೆಗೆ ಮುಖ್ಯ. ------------------

ಇ) ಅಕ್ಕಿ ಎಲ್ಲರನ್ನೂ ಕರೆಸಿತು. ------------------

ಈ) ತೊಗರಿಬೇಳೆ ಅನ್ನದ ಗೆಳೆಯ. ------------------

### ❖ ಕೆಳಗಿನ ವಾಕ್ಯಗಳಲ್ಲಿಯ ಕ್ರಿಯಾಪದಗಳನ್ನು ಬರೆ.

ಅ) ಧಾನ್ಯಗಳು ಜಗಳ ಮಾಡತೊಡಗಿದವು. ------------------

ಆ) ಅಕ್ಕಿ ಎಲ್ಲರನ್ನು ಒಗ್ಗೂಡಿಸಿತು. ------------------

ಇ) ಕಡಲೆ ತನ್ನನ್ನು ಹೊಗಳಿಕೊಂಡಿತು. ------------------

### ಕೆಳಗಿನ ಪದಗಳನ್ನು ಏಕವಚನ ಮತ್ತು ಬಹುವಚನ ರೂಪದಲ್ಲಿ ಬರೆ.

(ಕಾಳು, ಮನೆ, ಸ್ನೇಹಿತ)

ಏಕವಚನ ಉದಾ: ಧಾನ್ಯ 1) ________ 2) ________ 3) ________

ಬಹುವಚನ ಉದಾ: ಧಾನ್ಯಗಳು 1) ________ 2) ________ 3) ________

### ❖ ಕೆಳಗಿನ ವಾಕ್ಯ ಯಾವ ಕಾಲದಲ್ಲಿ ಇದೆ ಎಂಬುದನ್ನು ಗುರುತಿಸಿ ಬರೆ.

ಧಾನ್ಯಗಳು ಜಗಳ ಮಾಡಿದ್ದವು. → ________________

ಧಾನ್ಯಗಳು ಜಗಳ ಮಾಡುತ್ತಿವೆ. → ________________

ಧಾನ್ಯಗಳು ಜಗಳ ಮಾಡಬಹುದು. → ________________

### ನಿನ್ನ ಹುಡುಕಾಟ

ದೇಶದ ಬೇರೆ ಬೇರೆ ರಾಜ್ಯಗಳಲ್ಲಿ ಮುಖ್ಯವಾಗಿ ಸೇವಿಸುವ ಆಹಾರ ಪದಾರ್ಥಗಳ ಬಗ್ಗೆ ಅಂತರ್ಜಾಲ ಮತ್ತು ನಿಯತಕಾಲಿಕೆಗಳಲ್ಲಿ ಹುಡುಕಿ ಮಾಹಿತಿ ಸಂಗ್ರಹಿಸು.

**ನಾನು ಶ್ರೇಷ್ಠ ಎಂಬುದು ಅಭಿಮಾನ**
**ನಾನೇ ಮಾತ್ರ ಶ್ರೇಷ್ಠ ಎಂಬುದು ಅಹಂಕಾರ**

# 3. ಮಿಡಿದ ಮನ

ಸುಜಯನ ಶಾಲೆಯಲ್ಲಿ ಒಮ್ಮೆ ಎಲ್ಲ ವಿದ್ಯಾರ್ಥಿಗಳು ಪ್ರವಾಸಕ್ಕೆ ಹೊರಟಿದ್ದರು. ಆಗ ಸುಜಯನಿಗೂ ಕೂಡ ಪ್ರುವಾಸಕ್ಕೆ ಹೋಗಬೇಕೆಂದು ಅನಿಸಿತು. ಅಂದು ಶಾಲೆ ಬಿಟ್ಟ ನಂತರ ಮನೆಗೆ ಬಂದು ತಾಯಿಗೆ ಈ ವಿಷಯವನ್ನು ತಿಳಿಸಿದನು. ಆಗ ಅಮ್ಮ ಸುಜಯನನ್ನು ಪ್ರವಾಸಕ್ಕೆ ಕಳುಹಿಸಲು ಒಪ್ಪಿಗೆ ನೀಡಿದಳು. ಸುಜಯನಿಗೆ ಎಲ್ಲಿಲ್ಲದ ಸಂತೋಷವಾಯಿತು.

ಶಾಲೆಯಲ್ಲಿ ಪಾಲಕರ ಸಭೆಯನ್ನು ತೆಗೆದುಕೊಂಡು ಸೋಲಾಪುರದ ಸಿದ್ಧರಾಮೇಶ್ವರರ ಜಾತ್ರೆಗೆ ಹೋಗುವುದಾಗಿ ತಿಳಿಸಿದರು. ಎಲ್ಲ ಪಾಲಕರ ಒಪ್ಪಿಗೆಯನ್ನು ತೆಗೆದುಕೊಂಡರು. ಎರಡು ದಿವಸಗಳ ನಂತರ ಶನಿವಾರದಂದು ಪ್ರವಾಸಕ್ಕೆ ಹೋಗಲು ನಿರ್ಧರಿಸಿದರು.

ಸುಜಯನು ಉತ್ಸಾಹದಿಂದ ನಾಳೆ ತಾನು ಜಾತ್ರೆಗೆ ಹೋಗುವುದರ ಬಗ್ಗೆ ಅಮ್ಮನಿಗೆ ಹೇಳಿದನು. ಅಮ್ಮ ನೂರು ರೂಪಾಯಿ ಕೊಟ್ಟಳು. ಆಗ ಅಮ್ಮ ಹಣ ಕೊಡುವಾಗ ಮಗನಿಗೆ ಹೇಳಿದಳು, ''ಅಲ್ಲಿ ನಿನಗೆ ಇಷ್ಟವಾದ ಚಿವಡಾ ತಿನ್ನು ಕಬ್ಬಿನ ಹಾಲು, ಸುಗಂಧಿ ಹಾಲು ಕುಡಿ'' ಎಂದು ಹೇಳಿದಳು. ಸುಜಯನು ಮುಂಜಾನೆ ಬೇಗನೆ ಏಳಬೇಕು ಎಂದು ಬೇಗ ಮಲಗಿದನು.

ಮರುದಿನ ಮುಂಜಾನೆ ಅವನು ಬೇಗನೆ ಎದ್ದು ಸ್ನಾನ ಮಾಡಿ ಹೊಸ ಬಟ್ಟೆ ಧರಿಸಿ ತಯಾರಾದನು. ಹೊರಗಿನಿಂದ ಅಮ್ಮನನ್ನು ಕೂಗುತ್ತಾ ''ಅಮ್ಮ ನಾನು ಬೇಗ ಹೋಗಬೇಕು'' ಎಂದಾಗ ಅಮ್ಮ ''ಮಗ ದೂರದ ರಸ್ತೆ ಇದೆ, ಬಿಸಿ ಬಿಸಿ ರೊಟ್ಟಿ ಮಾಡುತ್ತಿರುವೆ. ರೊಟ್ಟಿ ಮತ್ತು ಹಾಲು ಊಟ ಮಾಡಿ ಹೋಗು'' ಎಂದು ಕರೆದಳು. ಅದಕ್ಕೆ ಅವನು ''ತುಂಬಾ ತಡವಾಗಬಹುದು ಅಮ್ಮ'' ಎಂದು ಒಳಗಡೆ ಬಂದು ಊಟಕ್ಕೆ ಕುಳಿತನು. ''ಬೇಗ ಅಮ್ಮ ಬೇಗ ಊಟ ಬಡಿಸು'' ಎಂದನು ''ಹೌದು ಮಗ'' ಎನ್ನುತ್ತ ಅಮ್ಮ ಬಿಸಿ ಬಿಸಿ ರೊಟ್ಟಿಯನ್ನು



ತಟ್ಟೆಯಲ್ಲಿ ಮುರಿದು ಹಾಕುತ್ತಾಳೆ. ಆಗ ಮತ್ತೆ ಸುಜಯ ''ಅಮ್ಮ... ಬೇಗ ಬೇಗ ... ಹಾಲು ಹಾಕಮ್ಮ''... ಎಂದನು. ಅಮ್ಮ ಆಕಡೆ ಈಕಡೆ ನೋಡುತ್ತಾಳೆ. ಅಷ್ಟರಲ್ಲಿ ಮತ್ತೆ ಸುಜಯ ''ಅಮ್ಮ ಬೇಗ...''. ಎನ್ನುತ್ತಾನೆ. ಅದೇ ಸಮಯದಲ್ಲಿ ಅಮ್ಮ ಒಲೆಯ ಮೇಲೆ ಇಟ್ಟ ಹಾಲಿನ



ಪಾತ್ರೆಯನ್ನು ಬರಿಗೈಯಿಂದ ಹಿಡಿದು ತಟ್ಟೆಯಲ್ಲಿ ಹಾಲು ಹಾಕುತ್ತಾಳೆ. ಆಗ ಅಮ್ಮನ ಕೈ ಬೆರಳುಗಳು ಚರ್ರನೇ ಸುಡುವುದರಿಂದ ಅಮ್ಮನ ಕಣ್ಣಲ್ಲಿ ನೀರು ಬಂತು. ಅದನ್ನು ಕಂಡು ಸುಜಯನಿಗೆ ನೋವಾಯಿತು. ನೊಂದ ಸುಜಯನು ಅವಸರ ಮಾಡದೆ ಊಟ ಮಾಡಿ ಅಲ್ಲಿಂದ ಹೊರಟು ಹೋಗುತ್ತಾನೆ.

ಜಾತ್ರೆಗೆ ಹೋದ ಮೇಲೆ ಸುಜಯನು ಎಲ್ಲ ಕಡೆಗೆ ತಿರುಗಾಡಿ ತುಂಬಾ ಖುಷಿ ಪಡುತ್ತಾನೆ. ಮನೆಯಲ್ಲಿ ಅಮ್ಮ ತನ್ನ ಮಗ ಎಂದೂ ಹೊರಗಡೆ ಹೋಗಿರಲಿಲ್ಲ, ಆತ ತಿಂಡಿ ತಿಂದಿದ್ದಾನೋ ಅಥವಾ ಇಲ್ಲವೋ, ಸದ್ಯ ಏನು ಮಾಡುತ್ತಿರಬಹುದು? ಅವನು ಯಾವ ಯಾವ ತಿಂಡಿ ತಿಂದಿರಬಹುದು? ಎಂದು ಯೋಚನೆ ಮಾಡುತ್ತಿದ್ದಳು.

ಸಂಜೆಯ ಹೊತ್ತಾಗಿತ್ತು. ಅಮ್ಮ ಮಗ ಬರುವ





ದಾರಿಯನ್ನು ಕಾಯುತ್ತಾ ಕುಳಿತಿದ್ದಳು. ಅಷ್ಟರಲ್ಲಿ ಸುಜಯ ಬಂದನು. ಮಗನನ್ನು ಕಂಡು ಖುಷಿಯಿಂದ ತಬ್ಬಿಕೊಂಡಳು. ಅವನ ಮುಖದಲ್ಲಿ ಸಂತೋಷ ಕಂಡು ಬರುತ್ತಿತ್ತು.

''ಸುಜಯ ಜಾತ್ರೆಯಲ್ಲಿ ಅಲ್ಲಿ ಏನೇನು ನೋಡಿದೆ? ಅಲ್ಲಿ ಏನೇನು ತಿಂದಿದ್ದಿಯಾ? ನಿನಗೆ ಹೇಗೆ ಅನಿಸಿತು? ಹೀಗೆ ಹಲವು ಪ್ರಶ್ನೆಗಳನ್ನು ಕೇಳತೊಡಗಿದಳು. ಅಷ್ಟರಲ್ಲಿ ಸುಜಯನು ''ಅಮ್ಮ... ಅಮ್ಮ... ತಡೆ ಎಷ್ಟು ಪ್ರಶ್ನೆ ಕೇಳುತ್ತಿರುವೆ. ನೀನು ಮೊದಲು ನಿನ್ನ ಕಣ್ಣು ಮುಚ್ಚಿಕೊ ಎಂದನು. ಆಗ ಅಮ್ಮ 'ಏಕೆ?' ಎಂದು ಕೇಳಿದಾಗ. ''ಅಮ್ಮ ನೀನು ಮೊದಲು ಕಣ್ಣು ಮುಚ್ಚಿಕೊ'' ಎಂದನು. ಅಮ್ಮ ಕಣ್ಣು ಮುಚ್ಚಿಕೊಂಡ ನಂತರ ಅವನು ಅಮ್ಮನ ಕೈಯಲ್ಲಿ ಚಿಮ್ಮಟಿಗೆಯನ್ನು ಕೊಟ್ಟನು. ಅಮ್ಮ ಕಣ್ಣು ತೆರೆದು ನೋಡಿದಾಗ, ಅವಳ ಕಣ್ಣಲ್ಲಿ ನೀರು ತುಂಬಿ ಬಂದವು. ಮಗನು ಜಾತ್ರೆಗೆ ಹೋಗಿ ತನಗಾಗಿ ಏನೂ ಕೊಳ್ಳದೆ ನನಗೋಸ್ಕರ ಚಿಮ್ಮಟಿಗೆ ತಂದಿದ್ದಾನಲ್ಲ! ಎಂದು ಯೋಚಿಸಿದಳು. ಮಗನ ವಾತ್ಸಲ್ಯ ಕಂಡು ತಾಯಿಯ ಮನಸ್ಸು ತುಂಬಿ ಬಂದಿತು.

❖ **ಶಬ್ದಗಳ ಅರ್ಥ :-**

ಒಪ್ಪಿಗೆ – ಅನುಮತಿ; ಧರಿಸು – ತೊಡು, ಹಾಕಿಕೊಳ್ಳು; ಚಿಮ್ಮಟಿಗೆ – ಇಕ್ಕಳಿಕೆ; ವಾತ್ಸಲ್ಯ – ಮಮತೆ.

**ನನಗೆ ತಿಳಿದಂತೆ...**

**ಕೊಟ್ಟ ಪ್ರಶ್ನೆಗಳಿಗೆ ನಿಖರವಾದ ಉತ್ತರಗಳನ್ನು ಆರಿಸಿ ಅವುಗಳಿಗೆ ( ✓ ) ಚಿಹ್ನೆ ಹಾಕಿರಿ.**

ಅ) ಶಾಲೆಯಲ್ಲಿ ಪಾಲಕರ ಸಭೆಯನ್ನು ತೆಗೆದುಕೊಂಡು .............. ಹೋಗುವುದಾಗಿ ತಿಳಿಸಿದರು.

i) ಸೊಲ್ಲಾಪುರದ ಸಿದ್ಧರಾಮೇಶ್ವರ ಜಾತ್ರೆಗೆ ☐ iii) ವಿಜಯಪುರದ ಸಿದ್ಧರಾಮೇಶ್ವರ ಜಾತ್ರೆಗೆ ☐

ii) ಮಾಚಣೂರ ಸಿದ್ಧರಾಮೇಶ್ವರ ಜಾತ್ರೆಗೆ ☐ iv) ಚಡಚಣದ ಸಿದ್ಧರಾಮೇಶ್ವರ ಜಾತ್ರೆಗೆ ☐

ಆ) ಜಾತ್ರೆಯಿಂದ ಸುಜಯನು ಅಮ್ಮನಿಗಾಗಿ .............. ತಂದನು.

i) ಬಳೆ ☐ ii) ಪಾತ್ರೆ ☐ iii) ಚಿಮ್ಮಟಿಗೆ ☐ iv) ಓಲೆ ☐

ಇ) ಅಮ್ಮ ಹಣ ಕೊಟ್ಟು ಈ ರೀತಿ ಹೇಳಿದಳು.....

1) ಬಟ್ಟೆ ಖರೀದಿಸು. ☐ 3) ಆಟಿಕೆಗಳನ್ನು ತೆಗೆದುಕೊ. ☐

2) ನಿನಗೆ ಇಷ್ಟವಾದ ತಿಂಡಿ ತಿನ್ನು. ☐ 4) ತಿರುಗುವ ತೊಟ್ಟಿಲಲ್ಲಿ ಕುಳಿತುಕೊಳ್ಳು. ☐

ಈ) ಅಮ್ಮ ಒಲೆಯ ಮೇಲೆ ಇಟ್ಟಿದ್ದು

1) ಸಾರಿನ ಪಾತ್ರೆ ☐ 2) ಹುಗ್ಗಿಯ ಪಾತ್ರೆ ☐ 3) ಹಾಲಿನ ಪಾತ್ರೆ ☐ 4) ನೀರಿನ ಪಾತ್ರೆ ☐

ಉ) ಸುಜಯನು ತಾಯಿಗೆ ಚಿಮ್ಮಟಿಗೆಯನ್ನು ತಂದು ಕೊಟ್ಟಾಗ ಅವಳಿಗೆ.........

1) ಕಣ್ಣು ತುಂಬ ನೀರು ಬಂದವು ☐ 3) ಕಸಿವಿಸಿಗೊಂಡಳು. ☐

2) ಮನಸ್ಸು ಮುದುಡಿತು ☐ 4) ಕೋಪಗೊಂಡಳು ☐

❖ **ಯಾರು ಯಾರಿಗೆ ಅಂದರು? ಎಂಬುದನ್ನು ಬರೆಯಿರಿ.**

1) ''ಅಲ್ಲಿ ನಿನಗೆ ಇಷ್ಟವಾದ ಚಿವಡಾ ತಿನ್ನು, ಕಬ್ಬಿನ ಹಾಲು, ಸುಗಂಧಿ ಹಾಲು ಕುಡಿ''

2) ''ಅಮ್ಮ ... ಬೇಗ ಬೇಗ ... ಹಾಲು ಹಾಕಮ್ಮ ...''

**ಸಾಲುಗಳ ಮೇಲೆ ಚರ್ಚೆ...**

ಕೆಳಗೆ ನೀಡಲಾದ ವಾಕ್ಯಗಳನ್ನು ಗಮನವಿಟ್ಟು ಓದಿ ವಿಚಾರ ಮಾಡಿ. ನೀವು ಈ ಪರಿಚ್ಛೇದದಲ್ಲಿಯ ವಾಕ್ಯಗಳಿಂದ ಏನನ್ನು ಅರ್ಥೈಸಿಕೊಂಡಿರಿ? ಎಂಬುದನ್ನು ಗುಂಪಿನಲ್ಲಿ ಚರ್ಚಿಸಿ ಬರೆಯಿರಿ.

ಅ) ಸಂಜೆಯ ಹೊತ್ತಾಗಿತ್ತು. ಅಮ್ಮ ಮಗ ಬರುವ ದಾರಿಯನ್ನು ಕಾಯುತ್ತಾ ಕುಳಿತಿದ್ದಳು. ಅಷ್ಟರಲ್ಲಿ ಸುಜಯ ಬಂದನು. ಮಗನನ್ನು ಕಂಡು ಖುಷಿಯಿಂದ ತಬ್ಬಿಕೊಂಡಳು.

ಆ) ಮಗನ ವಾತ್ಸಲ್ಯ ಕಂಡು ತಾಯಿಯ ಮನಸ್ಸು ತುಂಬಿ ಬಂದಿತು.

**ಯೋಚಿಸಿ ಬರೆ.**

1) ಸುಜಯನ ಸ್ಥಾನದಲ್ಲಿ ನೀನು ಇದ್ದರೆ ಏನು ಮಾಡುತ್ತಿದ್ದೆ?

2) ನೀನು ತಾಯಿಗೆ ಯಾವ ಯಾವ ಕೆಲಸದಲ್ಲಿ ಸಹಾಯ ಮಾಡುತ್ತಿಯಾ ಎಂಬುದನ್ನು ಬರೆ.

3) ತಾಯಿಯ ಬಗ್ಗೆ ಐದಾರು ಸಾಲುಗಳಲ್ಲಿ ಒಂದು ಪರಿಚ್ಛೇದವನ್ನು ಬರೆ.

❖ **ರಚಿಸೋಣ ಬಾ.**

1) ಅಮ್ಮನ ಬಗ್ಗೆ ನಾಲ್ಕು ಸಾಲಿನ ಕವಿತೆಯನ್ನು ರಚಿಸು.

2) ನಿಮ್ಮ ಊರಿನ ಜಾತ್ರೆಯ ಬಗ್ಗೆ ವರ್ಣನಾತ್ಮಕ ನಿಬಂಧ ಬರೆ.

**ಕೆಳಗಿನ ವಾಕ್ಯಗಳನ್ನು ಸರಿಯಾದ ಕ್ರಮದಲ್ಲಿ ಬರೆ.**

1) ಸುಜಯನು ಅಮ್ಮನ ಕೈಯಲ್ಲಿ ಚಿಮ್ಮಟಿಗೆ ಕೊಟ್ಟನು.

2) ಅಮ್ಮ ಸುಜಯನಿಗೆ ಜಾತ್ರೆಗೆ ಹೋಗಲು ನೂರು ರೂಪಾಯಿ ಕೊಟ್ಟಳು.

3) ಶಾಲೆಯಲ್ಲಿ ಒಂದು ದಿವಸದ ಪ್ರವಾಸಕ್ಕೆ ಸೋಲಾಪುರದ ಸಿದ್ಧರಾಮೇಶ್ವರ ಜಾತ್ರೆಗೆ ಹೋಗುವುದು ನಿಶ್ಚಿತ ಮಾಡಿದರು.

4) ಸುಜಯನು ಊಟಕ್ಕೆ ಕುಳಿತಾಗ ಅಮ್ಮನ ಕೈ ಬೆರಳುಗಳು ಸುಟ್ಟವು.

5) ಸುಜಯ ಜಾತ್ರೆಯಲ್ಲಿ ಎಲ್ಲ ಕಡೆಗೆ ತಿರುಗಾಡಿ ಖುಷಿ ಪಟ್ಟನು.

## ಕಲ್ಪನೆ ಮಾಡಿ ಬರೆ.

**1) ಕೆಳಗಿನ ಘಟನೆ ಘಟಿಸಿದಾಗ ನೀನು ಯಾವ ಭಾವನೆಯನ್ನು ವ್ಯಕ್ತಪಡಿಸುವೆ ಎಂಬುದನ್ನು ಬರೆ.**

ಉದಾ:- ರಾಕೇಶ ಪರೀಕ್ಷೆಯಲ್ಲಿ ಪ್ರಥಮ ಕ್ರಮಾಂಕ ಪಡೆದುಕೊಂಡು ಪಾಸಾದನು. (ಭಾವನೆ- ಸಂತೋಷ)

1) ನಿನ್ನ ಗೆಳೆಯನು ಸೈಕಲನ್ನು ಆಡುವಾಗ ಬಿದ್ದನು.
2) ಅಜ್ಜಿ ನಿನಗೆ ಹಾಸ್ಯ ಕಥೆ ಹೇಳುತ್ತಾಳೆ.
3) ಕಟ್ಟಡಕ್ಕೆ ಬೆಂಕಿ ತಾಗಿದರೆ?
4) ಪ್ರಿಯವಾದ ವಸ್ತು ಕಳೆದು ಹೋದಾಗ?
5) ಯಾರಾದರೂ ನಿಮಗೆ ಸುಳ್ಳು ಹೇಳಿದಾಗ.
6) ಕತ್ತಲಲ್ಲಿ ನಿಮಗೆ ಹೋಗು ಎಂದಾಗ.

**2) ಕೆಳಗಿನ ಚಿತ್ರವನ್ನು ನಿರೀಕ್ಷಣೆ ಮಾಡಿ ನಿನಗೆ ಯಾವ ಭಾವನೆ ಕಂಡು ಬರುತ್ತದೆ ಎಂಬುದನ್ನು ಸ್ವ-ಭಾಷೆಯಲ್ಲಿ ಬರೆ.**





## ❖ ಭಾಷೆ ತಿಳಿಯೋಣ ಬಾ.

**ಕೆಳಗೆ ಕೊಟ್ಟ ಶಬ್ದಗಳ ಸಮಾನಾರ್ಥಕ ಶಬ್ದವನ್ನು ಹುಡುಕಿ ಬರೆ.**

**ಅಮ್ಮ, ಸಂತೋಷ, ಮಗ, ಪ್ರವಾಸ, ಸಮಯ, ಹಣ, ಪಾಲಕರು, ಹೊಸ, ವಿದ್ಯಾರ್ಥಿ, ಉತ್ಸವ**

1) ಅಧ್ಯಯನಾರ್ಥಿ, ಓದುಗಾರ, ಅಧ್ಯಾಯಿ, ಶಿಷ್ಯ, .....................
2) ಹಬ್ಬ, ಪರ್ವ, ಮೇಳ, .....................
3) ಪೋಷಕರು, ರಕ್ಷಕರು, ತಂದೆ - ತಾಯಿ, ಸಾಕಿದವರು, .....................
4) ದುಡ್ಡು, ರೊಕ್ಕ, ಕಾಸು, ನಗದು, .....................
5) ನವೀನ, ನೂತನ, ನವ, ಹೊಚ್ಚ, .....................
6) ಪ್ರಯಾಣ, ವಿಹಾರ, ಪರ್ಯಟನೆ, ಸಂಚಾರ, .....................
7) ಪುತ್ರ ಕುಮಾರ, ತನುಜ, ನಂದನ, .....................
8) ಕಾಲ, ವೇಳೆ, ಅವಧಿ, ಹೊತ್ತು, .....................
9) ತಾಯಿ, ಅವ್ವ, ಜನನಿ, ಹೆತ್ತವಳು, .....................
10) ಆನಂದ, ಹರ್ಷ, ಉಲ್ಲಾಸ, ಸೌಖ್ಯ, .....................

## ❖ ವಿಭಕ್ತಿ ಪ್ರತ್ಯಯಗಳು




## ❖ ಕೆಳಗೆ ಕೊಟ್ಟ ಶಬ್ದಗಳಿಗೆ ಪ್ರತ್ಯಯಗಳನ್ನು ಜೋಡಿಸಿ ಬರೆ.

**ಉದಾಹರಣೆಗಳನ್ನು ಪುಸ್ತಕದಿಂದ ಹುಡುಕಿ ಬರೆ.**

| ಶಬ್ದಗಳು | ಪ್ರಥಮಾ | ದ್ವಿತೀಯಾ | ತೃತೀಯಾ | ಚತುರ್ಥಿ | ಪಂಚಮಿ | ಷಷ್ಠಿ | ಸಪ್ತಮಿ | ಸಂಬೋದನೆ |
|---|---|---|---|---|---|---|---|---|
| ತಾಯಿ | | | | | | | | |
| ಕಬೀರ | | | | | | | | |
| ಶಾಲೆ | | | | | | | | |
| ಅದು | | | | | | | | |

**ಮಾತೆಯ ಮಮತೆ, ತುಂಬಿದ ವರತೆ**

# 4. ಸೋತು ಗೆದ್ದವ

**ಲೇಖಕರ ಪರಿಚಯ : ಸೋತು ಗೆದ್ದವ' ಪಾಠವನ್ನು** ಡಾ॥ ಶ್ರೀಮತಿ ಜಯಶ್ರೀ ಎಸ್ ಮುದಿಗೌಡರ ಇವರು ಬರೆದ 'ಸುವಿಚಾರ ಸಿಂಚನ' ಎಂಬ ಗ್ರಂಥದಿಂದ ಆಯ್ದುಕೊಳ್ಳಲಾಗಿದೆ. ಈ ಗ್ರಂಥ ಮಾನವೀಯ ಮೌಲ್ಯಾಧಾರಿತ ವಿಷಯಗಳನ್ನು ಹೊಂದಿದ್ದು ಮಕ್ಕಳ ವ್ಯಕ್ತಿತ್ವ ನಿರ್ಮಾಣಕ್ಕೆ ಸಹಾಯಕವಾಗಿದೆ. ಇವರ ಇನ್ನೊಂದು ಕೃತಿ 'ಪಾಲಕರಿಗಾಗಿ'. ಈ ಎರಡೂ ಕೃತಿಗಳು ಮಕ್ಕಳ ಬಲವರ್ಧನೆಗೆ ನೆರವಾಗುತ್ತವೆ.

ಇಬ್ಬರು ಉದ್ದಿಮೆದಾರರ ನಡುವೆ ಪೈಪೋಟಿ ಇದ್ದರೂ ದ್ವೇಷ, ಅಸೂಯೆಗಳಿರಲಿಲ್ಲ. ಹಳೆಯ ಉದ್ದಿಮೆದಾರನಿಂದ ತಾನು ಕಲಿತ ಪಾಠವನ್ನು ಮರೆಯದೆ ಅರುಣನು ಅವನ ಉಪಕಾರ ಸ್ಮರಿಸುತ್ತ ಮಾನವೀಯತೆ ಮೆರೆದ. ಅದುವೇ ಈ ಪಾಠದ ವಿಶೇಷತೆ.



ಒಬ್ಬ ಪ್ರಸಿದ್ಧ ಉದ್ದಿಮೆದಾರನಿದ್ದನು. ಅವನ ಉದ್ದಿಮೆ ಯಶಸ್ವಿಯಾಗಿ ನಡೆದಿತ್ತು. ಕೆಲವು ವರ್ಷಗಳ ನಂತರ ಅವನ ಉದ್ದಿಮೆಯ ಪಕ್ಕದಲ್ಲಿಯೇ ಅರುಣನು ಉದ್ದಿಮೆ ಆರಂಭಿಸಿದನು. ಇಬ್ಬರಲ್ಲಿಯೂ ತೀವ್ರ ಪೈಪೋಟಿ ಇತ್ತು. ಇಬ್ಬರಲ್ಲಿಯೂ ಒಳ್ಳೆಯ ಸ್ನೇಹ ಸೌಹಾರ್ದ ಇಲ್ಲದಿದ್ದರೂ ದ್ವೇಷ ಅಸೂಯೆಗಳಿರಲಿಲ್ಲ. ಎರಡೂ ಉದ್ದಿಮೆಗಳು ಚೆನ್ನಾಗಿಯೇ ನಡೆದಿದ್ದವು. ಅರುಣ ಎಂಬ ಹೊಸ ಉದ್ದಿಮೆದಾರನು ಒಂದು ದಿನ ತನ್ನ ಕಾರ್ಖಾನೆಯನ್ನು ತಳಿರುತೋರಣ ಹಾಗೂ ವಿದ್ಯುದ್ದೀಪಗಳಿಂದ ಶೃಂಗರಿಸಿದನು. ಅತ್ಯಂತ ಉತ್ಸಾಹದಿಂದ ಕಾರ್ಖಾನೆಯನ್ನು ಅಲಂಕರಿಸಿ ಒಳ್ಳೆಯ ಭೋಜನವನ್ನು ಏರ್ಪಡಿಸಿದನು.

ಆದರೆ ಆ ಆಚರಣೆಯ ಉದ್ದೇಶ ಏನೆಂದು ಅಲ್ಲಿದ್ದವರಿಗೆ ಗೊತ್ತಿರಲಿಲ್ಲ. ಕೊನೆಗೆ ಅಲ್ಲಿದ್ದವರು ಕುತೂಹಲ ತಾಳಲಾರದೆ ಈ ಆಚರಣೆಯ ಉದ್ದೇಶವೇನೆಂದು ಹೊಸ ಉದ್ದಿಮೆದಾರನನ್ನು ಕೇಳಿದರು. ಇಂದು ಪಕ್ಕದ ಉದ್ದಿಮೆದಾರನ ಜನ್ಮದಿನ. ಅದಕ್ಕಾಗಿ ಹಬ್ಬದ ಆಚರಣೆ ಎಂದನು. ಪರಸ್ಪರ ಅಷ್ಟೊಂದು ಅನ್ಯೋನ್ಯವಾಗಿಲ್ಲದಿದ್ದರೂ ಅವರ ಹುಟ್ಟುಹಬ್ಬವನ್ನು ಇವರು ಆಚರಿಸುವುದನ್ನು ಕಂಡು ಅಲ್ಲಿರುವವರೆಲ್ಲರೂ ಆಶ್ಚರ್ಯಚಕಿತರಾದರು. ಅದನ್ನು ಗಮನಿಸಿದ ಹೊಸ ಉದ್ಯಮಿ ಅರುಣ ಹೇಳಿದನು; ''ನಾನುಕೆಲವುವರ್ಷಗಳಹಿಂದೆಆಉದ್ಯಮಿಯಲ್ಲಿಯೇ ಕೆಲಸ ಮಾಡುತ್ತಿದ್ದೆ. ಅವರಿಂದಲೇ ಸಾಕಷ್ಟು ವಿದ್ಯೆ

ಕಲಿತೆ. ಜೀವನವಿಡೀ ಅವರೊಟ್ಟಿಗೆ ಇರಬೇಕೆಂದು ತೀರ್ಮಾನಿಸಿದ್ದೆ, ಆದರೆ, ದುರ್ದೈವಶಾತ್ ಒಂದು ದಿನ ಅವರು ನಾನು ಮಾಡಿದ ಸಣ್ಣತಪ್ಪಿಗಾಗಿ ಉದ್ಯಮದಿಂದ ನನ್ನನ್ನು ಹೊರ ಹಾಕಿದರು. ನಾನು ಪರಿಪರಿಯಾಗಿ ಬೇಡಿಕೊಂಡರೂ ಅವರು ಕರುಣೆ ತೋರಲಿಲ್ಲ, ಅವರು ಅಷ್ಟೇಕೆ ನಿಷ್ಕರುಣಿಯಾದರೆಂದು ಕೊರಗಿದೆ. ಅನಿವಾರ್ಯದಿಂದ ಹೊರಗೆ ಬರಲೇಬೇಕಾಯಿತು. ಕೆಲವು ದಿನಗಳು ಕಳೆದವು. ಅವರೇ ಕಲಿಸಿದ ವಿದ್ಯೆ ಕೈಯಲ್ಲಿತ್ತು. ಅದರ ಬಲದಿಂದ ಈ ಉದ್ದಿಮೆ ಸ್ಥಾಪಿಸಿದೆ. ಅಭಿವೃದ್ಧಿ ಹೊಂದಿದೆ. ಅವರ ಮೇಲೆ ಅವಲಂಬಿತನಾಗಿ ಬಾಳುವುದು ತಪ್ಪಿ ಸ್ವಾವಲಂಬಿಯಾದೆನು''.

''ಅವರು ಆಗಾಗ ಹೇಳುತ್ತಿದ್ದರು. ನಾವೆಲ್ಲ ಮರದ ಕೊಂಬೆಗಳ ಹಾಗೆ ಬೆಳೆಯುತ್ತ ಹೋಗಬೇಕು, ಕೊಂಬೆಗಳು ಬೇರೆ ಬೇರೆ ಆಗದಿದ್ದರೆ ಮರ ಬೆಳೆಯುವುದೆ ಇಲ್ಲ, ಅವರ ಮಾತು ನನ್ನ ಪಾಲಿಗೆ ನಿಜವಾಯಿತು. ಅಂದು ಅವರು ನಿಷ್ಕರುಣೆಯಿಂದ ನನ್ನನ್ನು ತಿರಸ್ಕರಿಸಿ ಹೊರಗೆ ಹಾಕದೇ ಇದ್ದಿದ್ದರೆ ನಾನು ಬೆಳೆಯುತ್ತಿರಲಿಲ್ಲ, ಅದಕ್ಕಾಗಿ ನಾನು ಪ್ರತಿವರುಷ ಅವರ ಹುಟ್ಟುಹಬ್ಬವನ್ನು ಆಚರಿಸಿ ಅವರಿಗೆ ಅಭಿನಂದನೆಯನ್ನು, ಧನ್ಯವಾದಗಳನ್ನು ಅರ್ಪಿಸುತ್ತೇನೆ'' ಎಂದನು.

ಬದುಕಿನಲ್ಲಿ ಬಂದ ಬವಣೆಗಳಿಗೆ ತಲೆಯ ಮೇಲೆ ಕೈ ಹೊತ್ತು ಕೂಡದೇ ದ್ವೇಷ, ಅಸೂಯೆಗಳನ್ನು ಸಾಧಿಸದೆ ಉಪಕಾರವನ್ನು ಸ್ಮರಿಸುತ್ತ, ತಾನು ಕಲಿತ ವಿದ್ಯೆಯನ್ನು ಪ್ರಯೋಗಿಸಿ, ಪ್ರಯತ್ನಿಸಿದ ಫಲದಿಂದ ಹೊಸ ಬದುಕು ಕಂಡನು. ಸಾಧಕನೆನಿಸಿದನು, ವಿಶಾಲ ಹೃದಯವಂತಿಕೆಯನ್ನು ಮೆರೆದು ಜನಪ್ರಿಯನಾದನು. ಹೀಗೆ ''ಸೋಲೇ ಗೆಲುವಿಗೆ ಮೂಲವಾಯಿತು''.

### ❖ ನನಗೆ ತಿಳಿದಂತೆ :

**ಕೊಟ್ಟ ಪ್ರಶ್ನೆಗಳಿಗೆ ನಿಖರವಾದ ಉತ್ತರಗಳನ್ನು ಆರಿಸಿ ಅವುಗಳ ಮುಂದೆ ಸರಿ ಚಿಹ್ನೆ (✓) ಹಾಕಿರಿ.**

**(ಕ) ಕೆಲವು ವರ್ಷಗಳ ಹಿಂದೆ ಹೊಸ ಉದ್ದಿಮೆದಾರನು ಎಲ್ಲಿ ಕೆಲಸ ಮಾಡುತ್ತಿದ್ದ.**

1) ಬೇರೆಯವರ ಕಾರ್ಖಾನೆಯಲ್ಲಿ ☐
2) ಗೆಳೆಯನ ಕಚೇರಿಯಲ್ಲಿ ☐
3) ಅವನ ಪಕ್ಕದ ಉದ್ದಿಮೆದಾರನ ಹತ್ತಿರ ☐
4) ತನ್ನ ಅಣ್ಣನ ಬಳಿಯಲ್ಲಿ ☐

**(ಖ) ಹೊಸ ಉದ್ದಿಮೆದಾರ ಯಾರ ಹುಟ್ಟುಹಬ್ಬವನ್ನು ಆಚರಿಸುವವನಿದ್ದ ?**

1) ತನ್ನ ತಂದೆಯ ☐
2) ತನ್ನ ಮೊದಲನೇ ಮಾಲಿಕನ ☐
3) ತನ್ನ ಅಣ್ಣನ ☐
4) ತನ್ನ ಹೆಂಡತಿಯ ☐

**(ಗ) ಹೊಸ ಉದ್ದಿಮೆದಾರನ ಹೆಸರು**

1) ಅರುಣ ☐
2) ವರುಣ ☐
3) ಕರುಣ ☐
4) ತರುಣ ☐

(ಫ) ''ನಾವೆಲ್ಲ ಮರದ ಕೊಂಬೆಗಳ ಹಾಗೆ ಇರಬೇಕು. ಬೇರೆಬೇರೆ ಆಗಬೇಕು. ಬೆಳೆಯುತ್ತಾ ಹೋಗಬೇಕು'' ಎಂದು ಹೇಳಿದವರು.

(1) ಅರುಣನ ಪಕ್ಕದ ಉದ್ದಿಮೆದಾರ ☐ (3) ಅರುಣನ ಗೆಳೆಯ ☐

(2) ಹೊಸ ಉದ್ದಿಮೆದಾರ ☐ (4) ಹೊಸ ಉದ್ದಿಮೆದಾರನ ತಂದೆ ☐

(ಚ) ''ಸೋಲೇ ಗೆಲುವಿನ ..........''

1) ಗುರಿ ☐ 3) ಆಶಯ ☐

2) ಆದರ್ಶ ☐ 4) ಮೂಲ ☐

## ಹೊಂದಿಸೋಣ ಬಾ.

| 'ಅ' | 'ಬ' |
|---|---|
| 1) ಉದ್ದಿಮೆದಾರ | i) ಸಂತೋಷ |
| 2) ಭೋಜನ | ii) ಉದ್ಯೋಗಸ್ಥ |
| 3) ಪೈಪೋಟಿ | iii) ಊಟ |
| 4) ಉತ್ಸಾಹ | iv) ಸ್ಪರ್ಧೆ |

## ಸಾಲುಗಳ ಮೇಲೆ ಚರ್ಚೆ

1) ನಾವೆಲ್ಲರೂ ಮರದ ಕೊಂಬೆಗಳ ಹಾಗೆ ಇರಬೇಕು.
2) ಜೀವನವಿಡೀ ಅವರೊಂದಿಗೆ ಇರಬೇಕೆಂದು ತೀರ್ಮಾನಿಸಿದ್ದೆ.

## ಯೋಚಿಸಿ ಬರೆ.

1) ಹೊಸ ಉದ್ದಿಮೆದಾರ ಮತ್ತು ಹಳೆಯ ಪ್ರಸಿದ್ಧ ಉದ್ದಿಮೆದಾರನ ನಡುವೆ ಯಾವ ರೀತಿಯ ಸಂಬಂಧವಿತ್ತು ?
2) ಹೊಸ ಉದ್ದಿಮೆದಾರ ಅರುಣನನ್ನು ಅವನ ಹಿಂದಿನ ಮಾಲಿಕ ಏಕೆ ನೌಕರಿಯಿಂದ ತೆಗೆದುಹಾಕಿದ ?
3) ಅರುಣನು ಒಬ್ಬ ಸಾಧಕ ಮತ್ತು ವಿಶಾಲ ಹೃದಯದವನು ಎಂದು ಏಕೆ ಜನಪ್ರಿಯನಾದನು ?
4) ನೀವು ಈ ಕಥೆಗೆ ಬೇರೆ ತಲೆಬರಹ ಕೊಡುವುದಾದರೆ ಏನೆಂದು ಕೊಡುವಿರಿ?
5) ಪಾಠದಲ್ಲಿ ಬಂದ ಗಾದೆ ಮಾತನ್ನು ಹುಡುಕಿ ಬರೆ.

❖ **ಪದಬಂಧ ಬಿಡಿಸು**

| | | |
|---|---|---|
| ವ್ಯಾ | ದ್ಯ | ಹ |
| ವೈ | ಪಾ | ಬ್ಬ |
| ರೈ | ತ | ರಿ |
| ಮಿ | ದ್ಯ | ಉ |
| ಸೈ | ನಿ | ಕ |

❖ **ಪದಬಂಧ ಸಹಾಯದಿಂದ ಕೆಳಗಿನ ಬಿಟ್ಟ ಸ್ಥಳಗಳನ್ನು ತುಂಬಿರಿ.**

1) ವಸ್ತುಗಳನ್ನು ಮಾರುವವ ----------------------
2) ಕಾರ್ಖಾನೆ ನಡೆಸುವ ಮಾಲಕ ----------------------

3) ಹೊಲದಲ್ಲಿ ದುಡಿಯುವವ ---------------------

4) ಜನರ ಆರೋಗ್ಯ ತಪಾಸಿಸುವವ -------------------

5) ದೇಶದ ರಕ್ಷಣೆಯನ್ನು ಮಾಡುವವ ------------------

## ಭಾಷೆ ತಿಳಿಯೋಣ

❖ **ಕೆಳಗಿನ ವಾಕ್ಯಗಳ ವಿಶೇಷಣಗಳನ್ನು ಗುರುತಿಸಿರಿ.**

1) ಒಬ್ಬ ಪ್ರಸಿದ್ಧ ಉದ್ದಿಮೆದಾರನಿದ್ದನು.

2) ಅರುಣ ಎಂಬ ಆ ಹೊಸ ಉದ್ದಿಮೆದಾರನು ತನ್ನ ಕಾರ್ಖಾನೆಯನ್ನು ಸುಂದರವಾಗಿ ಅಲಂಕರಿಸಿದನು.

3) 'ಅವರು ನನ್ನನ್ನು ತಿರಸ್ಕರಿಸಿ ಹೊರಗೆ ಹಾಕದೆ ಇದ್ದಿದ್ದರೆ ನಾನು ಬೆಳೆಯುತ್ತಿರಲಿಲ್ಲ'.

❖ **ಕೆಳಗಿನ ಸರ್ವನಾಮಗಳನ್ನು ಗುರುತಿಸಿ ಬರೆಯಿರಿ.**

1) ಪರಸ್ಪರ ಅಷ್ಟೊಂದು ಹಾರ್ದಿಕವಾಗಿಲ್ಲದಿದ್ದರೂ ಅವರ ಹುಟ್ಟುಹಬ್ಬವನ್ನು ಇವರು ಆಚರಿಸುತ್ತಾರೆ.

2) ಅರುಣ ಒಬ್ಬ ಸಾಧಕ, ಅವನು ವಿಶಾಲ ಹೃದಯವಂತಿಕೆಯನ್ನು ಮೆರೆದು ಜನಪ್ರಿಯನಾದನು.

3) ಅವಳು ತುಂಬಾ ಉತ್ತಮವಾಗಿ ಹಾಡುತ್ತಾಳೆ.

❖ **ಅಡಿಗೆರೆ ಹಾಕಿದ ವಿಭಕ್ತಿ ಪ್ರತ್ಯಯಗಳನ್ನು ಗುರುತಿಸಿರಿ.**

1) ಉದ್ದಿಮೆದಾರನ ಜನ್ಮದಿನವನ್ನು ಆಚರಿಸುವವರಿದ್ದರು.

2) ಹುಟ್ಟುಹಬ್ಬವಿದೆ ಎಂದು ಕಾರ್ಖಾನೆಯನ್ನು ಅಲಂಕರಿಸಿದನು.

3) ನಿಷ್ಕರುಣೆಯಿಂದ ನನ್ನನ್ನು ಹೊರಗೆ ಹಾಕಿದರು.

## ವಿರುದ್ಧಾರ್ಥಕ ಶಬ್ದಗಳನ್ನು ಬರೆಯಿರಿ.







## ಕೆಳಗಿನ ಶಬ್ದಗಳ ಅರ್ಥಗಳನ್ನು ಶಬ್ದಕೋಶದಲ್ಲಿ ಹುಡುಕಿ ಬರೆಯಿರಿ.

1) ದುರ್ದೈವಶಾತ್ 2) ನಿಷ್ಕರುಣೆ 3) ಅಭಿವೃದ್ಧಿ 4) ತಿರಸ್ಕರಿಸು 5) ಅರ್ಪಿಸು

## ನಿನ್ನ ಹುಡುಕಾಟ

''ಸೋಲೇ ಗೆಲುವಿನ ಮೆಟ್ಟಿಲು'' ಈ ಗಾದೆಗೆ ಅನುಸರಿಸಿ ಒಂದು ಕಥೆಯನ್ನು ಹುಡುಕಿ ಬರೆ.

## ವರ್ಣಗಳ ಉಚ್ಚಾರಣೆಯ ಉಗಮಸ್ಥಾನ

''ಧ್ವನಿ ಎಲ್ಲಿಂದ ಬಂತು?''

**1. ಉದ್ದೇಶ:**

ವಿದ್ಯಾರ್ಥಿಗಳು ಕನ್ನಡ ವರ್ಣಮಾಲೆಯ ಅಕ್ಷರಗಳನ್ನು ಉಚ್ಚರಿಸುವಾಗ ಜಿಹ್ವೆ (ನಾಲಿಗೆ), ತುಟಿ, ಹಲ್ಲು ಮತ್ತು ಗಂಟಲು ಹೇಗೆ ಕೆಲಸ ಮಾಡುತ್ತವೆ ಎಂಬುದನ್ನು ಪ್ರಾಯೋಗಿಕವಾಗಿ ತಿಳಿಯುವುದು.

**2. ಬೇಕಾಗುವ ಸಾಮಗ್ರಿಗಳು:**

ವರ್ಣಮಾಲೆಯ ಅಕ್ಷರಗಳಿರುವ ಕಾರ್ಡ್‌ಗಳು. ಒಂದು ಸಣ್ಣ ಕನ್ನಡಿ (ಐಚ್ಛಿಕ - ವಿದ್ಯಾರ್ಥಿಗಳು ತಮ್ಮ ಬಾಯಿಯ ಚಲನೆ ನೋಡಲು). ಕಪ್ಪು ಹಲಗೆ ಮತ್ತು ಬಳಪ.




**3. ಚಟುವಟಿಕೆ:**

**ಹಂತ 1: ಗಮನಿಸಿ ಮತ್ತು ಉಚ್ಚರಿಸಿ**

ಶಿಕ್ಷಕರು ಈ ಕೆಳಗಿನ ಅಕ್ಷರ ಗುಂಪುಗಳನ್ನು ಬರೆದು ಮಕ್ಕಳನ್ನು ನಿಧಾನವಾಗಿ ಉಚ್ಚರಿಸಲು ಹೇಳಬೇಕು:

**ಗುಂಪು ಎ** (ಕ, ಖ, ಗ, ಘ): ಇವುಗಳನ್ನು ಹೇಳುವಾಗ ಗಂಟಲಿನ ಮೇಲೆ ಕೈ ಇಟ್ಟು ಕಂಪನವನ್ನು ಗಮನಿಸಲು ತಿಳಿಸಿ. (ಇವು ಕಂಠ್ಯಗಳು)

**ಗುಂಪು ಬಿ** (ಚ, ಛ, ಜ, ಝ): ನಾಲಿಗೆಯು ಮೇಲ್ಭಾಗದ ತಾಲುವಿಗೆ (ಅಂಗಳಕ್ಕೆ) ತಾಗುವುದನ್ನು ಗಮನಿಸಿ. (ಇವು ತಾಲವ್ಯಗಳು)

**ಗುಂಪು ಸಿ** (ಟ, ಠ, ಡ, ಢ): ನಾಲಿಗೆಯು ಮಡಚಿಕೊಂಡು ಮೇಲ್ಭಾಗಕ್ಕೆ ತಾಗುವುದನ್ನು ಗಮನಿಸಿ. (ಇವು ಮೂರ್ಧನ್ಯಗಳು)

**ಗುಂಪು ಡಿ** (ತ, ಥ, ದ, ಧ): ನಾಲಿಗೆಯು ಹಲ್ಲುಗಳಿಗೆ ತಾಗುವುದನ್ನು ಗಮನಿಸಿ. (ಇವು ದಂತ್ಯಗಳು)

**ಗುಂಪು ಇ** (ಪ, ಫ, ಬ, ಭ): ಎರಡು ತುಟಿಗಳು ಪರಸ್ಪರ ತಾಗುವುದನ್ನು ಗಮನಿಸಿ. (ಇವು ಓಷ್ಠ್ಯ ಗಳು)

**ಹಂತ 2: 'ಧ್ವನಿ ಪತ್ತೆದಾರಿ' ಆಟ**

ಮಕ್ಕಳನ್ನು ಐದು ತಂಡಗಳಾಗಿ ವಿಂಗಡಿಸಿ (ಕಂಠ್ಯ, ತಾಲವ್ಯ, ಮೂರ್ಧನ್ಯ, ದಂತ್ಯ, ಓಷ್ಠ್ಯ). ಶಿಕ್ಷಕರು ಒಂದು ಅಕ್ಷರವನ್ನು (ಉದಾಹರಣೆಗೆ: 'ಮ') ಜೋರಾಗಿ ಹೇಳಿದಾಗ, ಆ ಅಕ್ಷರ ಯಾವ ಸ್ಥಾನಕ್ಕೆ ಸೇರುತ್ತದೆಯೋ ಆ ತಂಡದವರು ಎದ್ದು ನಿಲ್ಲಬೇಕು.

ಅಪಯಶಸ್ಸು ಯಶಸ್ಸಿನ ಮೊದಲ ಮೆಟ್ಟಿಲು

# 5. ಭಾಗ್ಯರವಿ

**ಕವಿ ಪರಿಚಯ** ಡಿ . ಎನ್. ಅಕ್ಕಿ ಇವರ ತಂದೆ ಶ್ರೀ. ನಾಭಿರಾಜ ತಾಯಿ ಶ್ರೀಮತಿ ಶ್ರೀಕಾಂತಮ್ಮ. ಅಕ್ಕಿಯವರು ಶ್ರೇಷ್ಠ ಕಲಾವಿದ, ಸಂಶೋಧಕ, ಖ್ಯಾತ ಲೇಖಕರು ಹಾಗೂ ಆದರ್ಶ ಶಿಕ್ಷಕರು. ವೃತ್ತಿಯಿಂದ ಚಿತ್ರಕಲಾ ಶಿಕ್ಷಕರು, ಪ್ರವೃತ್ತಿಯಿಂದ ಬಹುಮುಖ ಪ್ರತಿಭೆಯುಳ್ಳ ವಿದ್ವಾಂಸರು. ಪ್ರೌಢ ಸಾಹಿತ್ಯ, ಮಕ್ಕಳ ಸಾಹಿತ್ಯ ಎರಡರಲ್ಲೂ ರಾಜ್ಯ ಹಾಗೂ ರಾಷ್ಟ್ರ ಪ್ರಶಸ್ತಿಯನ್ನು ಪಡೆದಿದ್ದಾರೆ. ಅವುಗಳಲ್ಲಿ ರಾಜ್ಯೋತ್ಸವ ಪ್ರಶಸ್ತಿ ಕೂಡಾ ಒಂದು. ಇವರು ತಮ್ಮ ಸಾಹಿತ್ಯ ಸೇವೆಗಾಗಿ ನೂರಾರು ಪ್ರಶಸ್ತಿಗಳನ್ನು ಪಡೆದಿರುವರು. ಒಟ್ಟಿನಲ್ಲಿ ಇವರು ಪಶಸ್ತಿಗಳ ಮುಕುಟವೆಂದೇ ಹೇಳಬಹುದು. ಇವರ 'ಹಕ್ಕಿ ಹಾಂಗ' ಈ ಕವನ ಸಂಕಲನದಿಂದ ಭಾಗ್ಯರವಿ' ಕವಿತೆಯನ್ನು ಆರಿಸಿಕೊಳ್ಳಲಾಗಿದೆ.

ಪ್ರಸ್ತುತ ಕವಿತೆಯಲ್ಲಿ ಲೇಖಕರು ನಾವು ನಮ್ಮ ನಾಡಿನ ಮುನ್ನಡೆಗಾಗಿ ಏನೇನು ಮಾಡಬೇಕು ಎಂಬುದರ ಕುರಿತು ಸಂದೇಶ ನೀಡಿದ್ದಾರೆ.

ತಾಯ್ನಾಡ ಮುನ್ನಡೆಗೆ ದುಡಿಯೋಣ ಬನ್ನಿ
ಚಿನ್ನದ ನಾಡಾಗಿ ಬೆಳೆಸೋಣ ಬನ್ನಿ ||ಪ||

ಹೊಲಗದ್ದೆಗೆ ಹಸಿರು ತುಂಬಿ
ಜೀವನಕ್ಕೆ ಉಸಿರು ತುಂಬಿ ।
ನೆಲ ಮುಗಿಲನು ಸಮೃದ್ಧಿಯ
ತ್ರಿವಿಕ್ರಮ ನಾವಾಗಿ
ತಾಯ್ನಾಡ ಮುನ್ನಡೆಗೆ ದುಡಿಯೋಣ ಬನ್ನಿ|| 1 ||

ಕಲಿಗಳಾಗಿ ಕಾದುವ ನಾವು
ಅರಿ ಕುಲದ ಅಳಿವಿಗೆ ।
ಗಾಳಿಯಾಗಿ ಉರುಳುವಾ
ನಾಡಗುಡಿಯ ತೇರಿಗೆ
ತಾಯ್ನಾಡ ಮುನ್ನಡೆಗೆ ದುಡಿಯೋಣ ಬನ್ನಿ || 2 ||

ಎದೆ ಎದೆಯಲಿ ಪ್ರಜ್ವಲಿಸಲಿ
ಭ್ರಾತೃತ್ವದ ಜ್ಯೋತಿ ।
ಹೃದಯ ವೈಶಾಲ್ಯದಲಿ
ಮೂಡಿಬರಲಿ ಪ್ರೀತಿ
ತಾಯ್ನಾಡ ಮುನ್ನಡೆಗೆ ದುಡಿಯೋಣ ಬನ್ನಿ || 3 ||

ಭೇದ ಭಾವ ಹೊರಗೆ ದೂಡಿ
ಭಾವೈಕ್ಯದ ಮಂತ್ರ ಹಾಡಿ ।
ಉದಯಿಸಲಿ ಭಾಗ್ಯ ರವಿ
ಭಾರತದ ಬಾಂದಳದಿ
ತಾಯ್ನಾಡ ಮುನ್ನಡೆಗೆ ದುಡಿಯೋಣ ಬನ್ನಿ || 4 ||



ಡಿ. ಎನ್. ಅಕ್ಕಿ

## ❖ ನನಗೆ ತಿಳಿದಂತೆ :

**ಕೆಳಗಿನ ಪ್ರಶ್ನೆಗಳಿಗೆ ಯೋಗ್ಯ ಉತ್ತರವನ್ನು ಹುಡುಕಿ ಅದಕ್ಕೆ ಸರಿ (✓) ಚಿಹ್ನೆ ಹಾಕು.**

1) ತಾಯ್ನಾಡ ಮುನ್ನಡೆಗೆ ಏನು ಮಾಡಬೇಕೆಂದು ಕವಿ ಹೇಳಿದ್ದಾರೆ?

1) ಕುಣಿಯೋಣ ☐ 2) ಕಲಿಯೋಣ ☐ 3) ದುಡಿಯೋಣ ☐ 4) ನಲಿಯೋಣ ☐

2) ಅರಿ ಕುಲದ ಅಳಿವಿಗೆ ನಾವು ಏನು ಮಾಡಬೇಕು?

1) ದುಡಿಯಬೇಕು ☐ 2) ಪ್ರಜ್ವಲಿಸಬೇಕು ☐ 3) ಮುನ್ನಡೆಯಬೇಕು ☐ 4) ಕಲಿಗಳಾಗಬೇಕು ☐

3) ಹೃದಯ ವೈಶಾಲ್ಯದಲ್ಲಿ ಏನು ಮೂಡಿ ಬರಬೇಕು?

1) ಕೃತಿ ☐ 2) ಜ್ಯೋತಿ ☐ 3) ಭಾವೈಕ್ಯ ☐ 4) ಪ್ರೀತಿ ☐

4) ಭಾರತದ ಬಾಂದಳದಿ ಭಾಗ್ಯರವಿ ಯಾವಾಗ ಉದಯಿಸುತ್ತದೆ?

1) ದುಡಿಯುವುದರಿಂದ ☐ 3) ಹೃದಯ ವೈಶಾಲ್ಯದಿಂದ ☐

2) ಭೇದಭಾವ ಹೊರಗೆ ದೂಡುವುದರಿಂದ ☐ 4) ಕಲಿಗಳಾಗುವುದರಿಂದ ☐



## ಹೊಂದಿಸೋಣ ಬಾ :

| 'ಅ' | 'ಬ' |
|---|---|
| 1) ಚಿನ್ನದ ನಾಡಾಗಿ | ಅ) ತೇರಿಗೆ |
| 2) ಭಾವೈಕ್ಯದ | ಬ) ತ್ರಿವಿಕ್ರಮನಾವಾಗಿ |
| 3) ಉದಯಿಸಲಿ | ಕ) ಮಂತ್ರ ಹಾಡಿ |
| 4) ನೆಲ ಮುಗಿಲು ಸಮೃದ್ಧಿಯ | ಡ) ಭಾಗ್ಯರವಿ |
| 5 ) ನಾಡಗುಡಿಯ | ಇ) ಬೆಳೆಸೋಣ ಬನ್ನಿ |



## ಯೋಚಿಸಿ ಬರೆ

1) 'ಭಾಗ್ಯರವಿ' ಕವಿತೆಯ ಆಶಯ ಯಾವುದು? ವಿವರಿಸಿ ಬರೆ.

2) ಭಾರತದ ಪ್ರಗತಿಗೆ ಯಾವ ಯಾವ ಧೋರಣೆಗಳನ್ನು ಹೇಳಲಾಗಿದೆ?

3) ನಿಮ್ಮ ಶಾಲೆಯಲ್ಲಿ ಆಚರಿಸುವ ರಾಷ್ಟ್ರೀಯ ಹಬ್ಬಗಳ ವರ್ಣನೆ ಮಾಡಿ.



## ಸಾಲುಗಳ ಮೇಲೆ ಚರ್ಚೆ :

**ಕೆಳಗಿನ ಕವಿತೆಯ ಸಾಲುಗಳನ್ನು ಓದಿ ಅದರ ಮೇಲೆ ಚರ್ಚೆ ಮಾಡಿರಿ.**

1) ''ಹೊಲಗದ್ದೆಗೆ ಹಸಿರು ತುಂಬಿ ಜೀವನಕ್ಕೆ ಉಸಿರು ತುಂಬಿ ನೆಲ ಮುಗಿಲು ಸಮೃದ್ಧಿಯ ತ್ರಿವಿಕ್ರಮನಾವಾಗಿ''

2) 'ಭೇದಭಾವ ಹೊರಗೆ ದೂಡಿ ಭಾವೈಕ್ಯದ ಮಂತ್ರ ಹಾಡಿ ಉದಯಿಸಲಿ ಭಾಗ್ಯರವಿ ಭಾರತದ ಬಾಂದಳದಿ'

## ❖ ರಚಿಸೋಣ ಬಾ.

'ಭಾಗ್ಯರವಿ' ಕವಿತೆಯಲ್ಲಿ ಬಂದಿರುವ ಪ್ರಾಸಯುಕ್ತ ಪದಗಳ ಪಟ್ಟಿ ಮಾಡಿ ಅವುಗಳನ್ನು ಬಳಸಿ ಸ್ವಂತ ಕವಿತೆ ರಚಿಸು.

❖ **ಭಾಷೆ ತಿಳಿಯೋಣ ಬಾ.**

**1) ಕೆಳಗಿನ ವಾಕ್ಯಗಳಲ್ಲಿಯ ವಿಶೇಷಣ ಗುರುತಿಸಿ ಬರೆ.**

1) ಚಿನ್ನದ ನಾಡಾಗಿ ಬೆಳಸೋಣ ಬನ್ನಿ.

2) ಜನರಲ್ಲಿ ಹೃದಯವೈಶಾಲ್ಯ ಮೂಡಬೇಕು.

**2) ಕೆಳಗಿನ ಪರಿಚ್ಛೇದದಲ್ಲಿ ಸರಿಯಾದ ವಿರಾಮ ಚಿಹ್ನೆಗಳನ್ನು ಉಪಯೋಗಿಸಿ ಬರೆ.**

ಭಾರತ ನಮ್ಮ ದೇಶ ಭ್ರಾತೃತ್ವದ ಭಾವೈಕ್ಯದ ಮತ್ತು ಭೇದಭಾವವನ್ನು ತೆಗೆದುಹಾಕುವ ಧೋರಣೆಗಳು ನಮ್ಮದಾಗಿವೆ ಇದಕ್ಕಾಗಿ ಏನು ಮಾಡಬೇಕು ಎಂಬುದನ್ನು ಕವಿ ಹೇಳಿದ್ದಾರೆ.

**3) ಕಂಸಿನಲ್ಲಿ ಸೂಚಿಸಿದಂತೆ ಕೊಟ್ಟ ವಾಕ್ಯಗಳ ಕಾಲ ಬದಲಾಯಿಸಿ ಬರೆ.**

1) ನಾನು ಮಹೇಶನ ಮನೆಗೆ ಮನೆಗೆಲಸ ಮಾಡಲು ಹೋಗಿದ್ದೆ. (ಭವಿಷ್ಯತ್ ಕಾಲದಲ್ಲಿ ಬದಲಿಸು)

---

2) ನಾನು ಊರಿಗೆ ಹೋಗುವೆ. (ವರ್ತಮಾನ ಕಾಲದಲ್ಲಿ ಬದಲಿಸು)

---

3) ನಾನು ಚಿತ್ರ ಬಿಡಿಸುತ್ತಿದ್ದೇನೆ. (ಭೂತಕಾಲಕ್ಕೆ ಪರಿವರ್ತಿಸು)

---

**ನಿನ್ನ ಹುಡುಕಾಟ.**

1) ನೀವು ಪ್ರತಿದಿನ ದಿನಪತ್ರಿಕೆಯನ್ನು ಓದುತ್ತೀರಾ? ಅದರಲ್ಲಿ ಬರುವ ಭಾರತದ ಬೇರೆ ಬೇರೆ ರಾಜ್ಯಗಳ ಉಡುಗೆ ತೊಡುಗೆ, ಆಹಾರ-ವಿಹಾರ, ಭಾಷೆಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿರಿ.

2) ಅಂತರ್ಜಾಲ ಅಥವಾ ಗ್ರಂಥಾಲಯದ ಪುಸ್ತಕಗಳಿಂದ ದೇಶಭಕ್ತಿಗೀತೆಗಳನ್ನು ಹುಡುಕಿ ವರ್ಗದಲ್ಲಿ ಹಾಡು.

**ಶಬ್ದಗಳನ್ನು ಗುಣಿತಾಕ್ಷರಗಳಿಂದ ವಿಭಜಿಸುವ ಕ್ರಮದಂತೆ ವಿಭಜಿಸಿ ಬರೆ.**

ಉದಾ : ಭಾರತ = ಭ್ + ಆ + ರ್ + ಅ + ತ್ + ಅ

ಕಾವೇರಿ = 　　　　 ಕಂಬ =

ಹೃದಯ = 　　　　 ಸೌರಭ =

**ಕೊಟ್ಟ ಶಬ್ದಗಳನ್ನು ಒತ್ತಕ್ಷರಗಳ ವಿಭಜನೆಯ ಕ್ರಮದಂತೆ ಶಬ್ದಗಳನ್ನು ವಿಭಜಿಸಿ ಬರೆ.**

ಉದಾ : ಪುಸ್ತಕ = ಪ್ + ಉ + ಸ್ + ತ್ + ಅ + ಕ್ + ಅ

ಆಪ್ತ =

ಸತ್ಕಾರ =

ಸ್ವಾತಂತ್ರ್ಯ =

ಪ್ರಾರ್ಥನೆ =

ವಿವಿಧತೆಯಲ್ಲಿ ಏಕತೆ, ಭಾರತದ ವಿಶೇಷತೆ

# 6. ಧನಾತ್ಮಕ ದೃಷ್ಟಿ

ಲೇಖಕರ ಪರಿಚಯ: ಡಾ. ಗುರುರಾಜ ಕರಜಗಿ (ಜನನ : 1952) ಡಾ. ಗುರುರಾಜ ಕರಜಗಿ ಅವರು ಖ್ಯಾತ ಶಿಕ್ಷಣ ತಜ್ಞರು, ಲೇಖಕರು ಮತ್ತು ಪ್ರೇರಕ ಭಾಷಣಕಾರರು. 'ಕರುಣಾಳು ಬಾ ಬೆಳಕೆ' ಸರಣಿ ಸೇರಿದಂತೆ ಅನೇಕ ಜನಪ್ರಿಯ ಪುಸ್ತಕಗಳನ್ನು ಬರೆದಿದ್ದಾರೆ. ಇಪ್ಪತ್ತೆರಡಕ್ಕೂ ಹೆಚ್ಚು ಪುಸ್ತಕಗಳು, ಹದಿನೆಂಟು ನೂರಕ್ಕೂ ಹೆಚ್ಚು ಅಂಕಣಗಳನ್ನು ಪ್ರಕಟಿಸಿ ಸಾಧನೆಗೈದಿದ್ದಾರೆ. ಇವರಿಗೆ ಪದ್ಮಶ್ರೀ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕೆಂಪೇಗೌಡ ಪ್ರಶಸ್ತಿ ಸಂದಿವೆ. 'Knowledge is spherical' ಎಂಬ ಯುಟ್ಯೂಬ್ ಚಾನೆಲ್ ಹೊಂದಿದ್ದಾರೆ.

ಪ್ರಸ್ತುತ ಪಾಠವನ್ನು 'ಕರುಣಾಳು ಬಾ ಬೆಳಕೆ' ಎಂಬ ಸರಣಿಯಿಂದ ಆಯ್ದುಕೊಳ್ಳಲಾಗಿದೆ. ಈ ಪಾಠದಲ್ಲಿ ಸಕಾರಾತ್ಮಕ ದೃಷ್ಟಿಕೋನವನ್ನು ಬಿಂಬಿಸಲಾಗಿದೆ.



ಗುರುರಾಜ ಕರಜಗಿಯವರ ಸ್ನೇಹಿತರೊಬ್ಬರು ಹೇಳಿದ ಕಥೆ. ಅದರ ಸಂದೇಶ ಮಾರ್ಮಿಕವಾದದ್ದು.

ಅವರೊಂದು ದಿನ ಸಾಯಂಕಾಲ ಯಾರನ್ನೋ ಕಾಣುವುದಕ್ಕೆ ಪಟ್ಟಣದ ಬೇರೊಂದು ಭಾಗಕ್ಕೆ ಹೋಗಬೇಕಿತ್ತು. ಅಂದೇ ಅವರಿಗೆ ಮಗನ ಪುಸ್ತಕ ತರಲು ಕೂಡ ಪಟ್ಟಣದ ಇನ್ನೊಂದು ಭಾಗಕ್ಕೆ ಹೋಗಬೇಕಾಗಿತ್ತು ಕಾರಣ ಮರುದಿನ ಅವನ ಶಾಲೆ ಪ್ರಾರಂಭವಾಗುವದಿತ್ತು. ಆದರೆ ಅಂದು ಅವರಿಗೆ ಆಫೀಸಿನಿಂದ ಮನೆಗೆ ಬರಲು ತಡವಾಯಿತು.

ಅವರು ಭೇಟಿಯಾಗಲು ಹೋಗುವ ಮನೆಯವರು ಸಮಯಕ್ಕೆ ಬಹಳ ಮಹತ್ವ ನೀಡುವಂಥವರು, ತಡವಾಗಿ ಹೋದರೆ ಕೋಪಗೊಳ್ಳುವರು ಎಂದು ಇವರಿಗೆ ಆತಂಕ ಹೆಚ್ಚಾಗತೊಡಗಿತು.

ಆಗಲೇ ಆರು ಗಂಟೆ ಹತ್ತು ನಿಮಿಷ, ಕಾರನ್ನು ಅವಶ್ಯಕತೆಗಿಂತ ಹೆಚ್ಚು ವೇಗದಲ್ಲೇ ಓಡಿಸುತ್ತಿದ್ದರು. ಆದರೆ ರಸ್ತೆಯಲ್ಲಿ ಜನಸಂದಣಿ, ವಾಹನಗಳ ದಟ್ಟಣೆ ತುಂಬಾ ಹೆಚ್ಚಾಗಿತ್ತು. ಅದರಲ್ಲೂ ದಾರಿಯಲ್ಲಿ ಅನೇಕ ಸಿಗ್ನಲ್‌ಗಳು. ಇವರು ಹೇಗಾದರೂ ಮಾಡಿ ಸಿಗ್ನಲ್ ದಾಟಬೇಕೆಂದು ಎಷ್ಟೇ ಪ್ರಯತ್ನ ಮಾಡಿದರೂ ಇವರ ಕಾರು ಸಿಗ್ನಲ್ ಹತ್ತಿರ ಬರುತ್ತಲೇ ಕೆಂಪು ದೀಪ ಬರುತ್ತಿತ್ತು.

''ಛೇ! ನಮ್ಮದೇ ಕೊನೆಯ ಕಾರು ಒಂದೇ ಒಂದು ಕ್ಷಣ ಬೇಗ ಬಂದಿದ್ದರೆ ಸಿಗ್ನಲ್ ದಾಟಿಬಿಡುತ್ತಿದ್ದೆ''. ಎಂದರು ಬೇಜಾರಿನಿಂದ. ಹಸಿರು ದೀಪ ಬಂದೊಡನೆ ಮತ್ತೆ ನುಗ್ಗಿದರು. ಇವರ ದುರ್ದೈವಕ್ಕೆ ಮುಂದಿನ ಸಿಗ್ನಲ್‌ನಲ್ಲೂ ಹಾಗೆಯೇ ಆಯಿತು. ಇವರು ಬರುವ ಹೊತ್ತಿಗೆ ಮತ್ತೆ ಕೆಂಪು ದೀಪ ಬಂದಿತು. ''ಮತ್ತೆ ನಮ್ಮದೇ ಕೊನೆಯ ಕಾರು'' ಎಂದು ಕೋಪದಿಂದ ಕಾರಿನ ಬಾಗಿಲನ್ನು ಗುದ್ದಿದರು. ಆದರೆ ಅವರ ಪುಟ್ಟ ಮಗ ಮಾತ್ರ ಸಂತೋಷದಿಂದ ಚಪ್ಪಾಳೆ ತಟ್ಟುತ್ತಿದ್ದ.

ಇವರ ಕೋಪ ಇನ್ನೂ ಏರಿತು. ಮುಂದಿನ ಸಿಗ್ನಲ್‌ನಲ್ಲಾದರೂ ಪಾರಾಗಿ ಬಿಡುತ್ತೇನೆ ಎಂದು ತುಸು ವೇಗವಾಗಿಯೇ ಕಾರು ಓಡಿಸಿ ಮುಂದೆ ನುಗ್ಗಿದರು.

ಆದರೆ ಮತ್ತೇ ಅದೇ ಫಲಿತಾಂಶ. ಇನ್ನೇನು ಸಿಗ್ನಲ್ ದಾಟಬೇಕು ಎನ್ನುವಾಗ ಕೆಂಪು ದೀಪ ಹೊಳೆಯಿತು. ''ದರಿದ್ರದ್ದು ಮತ್ತೆ ನಮ್ಮದೆ ಕಡೆಯ ಕಾರು'' ಎಂದರು. ಯಜಮಾನರ ಕೋಪ ತಾರಕಕ್ಕೇರಿತ್ತು. ಅವರ ಪುಟ್ಟ ಮಗ ಮಾತ್ರ ಅತೀವ ಸಂತೋಷದಿಂದ ಕೈ ತಟ್ಟಿ ''ಅಪ್ಪಾ ಪ್ರತಿ ಸಲ ನಾವೇ ಮೊದಲು'' ಎಂದ. ''ಎಲ್ಲಿ ಮೊದಲು? ಪ್ರತಿ ಸಲ ನಾವೇ ಕೊನೆಯವರು, ಕಾಣುವುದಿಲ್ಲವೇ? ನಾವು ಬಂದಾಗಲೇ ಕೆಂಪುದೀಪ ಬರುತ್ತದೆ'' ಎಂದರು ತಂದೆ. ''ಹಾಗಲ್ಲಪ್ಪ, ಪ್ರತಿ ಬಾರಿ ಹಸಿರು ದೀಪ ಬಂದಾಗ ನಾವೇ ಮೊದಲು ಮುಂದೆ ಹೋಗುವುದು ನಮ್ಮ ಹಿಂದೆ ಎಷ್ಟು ವಾಹನಗಳು ನಿಂತಿವೆ ನೋಡು.'' ಎಂದನು ಸಂತೋಷದಿಂದ. ತಂದೆಯ ಕೋಪ ಇಳಿದು ಹೋಯಿತು.



'ಹೌದಲ್ಲವೆ ? ಕೆಂಪು ದೀಪ ಬಂದಾಗಲೆಲ್ಲ ನಾನೇ ಕೊನೆಯವನು ಎನ್ನುವುದಕ್ಕಿಂತ, ಹಸಿರು ದೀಪ ಬಂದಾಗಲೆಲ್ಲ ನಾನೇ ಮೊದಲನೆಯವನು, ಎಂದು ಭಾವಿಸುವುದು ಎಷ್ಟೊಂದು ಒಳ್ಳೆಯದಲ್ಲವೆ' ಎಂದುಕೊಂಡರು.

ಜೀವನದಲ್ಲಿ ಹೀಗೆ ಭಾವಿಸುವುದು ಕ್ಷೇಮ. ಕೇಡುಗಳ ಮಧ್ಯೆ ಒಳಿತನ್ನು ಕಾಣುವುದು. ದೈಹಿಕ ಹಾಗೂ ಮಾನಸಿಕ ಆರೋಗ್ಯಕ್ಕೆ ತುಂಬಾ ಒಳ್ಳೆಯದು. ಈ ಧನಾತ್ಮಕ ದೃಷ್ಟಿ ಬದುಕಿನಲ್ಲಿ ಉತ್ಸಾಹವನ್ನು, ಚೈತನ್ಯವನ್ನೂ ತುಂಬುತ್ತದೆ.

## ❖ ನನಗೆ ತಿಳಿದಂತೆ

**ಅ) ಕೆಳಗೆ ಕೊಟ್ಟ ಪ್ರಶ್ನೆಗಳ ಸರಿಯಾದ ಉತ್ತರ ಯಾವುದಿದೆ? ಅದರ ಎದುರಿಗೆ (✓) ಈ ಚಿಹ್ನೆಯನ್ನು ತೋರಿಸಿ. ಆಯ್ಕೆ ಮಾಡಿದ ಉತ್ತರಗಳ ಕಾರಣಗಳನ್ನು ಹೇಳು.**

1) ಲೇಖಕರ ಸ್ನೇಹಿತರು ಪಟ್ಟಣದ ಮತ್ತೊಂದು ಭಾಗಕ್ಕೆ ಯಾವ ಸಮಯದಲ್ಲಿ ಹೋಗುವವರಿದ್ದರು?

1) ಬೆಳಿಗ್ಗೆ ☐ 2) ರಾತ್ರಿ ☐ 3) ನಸುಕು ☐ 4) ಸಾಯಂಕಾಲ ☐

2) ಯಾವ ದೀಪ ಹೊತ್ತಿದಾಗ ಕೋಪ ಬರುತಿತ್ತು?

1) ಹಳದಿ ದೀಪ ☐ 2) ಹಸಿರು ದೀಪ ☐ 3) ಕೆಂಪು ದೀಪ ☐ 4) ಯಾವುದು ಇಲ್ಲ ☐

## ಹೊಂದಿಸೋಣ ಬಾ

ಕೆಳಗೆ ಪಾಠದಲ್ಲಿಯ ಕೆಲವು ಶಬ್ದಗಳನ್ನು ಆಯ್ಕೆ ಮಾಡಿಕೊಡಲಾಗಿದೆ. ಗುಂಪಿನಲ್ಲಿ ಆ ಶಬ್ದಗಳನ್ನು ಚರ್ಚಿಸಿರಿ ಮತ್ತು ಅವುಗಳನ್ನು ಸರಿಯಾದ ಅರ್ಥ/ಸಂದರ್ಭಗಳೊಂದಿಗೆ ಹೊಂದಿಸಿರಿ. ಇದಕ್ಕಾಗಿ ನೀವು ಶಬ್ದಕೋಶ, ಅಂತರ್ಜಾಲ ಇಲ್ಲವೇ ನಿಮ್ಮ ಶಿಕ್ಷಕರ ಸಹಾಯವನ್ನು ತೆಗೆದುಕೊಳ್ಳಿರಿ.

| ಶಬ್ದಗಳು. | ಅರ್ಥ / ಸಂದರ್ಭ |
|---|---|
| 1) ಜನಸಂದಣಿ | ಅ) ರಸ್ತೆಯ ಸಾಮರ್ಥ್ಯಕ್ಕಿಂತ ಹೆಚ್ಚಿನ ಸಂಖ್ಯೆಯ ವಾಹನಗಳು ಏಕಕಾಲಕ್ಕೆ ಸಂಚರಿಸುವುದು. |
| 2) ಮಾರ್ಮಿಕ | ಆ) ಅತೀ ಹೆಚ್ಚಿನ ಸಂಖ್ಯೆಯಲ್ಲಿ ಜನರು ಗುಂಪುಗೂಡುವುದು. |
| 3) ವಾಹನದಟ್ಟಣೆ | ಇ) ಜೀವನದ ಸವಾಲುಗಳನ್ನು ಆಶಾವಾದದಿಂದ ಮತ್ತು ಸಕಾರಾತ್ಮಕವಾಗಿ ಕಾಣುವ ಮನಸ್ಥಿತಿ |
| 4) ಧನಾತ್ಮಕ ದೃಷ್ಟಿ | ಈ) ಹೃದಯಕ್ಕೆ ನೇರವಾಗಿ ತಟ್ಟುವ ಅಥವಾ ಭಾವನೆಗಳನ್ನು ಆಳವಾಗಿ ಮುಟ್ಟುವ |

## ಸಾಲುಗಳ ಮೇಲೆ ಚರ್ಚೆ

ಪಾಠದಲ್ಲಿಯ ಕೆಲವು ಸಾಲುಗಳನ್ನು ಕೆಳಗೆ ಕೊಡಲಾಗಿದೆ. ಅವುಗಳನ್ನು ಓದಿ, ತಿಳಿದುಕೊಳ್ಳಿರಿ ಮತ್ತು ಅವುಗಳ ಮೇಲೆ ವಿಚಾರ ಮಾಡಿರಿ. ಇದರಿಂದ ನಿಮಗೆ ಏನು ಅರ್ಥವಾಯಿತು? ತರಗತಿಯಲ್ಲಿ ನಿಮ್ಮ ವಿಚಾರವನ್ನು ಚರ್ಚಿಸಿರಿ ಮತ್ತು ಬರೆಯಿರಿ.

1) ಕಾರನ್ನು ಅವಶ್ಯಕತೆಗಿಂತ ಹೆಚ್ಚು ವೇಗದಲ್ಲಿ ಓಡಿಸುತ್ತಿದ್ದರು. ಆದರೆ ರಸ್ತೆಯಲ್ಲಿ ಜನಸಂದಣಿ, ವಾಹನಗಳ ದಟ್ಟಣೆ ತುಂಬಾ ಹೆಚ್ಚಾಗಿತ್ತು.

2) ಕೆಂಪು ದೀಪ ಬಂದಾಗಲೆಲ್ಲ ನಾನೇ ಕೊನೆಯವನು ಎನ್ನುವುದಕ್ಕಿಂತ ಹಸಿರು ದೀಪ ಬಂದಾಗಲೆಲ್ಲ ನಾನು ಮೊದಲನೆಯವನು ಎಂದು ಭಾವಿಸುವುದು ಎಷ್ಟು ಒಳ್ಳೆಯದಲ್ಲವೆ ಎಂದುಕೊಂಡರು.

## ಯೋಚಿಸಿ ಬರೆ

1) ರಸ್ತೆಯ ಮೇಲೆ ಸಿಗ್ನಲ್ ಏಕೆ ಅವಶ್ಯಕವಾಗಿದೆ?

2) ಯಾವ ಬಣ್ಣದ ದೀಪವು ಹತ್ತಿದಾಗ ವಾಹನವನ್ನು ನಿಲ್ಲಿಸಬೇಕು?

3) ರಸ್ತೆಯನ್ನು ದಾಟಬೇಕಾದರೆ ಯಾವ ನಿಯಮವನ್ನು ಪಾಲಿಸಬೇಕು?

4) ರಸ್ತೆಯಲ್ಲಿ ವೇಗವಾಗಿ ವಾಹನ ಓಡಿಸುವುದು ಸರಿಯೋ ಅಥವಾ ತಪ್ಪೋ? ಏಕೆ?

### ❖ ರಚಿಸೋಣ ಬಾ

ನೀನು ಅನುಭವಿಸಿದ ಧನಾತ್ಮಕ ದೃಷ್ಟಿಕೋನವಿರುವ ಒಂದು ಪ್ರಸಂಗವನ್ನು ವಿವರಿಸು.

## ಕಲ್ಪನೆ ಮಾಡಿರಿ ಗುಂಪಿನಲ್ಲಿ ಚರ್ಚಿಸಿರಿ.

- ಕೆಂಪು ದೀಪ ಬಂದಾಗ ವಾಹನವನ್ನು ಹಾಗೆಯೇ ಮುಂದಕ್ಕೆ ಓಡಿಸಿದರೆ ಏನಾಗಬಹುದು? ಹಾಗೆ ಮಾಡಬೇಕೋ ಅಥವಾ ಮಾಡಬಾರದೋ? ಏಕೆ?
- ಯಾವುದಾದರೂ ಸಮಾರಂಭಕ್ಕೆ ನಾವು ತಡವಾಗಿ ಹೊರಟು ಅವಸರದಿಂದ ಹೋದರೆ ಏನಾಗಬಹುದು?



**ಚಿತ್ರ ಗಮನಿಸು ಮತ್ತು ಯೋಗ್ಯ ಘೋಷ ವಾಕ್ಯ ತಯಾರಿಸು.**

_______________________________________________

_______________________________________________

❖ **ಹೇಳು ನಾನಾರು?**

- ಮೂರು ಕಣ್ಣುನನಗಿವೆ, ಆದರೆ ನಾನು ನೋಡಲಾರೆ
  ನಾನು ಹೇಳಿದಂತೆ ಎಲ್ಲರೂ ಕೇಳಬೇಕು. ನಾನು ಯಾರು?
  ಕೆಂಪು ಕಣ್ಣು ಬಿಟ್ಟರೆ ನಿಲ್ಲಬೇಕು, ಹಸಿರು ಕಣ್ಣು ಬಿಟ್ಟರೆ ಸಾಗಬೇಕು,
  ಹಳದಿ ಕಣ್ಣು ಬಿಟ್ಟರೆ ಸಾವಕಾಶವಾಗಿ ನಿಲ್ಲಲು ತಯಾರಾಗಬೇಕು, ಏನಿದು?

- ಮೈ ಮೇಲೆ ಬಿಳಿ ಪಟ್ಟಿಗಳಿವೆ, ಆದರೆ ನಾನು ಪ್ರಾಣಿಯಲ್ಲ.
  ನನ್ನ ಮೇಲೆಯೇ ಜನ ನಡೆದಾಡುತ್ತಾರೆ. ನಾನು ಯಾರು?

- ಕೈಯಲ್ಲೊಂದು ದಂಡ ಹಿಡಿದು, ಬಾಯಲ್ಲೊಂದು ಸೀಟಿ ಊದುತ್ತಾ ವಾಹನಗಳನ್ನು ನಿಯಂತ್ರಿಸುತ್ತಾನೆ. ಇವನ್ಯಾರು?

**ನಿನ್ನ ಹುಡುಕಾಟ**

1) ವಿವಿಧ ಪುಸ್ತಕಗಳು, ಅಂತರ್ಜಾಲ ಇಲ್ಲವೇ ಶಿಕ್ಷಕರ ಸಹಾಯದಿಂದ ರಸ್ತೆ ಸುರಕ್ಷತೆಯ ನಿಯಮಗಳ ಘೋಷವಾಕ್ಯಗಳನ್ನು ಶೋಧಿಸಿ ಬರೆಯಿರಿ.

2) ವಿವಿಧ ವೃತ್ತಪತ್ರಿಕೆಯಲ್ಲಿಯ ರಸ್ತೆ ಸುರಕ್ಷತೆಯ ಕುರಿತಾಗಿ ಬಂದಿರುವಂತಹ ವಾರ್ತೆಗಳ ಸಂಗ್ರಹ ಮಾಡಿರಿ ಮತ್ತು ಅವುಗಳಿಂದ ಒಂದು ಉತ್ತಮವಾಗಿರುವಂತಹ ಭಿತ್ತಿಪತ್ರವನ್ನು ತಯಾರಿಸು.




**ಸಂಚಾರ ನಿಯಮ ಪಾಲಿಸಿ, ಜೀವ ಉಳಿಸಿ.**

# 7. ಹುತ್ತರಿ ಹಬ್ಬ



ಹಬ್ಬದ ಸಡಗರ ಒಂದು ಕಡೆ ಇದ್ದರೆ, ಹಬ್ಬಗಳಲ್ಲಿ ಆಟಗಳ ಜಿದ್ದಾಜಿದ್ದಿನ ಸ್ಪರ್ಧೆ ಒಂದು ಕಡೆ. 'ಹುತ್ತರಿ' ಹಬ್ಬದಲ್ಲಿ ಆಡುವ 'ಪರಿಯಕಳಿ' ಆಟ ತುಂಬಾ ರಂಜಕವಾಗಿರುತ್ತದೆ. ಕೊಡವ ಸಮುದಾಯ ತಮ್ಮ ಸಾಂಪ್ರದಾಯಿಕ ಉಡುಗೆ-ತೊಡುಗೆ ಧರಿಸಿ ಮೈದಾನಕ್ಕೆ ಹೋಗುವರು. ಅಲ್ಲಿರುವ ಮರದ ಸುತ್ತಲೂ ದೊಡ್ಡ ವೃತ್ತಾಕಾರದಲ್ಲಿ ಪುರುಷರು ಕುಣಿಯುತ್ತಾ, ಡೋಲು-ವಾದ್ಯಗಳ ನಿನಾದಕ್ಕೆ 'ಪೊಯಿಲೇ' ಹಾಡನ್ನು ಹೇಳುವರು. ಇವರು ಎರಡೂ ಕೈಗಳಲ್ಲಿ ಉದ್ದನೆಯ ಬೆತ್ತದ ಕೋಲು ಹಿಡಿಯುವರು. ಈ ಕೋಲಾಟದಲ್ಲಿ ಇಬ್ಬರು ಪುರುಷರು ಬೆತ್ತದ ಗುರಾಣಿಯನ್ನೂ, ಉದ್ದದ ಕೋಲನ್ನೂ ಹಿಡಿದು 'ಪರಿಯಕಳಿ' ಆಟವನ್ನು ಆಡುವರು. ಪರಿಯಕಳಿ ಎಂದರೆ ಕೊಡವರ ಒಂದು ಆಟ. ಈ ಆಟದಲ್ಲಿ ಡೋಲಿನ ಹೊಡೆತದ ಲಯ ಅನುಸರಿಸಿ ಇಬ್ಬರು ಸ್ಪರ್ಧಿಗಳು ನರ್ತಿಸುವರು. ಎದುರು-ಬದುರಾಗಿ, ಕೋಲಿನಿಂದ ಒಬ್ಬರು ಇನ್ನೊಬ್ಬರ ಮೊಣಕಾಲಿನ ಕೆಳಗೆ ಹೊಡೆಯುವರು. ಎದುರಾಳಿಯು ತನ್ನ ಗುರಾಣಿಯಿಂದ ಆ ಹೊಡೆತವನ್ನು ತಡೆಯುವನು. ಈ ಆಟದಲ್ಲಿ ಒಬ್ಬನು ಇನ್ನೊಬ್ಬನಕ್ಕಿಂತ ಮೇಲುಗೈ ಸಾಧಿಸಿದರೆ ಇದಕ್ಕೆಂದೇ ನಿಯಮಿಸಲ್ಪಟ್ಟ ಮೇಲ್ವಿಚಾರಕ ಮಧ್ಯೆ ಪ್ರವೇಶಿಸಿ ತಡೆ ಮಾಡುವನು. ಒಟ್ಟು ಮೂರು ಸುತ್ತು ಆಡಿ ಆಟವನ್ನು ನಿಲ್ಲಿಸುವರು. ಆ ಸ್ಥಳದಿಂದ ಹೋಗುವ ಮೊದಲು ಸ್ಪರ್ಧಿಗಳು ಒಬ್ಬರನ್ನೊಬ್ಬರು ಆಲಿಂಗಿಸಿಕೊಳ್ಳುವರು. ಸೋಲು ಗೆಲುವು ಖುಷಿಯಿಂದ ಸ್ವೀಕರಿಸುವರು. ಹೀಗೆ ವಿವಿಧ ಮನರಂಜನೆಯ ಆಟಗಳು ಈ ಹಬ್ಬದಲ್ಲಿ ನಡೆಯುವವು. ಈ ಜನಪದ ಆಟ ಎಲ್ಲಿ ಆಡುವರು ಗೊತ್ತೇ? ಬನ್ನಿ ತಿಳಿದುಕೊಳ್ಳೋಣ.

ಭಾರತ ದೇಶವು ವಿವಿಧ ಬಣ್ಣಗಳ ಸುಂದರ ಚಿತ್ತಾರದ ಬೀಡು. ಇಲ್ಲಿ ಹೆಜ್ಜೆ ಹೆಜ್ಜೆಗೂ ಬಗೆ ಬಗೆ ಸಂಸ್ಕೃತಿಯ ಅದ್ಭುತ ದರ್ಶನವಾಗುತ್ತದೆ. ನಮ್ಮ ದೇಶದ ಪ್ರತಿ ಹಬ್ಬವು ಮಣ್ಣಿನ ಸೊಗಡು ಬೀರುತ್ತದೆ. ನಿಸರ್ಗದ ಮೇಲಿನ ಪ್ರೀತಿಯನ್ನೂ ಬಿಂಬಿಸುತ್ತದೆ. ಇಲ್ಲಿ ಆಚರಿಸುವ ಪ್ರತಿಯೊಂದು ಹಬ್ಬ ನಮ್ಮಲ್ಲಿ ಬಂಧುತ್ವ, ಭಾವೈಕ್ಯತೆ ಹುಟ್ಟಿಸುತ್ತದೆ. ಅಷ್ಟೇ ಅಲ್ಲ ಸಂಪ್ರದಾಯದ ಸುಂದರ ಸಂದೇಶವನ್ನೂ ಮುಂದಿನ ಪೀಳಿಗೆಗೆ ಬಳುವಳಿ ನೀಡುತ್ತದೆ.

ನಮ್ಮ ದೇಶದಲ್ಲಿ ಆಚರಿಸಲಾಗುವ ಹಲವು ಹಬ್ಬಗಳಲ್ಲಿ ಒಂದು ಹಬ್ಬ ಹುತ್ತರಿ. ಈ ಹಬ್ಬವನ್ನು ಪ್ರಾಮುಖ್ಯವಾಗಿ ಕರ್ನಾಟಕ ರಾಜ್ಯದ ಕಾಶ್ಮೀರವೆಂದೇ ಪ್ರಸಿದ್ಧವಾದ ಕೊಡಗಿನಲ್ಲಿ ಆಚರಿಸುವರು. ಕೊಡಗಿಗೆ 'ಕೂರ್ಗ್' ಎಂತಲೂ ಕರೆಯುತ್ತಾರೆ. ಈ ಜಿಲ್ಲೆಯ ಸಾಂಸ್ಕೃತಿಕ ವೈಭವ ಸಾರುವ ಪ್ರಮುಖ ಹಬ್ಬವೇ ಈ 'ಹುತ್ತರಿ'. ಅಲ್ಲಿಮಾತನಾಡುವ 'ಕೊಡವ' ಭಾಷೆಯಲ್ಲಿ ಈ ಹಬ್ಬಕ್ಕೆ 'ಪುದರಿ' ಅಂತಲೂ ಕರೆಯುತ್ತಾರೆ. ಪುದರಿ ಎಂದರೆ 'ಹೊಸ ಅಕ್ಕಿ' ಎಂದರ್ಥ. ಈ ಹಬ್ಬದ ಮುಖ್ಯ ಉದ್ದೇಶ ಹೊಸ ಬೆಳೆಯನ್ನು ಮೊದಲು ದೇವರಿಗೆ ಅರ್ಪಿಸುವುದು. ಆಮೇಲೆ ಮನೆಯವರು ಅದನ್ನು ಉಪಯೋಗಿಸುವುದು.

ಹುತ್ತರಿ ಹಬ್ಬ ಸಾಮಾನ್ಯವಾಗಿ ಕಾರ್ತಿಕ ಅಥವಾ ಮಾರ್ಗಶಿರ (ನವೆಂಬರ್ ಅಥವಾ ಡಿಸೆಂಬರ್) ಮಾಸದಲ್ಲಿ ಹೊಸ ಅಕ್ಕಿಯ ಕೊಯ್ಲಿನ ಸಂದರ್ಭದಲ್ಲಿ ಆಚರಿಸಲಾಗುತ್ತದೆ. ಈ ಹಬ್ಬವನ್ನು ಸಂಪ್ರದಾಯದಂತೆ ಹೆಚ್ಚುಕಡಿಮೆ ವಾರದವರೆಗೆ ಆಚರಿಸಲಾಗುತ್ತದೆ.

ಹುತ್ತರಿ ಹಬ್ಬದ ಆಚರಣೆ ಬೆಳಗಿನಿಂದಲೇ ಆರಂಭವಾಗುತ್ತದೆ. ಈ ಹಬ್ಬದ ವಿಶೇಷತೆ ಧಾನ್ಯಲಕ್ಷ್ಮಿಯಾಗಿದೆ. ಕೊಡವರು ಈ ಹಬ್ಬದ ಮೂಲಕ ಧಾನ್ಯಲಕ್ಷ್ಮಿಯನ್ನು ಮನೆ ತುಂಬಿಸಿಕೊಳ್ಳಲು ಆಶಿಸುತ್ತಾರೆ. ಹಬ್ಬದ ಮೊದಲ ದಿನವೇ ಮನೆ ಸ್ವಚ್ಛತೆ ಮಾಡಿ, ಅಂಗಳವನ್ನು ಅಲಂಕರಿಸಿರುತ್ತಾರೆ. ಮನೆಯ ಹಿರಿಯರು ತೋಟದಿಂದ ಅಕ್ಕಿ ಬೆಳೆಯನ್ನು ಕೊಯ್ದು ಮನೆಗೆ ತರುತ್ತಾರೆ. ಅದನ್ನು ತರುವಾಗ ''ಪೊಳಿ ಪೊಳಿ ದೇವಾ'' ಎಂದು ಕೂಗುವ ಜೊತೆಗೆ ಪೂಜೆಯನ್ನು ಸಲ್ಲಿಸುತ್ತಾರೆ.

ಹುತ್ತರಿ ಹಬ್ಬದಲ್ಲಿ ದೇವರುಗಳಿಗೆ ವಿಶೇಷ ಪೂಜೆ ಸಲ್ಲಿಸುತ್ತಾರೆ. ಕೃಷಿಕರು ತಮ್ಮ ಕೃಷಿ ಸಲಕರಣಗಳಿಗೆ ಪೂಜೆ ಮಾಡಿ, ಭೂಮಿಯ ಫಲವತ್ತತೆಗೆ ಧನ್ಯವಾದ ಸಲ್ಲಿಸುತ್ತಾರೆ. ಮನೆಗಳಲ್ಲಿ ಹೊಸ ಅಕ್ಕಿಯಿಂದಲೇ ವಿಧ ವಿಧ ಭಕ್ಷ್ಯಗಳನ್ನು ತಯಾರಿಸಲಾಗುತ್ತದೆ. ವಿಶೇಷವಾಗಿ ಬೆಲ್ಲ ಸೇರಿಸಿದ ಅಕ್ಕಿಯ ಪಾಯಸ ಮಾಡಿರುತ್ತಾರೆ. ಅದನ್ನು ಮೊದಲು ದೇವರಿಗೆ ನೈವೇದ್ಯ ತೋರಿಸಿದ ಮೇಲೆ, ಮನೆಯವರೆಲ್ಲ ಕುಳಿತು ಊಟ ಮಾಡುವರು. ಅಕ್ಕಿ ಭಕ್ಷ್ಯಗಳು, ಸಿಹಿ ಪದಾರ್ಥಗಳು ಮತ್ತು ಸ್ಥಳೀಯ ರುಚಿಕಟ್ಟಾದ ವ್ಯಂಜನಗಳು ಈ ಹಬ್ಬದ ಮುಖ್ಯ ವೈಶಿಷ್ಟ್ಯ.

ಒಟ್ಟಿನಲ್ಲಿ ಹುತ್ತರಿ ಹಬ್ಬವು ಶ್ರಮಕ್ಕೆ ಗೌರವ, ಪ್ರಕೃತಿಗೆ ಕೃತಜ್ಞತೆ ಮತ್ತು ಸಮುದಾಯದ ಏಕತೆಯನ್ನು ಸಾರುವ ಮಹತ್ವದ ಹಬ್ಬವಾಗಿದೆ. ಇಂದಿನ ಯಾಂತ್ರಿಕ ಜೀವನದಲ್ಲಿ ಹಬ್ಬಗಳು, ನಮ್ಮ ಸಂಸ್ಕೃತಿ ಮತ್ತು ಪರಂಪರೆಯನ್ನು ಜೀವಂತವಾಗಿಟ್ಟುಕೊಳ್ಳುತ್ತವೆ.

❖ **ನನಗೆ ತಿಳಿದಂತೆ :**

- **ಕೆಳಗಿನ ಯೋಗ್ಯ ಪರ್ಯಾಯದ ಎದುರಿಗೆ (✓) ಚಿಹ್ನೆಯನ್ನು ತೋರಿಸು.**

ಅ) ಹುತ್ತರಿ ಹಬ್ಬದಲ್ಲಿ ಆಡುವ ಆಟ

1) ಸಾಂಪ್ರದಾಯಿಕ ☐ 2) ರಂಜಕವಾದದ್ದು ☐ 3) ಪೊಯಿಲೆ ☐ 4) ಪರಿಯಕಳಿ

ಆ) ಭಾರತ ದೇಶದಲ್ಲಿಯ ಪ್ರತಿ ಹಬ್ಬವು -------------- ಬೀರುತ್ತದೆ.

1) ಮಣ್ಣಿನ ಸೊಗಡನ್ನು ☐ 2) ಸುಂದರತೆಯನ್ನು ☐ 3) ಚಿತ್ತಾರವನ್ನು ☐ 4) ರುಚಿಕಟ್ಟನ್ನು ☐

ಇ) ಹುತ್ತರಿ ಹಬ್ಬವನ್ನು ಕರ್ನಾಟಕದ ಯಾವ ಜಿಲ್ಲೆಯಲ್ಲಿ ಆಚರಿಸಲಾಗುತ್ತದೆ?

1) ಕೊಡಗು ☐ 2) ಮೈಸೂರು ☐ 3) ಬೆಂಗಳೂರು ☐ 4) ಧಾರವಾಡ ☐

ಈ) ಕೊಡವ ಭಾಷೆಯಲ್ಲಿ ಹುತ್ತರಿ ಹಬ್ಬಕ್ಕೆ ಹೀಗೆಂದು ಕರೆಯುತ್ತಾರೆ

1) ಪುದರಿ ☐ 2) ಪರಿಯ ☐ 3) ಪೊಯಿಲೆ ☐ 4) ಕೂರ್ಗ್ ☐

ಉ) ಪುದರಿ ಎಂದರೆ ..............

1) ಹೊಸ ಗೋದಿ ☐ 2) ಹೊಸ ರಾಗಿ ☐ 3) ಹೊಸ ಅಕ್ಕಿ ☐ 4) ಹೊಸ ನವಣೆ ☐

❖ **ಹೊಂದಿಸೋಣ ಬಾ :**

| 'ಅ' | 'ಬ' |
|---|---|
| 1) ಕೊಡಗಿಗೆ ಮತ್ತೊಂದು ಹೆಸರು | ಅ) ಗುರಾಣಿ |
| 2) ಹುತ್ತರಿ ಹಬ್ಬ ಬರುವ ಮಾಸ | ಬ) ಕೂರ್ಗ್ |
| 3) ಕೊಡವರ ನಾಡು | ಕ) ಧಾನ್ಯಲಕ್ಷ್ಮಿಯ ಪೂಜೆ |
| 4) ಕೋಲು | ಡ) ಕೊಡಗು |
| 5) ಹುತ್ತರಿ ಹಬ್ಬದ ವಿಶೇಷತೆ | ಇ) ಕಾರ್ತಿಕ ಅಥವಾ ಮಾರ್ಗಶಿರ |



**ಸಾಲುಗಳ ಮೇಲೆ ಚರ್ಚೆ :**

1) ಆಟದ ಸ್ಥಳದಿಂದ ಹೋಗುವ ಮೊದಲು ಸ್ಪರ್ಧಿಗಳು ಒಬ್ಬರಿಗೊಬ್ಬರು ಆಲಿಂಗಿಸಿಕೊಳ್ಳುವರು.
2) ಭಾರತವು ವಿವಿಧ ಬಣ್ಣಗಳ ಸುಂದರ ಚಿತ್ತಾರದ ಬೀಡು, ಇಲ್ಲಿ ಹೆಜ್ಜೆ ಹೆಜ್ಜೆಗೂ ಬಗೆಬಗೆ ಸಂಸ್ಕೃತಿಯ ಅದ್ಭುತ ದರ್ಶನವಾಗುತ್ತದೆ.
3) ಹುತ್ತರಿ ಹಬ್ಬವು ಶ್ರಮಕ್ಕೆ ಗೌರವ, ಪ್ರಕೃತಿಗೆ ಕೃತಜ್ಞತೆ ಮತ್ತು ಸಮುದಾಯದ ಏಕತೆಯನ್ನು ಸಾರುವ ಮಹತ್ವದ ಹಬ್ಬವಾಗಿದೆ.



**ಯೋಚಿಸಿ ಬರೆ :**

1) ಹುತ್ತರಿಹಬ್ಬ ಏಕೆ ಮಹತ್ವದ್ದಾಗಿದೆ?
2) ಭಾರತದ ಹಬ್ಬಗಳು ಮುಂದಿನ ಪೀಳಿಗೆಗೆ ಯಾವ ಬಳುವಳಿ ನೀಡುತ್ತವೆ?
3) ಹುತ್ತರಿ ಹಬ್ಬವನ್ನು ಹೇಗೆ ಆಚರಿಸುತ್ತಾರೆ?

# ಕಂಸಾಳೆ



**ಕಂಸಾಳೆ :** ಕರ್ನಾಟಕದ ಜನಪದ ನೃತ್ಯಗಳಲ್ಲಿ ಅತ್ಯಂತ ವಿಶಿಷ್ಟವಾದ ಕಲೆ ಕಂಸಾಳೆ. ಇದು ಜಾನಪದ ಸತ್ವವುಳ್ಳ ಕಥನಗೀತೆ, ಮೈಸೂರಿನ ಮಲೆಮಹದೇಶ್ವರನ ಭಕ್ತರನ್ನು 'ದೇವರಗುಡ್ಡ'ರೆಂದು ಕರೆಯುವರು. ಶಿವ ಮತ್ತು ಶರಣರ ಮಹಿಮೆಗಳನ್ನು ಕಥಾರೂಪದಲ್ಲಿ ಹಾಡುತ್ತ ಕಂಚಿನ ತಾಳಗಳಿಂದ ಕೈಚಳಕ ತೋರುವ ಮೂಲಕ ಜಾನಪದ ಸಂಪ್ರದಾಯವನ್ನು ಉಳಿಸಿ ಬೆಳೆಸಿಕೊಂಡು ಬಂದಿರುವ ಸಮುದಾಯವೇ ಕಂಸಾಳೆ. ಈ ಸಮುದಾಯಕ್ಕೆ ಸೇರಿದ ಜನರು ಮೈಸೂರು, ಮಂಡ್ಯ, ಬೆಂಗಳೂರು, ಚಾಮರಾಜನಗರ, ಹಾಸನ ಜಿಲ್ಲೆಗಳೆಲ್ಲೆಡೆ ಹರಡಿದ್ದಾರೆ. ಕಂಸಾಳೆ ಕಲಾವಿದರು ಸಾಧಾರಣವಾದ ಅಂಗಿ, ಪಂಚೆ, ಹೆಗಲಲ್ಲಿ ಜೋಳಿಗೆ, ಕೊರಳಲ್ಲಿ ರುದ್ರಾಕ್ಷಿ, ಹಣೆಯಲ್ಲಿ ವಿಭೂತಿ ಧರಿಸುತ್ತಾರೆ. ಹಬ್ಬ ಹರಿದಿನ, ಶಿವರಾತ್ರಿ, ನವರಾತ್ರಿ, ಮಹದೇಶ್ವರನ ಜಾತ್ರೆಗಳ ಸಂದರ್ಭದಲ್ಲಿ ಮಾದಯ್ಯನ ನಾಗಬೆತ್ತವನ್ನು ಕಂಕುಳದಲ್ಲಿಟ್ಟ ಹಸುಬೆಯನ್ನು ಹೆಗಲಿಗೆ ಹಾಕಿ ಯಾತ್ರೆಗೆ ಹೊರಡುವಾಗ,

''ಕೂಗೋ ಕೂಗು ಮಾದೇವನ,
ಕೂಗಯ್ಯ ದುಂಡು ಮಾದೇವನ,
ಕೂಗಿದರೆ ಕುಣಿಯುತ್ತ ಬರುವ ಮಾದೇವನ
ಕೂಗಯ್ಯ ಮುದ್ದು ಮಾದೇವನ''

ಎಂದು ಹಾಡುತ್ತ ತಾಳಿನ ಕಂಚಿನ ಸ್ವರ, ಮಿಂಚಿನ ವೇಗದ ಕೈಚಳಕ ನೋಡುಗರನ್ನು ಮೂಕವಿಸ್ಮಿತರನ್ನಾಗಿ ಮಾಡುತ್ತದೆ.

## ❖ ಭಾಷೆ ತಿಳಿಯೋಣ

ಕೆಳಗೆ ಕೆಲವು ಅಕ್ಷರಗಳನ್ನು ಹಿಂದೆ ಮುಂದೆ ಮಾಡಿ ಕೊಟ್ಟಿದೆ. ಅವುಗಳನ್ನು ಸರಿಯಾದ ಕ್ರಮದಲ್ಲಿ, ಯೋಗ್ಯ ಸ್ವರಚಿಹ್ನೆ, ಒತ್ತಕ್ಷರಗಳನ್ನು ಜೋಡಿಸಿ ಅರ್ಥಪೂರ್ಣ ಶಬ್ದ ತಯಾರಿಸಿ ಬರೆ.

| | |
|---|---|
| ಚಿ ತಾ ರ ದ | ಚಿತ್ತಾರದ |
| ಧಾ ನ ಕ್ಷಿ ಲ | |
| ಸ ಮ ನ ವಾ ಗಿ | |
| ಮ ಣ ಕಾ ಲಿ ನ | |

## ಕೆಳಗಿನ ಪದಗಳನ್ನು ವಾಕ್ಯದಲ್ಲಿ ಉಪಯೋಗಿಸಿ ಬರೆ.

1) ಮೇಲುಗೈ ಸಾಧಿಸು    2) ರಂಜಕವಾಗಿ    3) ಹೆಜ್ಜೆ ಹೆಜ್ಜೆಗೂ
4) ಅರ್ಪಿಸು    5) ಮನೆ ತುಂಬಿಸು    6) ಜೀವಂತವಾಗಿಡು

## ನಿನ್ನ ಹುಡುಕಾಟ

1) 'ಡೊಳ್ಳು ಕುಣಿತ' ಈ ಕಲೆಯ ಕುರಿತು ಅಂತರ್ಜಾಲ, ಪುಸ್ತಕ ಅಥವಾ ನಿಮ್ಮ ಶಿಕ್ಷಕರ ಸಹಾಯದಿಂದ ಮಾಹಿತಿಯನ್ನು ಸಂಗ್ರಹಿಸಿ ನಾಲ್ಕೈದು ವಾಕ್ಯಗಳಲ್ಲಿ ಬರೆ.
2) ಸಮಾಚಾರ ಪತ್ರದಿಂದ ಹಬ್ಬಗಳ ಕುರಿತು ಸುದ್ದಿಗಳನ್ನು ಸಂಗ್ರಹಿಸು.
3) ಭಾರತದ ವಿವಿಧ ರಾಜ್ಯಗಳು ಹಾಗೂ ಅಲ್ಲಿನ ನೃತ್ಯ ಕಲೆಗಳನ್ನು ಸರಿಯಾಗಿ ಹೊಂದಿಸಿರಿ.

| ರಾಜ್ಯಗಳು | ನೃತ್ಯಕಲೆಗಳು |
|---|---|
| 1) ಪಂಜಾಬ | ಅ) ಯಕ್ಷಗಾನ |
| 2) ಕೇರಳ | ಬ) ಬಿಹು |
| 3) ತಮಿಳುನಾಡು | ಕ) ಕಥಕಳಿ |
| 4) ಕರ್ನಾಟಕ | ಡ) ಭಾಂಗಡಾ |
| 5) ಆಸ್ಸಾಂ | ಇ) ಭರತನಾಟ್ಯಂ |

## ❖ ಬಿಟ್ಟ ಸ್ಥಳಗಳಲ್ಲಿ ಯೋಗ್ಯ ಅಕ್ಷರ ತುಂಬಿ ಪದಬಂಧ ಪೂರ್ಣ ಮಾಡು.

| | | | | | | |
|---|---|---|---|---|---|---|
| ಮ | ____ | ____ | ____ | ಕ್ರಾಂ | ____ | |
| ____ | ಸ್ | ____ | ____ | | | ಶಿ |
| | | ಜಾ | | | | ____ |
| | | ____ | ಹೋ | ದ | ____ | ____ |
| ದೀ | ____ | ____ | ____ | | | ತ್ರಿ |
| ____ | ಣೇ | ____ | ____ | ತು | ____ | |

ಪಠ್ಯ ಪುಸ್ತಕದಲ್ಲಿ ಉಪಯೋಗಿಸಿದ ನಕಾಶೆಗಳನ್ನು ಶೈಕ್ಷಣಿಕ ಉದ್ದೇಶದಿಂದ ತಯಾರಿಸಲ್ಪಟ್ಟಿವೆ. ಇದರ ರಾಜಕೀಯ ಭೌಗೋಲಿಕ ಉಪಯೋಗಕ್ಕಾಗಿ ಬಳಸಬಾರದು. ನಕಾಶೆ ತಯಾರಿಸುವಾಗ ಆದಷ್ಟು ಚೊಕ್ಕವಾಗಿ ಸ್ಪಷ್ಟವಾಗಿ ಮಾಡಲು ಪ್ರಯತ್ನಿಸಲಾಗಿದೆ. ಏನಾದರೂ ತಪ್ಪಾಗಿದ್ದರೆ ಅದು ತಾಂತ್ರಿಕ ದೋಷದಿಂದ ಆಗಿರಬಹುದು.




ಮಹಾರಾಷ್ಟ್ರದ ವಿವಿಧ ಭಾಗಗಳಲ್ಲಿಯ ಪ್ರಸಿದ್ಧ ನೃತ್ಯ ಪ್ರಕಾರಗಳನ್ನು ಅಂತರ್ಜಾಲದ ಸಹಾಯದಿಂದ ನೋಡಿರಿ.

# ಕ್ರಿಯಾಪದ

ಕ್ರಿಯಾಪದ ಅಂದರೆ ವಾಕ್ಯದಲ್ಲಿ ಕಾರ್ಯ, ಸ್ಥಿತಿ ಅಥವಾ ನಡೆಯುವ ಕ್ರಿಯೆಯನ್ನು ಸೂಚಿಸುವ ಪದ. ಸರಳವಾಗಿ ಹೇಳುವುದಾದರೆ, ಯಾರಾದರೂ ಏನು ಮಾಡುತ್ತಿದ್ದಾರೆ ಅಥವಾ ಏನು ನಡೆದಿದೆ ಎಂದು ತಿಳಿಸುವ ಪದವನ್ನು ಕ್ರಿಯಾಪದ ಎಂದು ಕರೆಯುತ್ತಾರೆ.

**ಉದಾಹರಣೆಗಳು:**

ರಾಮನು ಓಡುತ್ತಾನೆ. (**ಓಡುತ್ತಾನೆ** – ಕ್ರಿಯಾಪದ)

ಅವಳು ಹಾಡುತ್ತಾಳೆ. (**ಹಾಡುತ್ತಾಳೆ** – ಕ್ರಿಯಾಪದ)

ನಾನು ಪುಸ್ತಕ ಓದುತ್ತೇನೆ. (**ಓದುತ್ತೇನೆ** – ಕ್ರಿಯಾಪದ)

**ಕ್ರಿಯಾಪದದ ಪ್ರಕಾರಗಳು**

- 1) ಸಕರ್ಮಕ ಕ್ರಿಯಾಪದ
- 2) ಅಕರ್ಮಕ ಕ್ರಿಯಾಪದ

## ಸಕರ್ಮಕ ಕ್ರಿಯಾಪದ

### 1) ಸಕರ್ಮಕ ಕ್ರಿಯಾಪದ

ಕ್ರಿಯಾಪದವು ವಾಕ್ಯದಲ್ಲಿ **ಕರ್ಮಪದದೊಂದಿಗೆ** ಬಂದಿದ್ದರೆ ಅಂತಹ ಕ್ರಿಯಾಪದಗಳು **ಸಕರ್ಮಕ** ಎನಿಸುವುವು. ಅಂದರೆ ಕ್ರಿಯೆಯ ಪರಿಣಾಮ ಯಾವುದಾದರೂ **ವ್ಯಕ್ತಿ** ಅಥವಾ **ವಸ್ತುವಿನ** ಮೇಲೆ ಬೀಳುತ್ತದೆ.

ಸರಳವಾಗಿ: ಕ್ರಿಯೆಗೆ **'ಏನನ್ನು'?** ಅಥವಾ **'ಯಾರನ್ನು?'** ಎಂಬ ಪ್ರಶ್ನೆ ಕೇಳಿದಾಗ ಉತ್ತರ ಬಂದರೆ ಅದು ಸಕರ್ಮಕ ಕ್ರಿಯಾಪದ.

**ಉದಾಹರಣೆಗಳು:**

**ರಾಮನು ಪುಸ್ತಕವನ್ನು ಓದುತ್ತಾನೆ.**

**ರಾಮನು ಏನನ್ನು ಓದುತ್ತಾನೆ? → ಪುಸ್ತಕ**

**ಅವಳು ಹಣ್ಣು ತಿನ್ನುತ್ತಾಳೆ.**

**ಅವಳು ಏನನ್ನು ತಿನ್ನುತ್ತಾಳೆ ? → ಹಣ್ಣು**

**ಗುರುಗಳು ಪಾಠ ಕಲಿಸುತ್ತಾರೆ**

**ಗುರುಗಳು ಏನನ್ನು ಕಲಿಸುತ್ತಾರೆ? → ಪಾಠ**

ಇಲ್ಲಿ **ಓದುತ್ತಾನೆ, ತಿನ್ನುತ್ತಾಳೆ, ಕಲಿಸುತ್ತಾರೆ**

ಇವು ಸಕರ್ಮಕ ಕ್ರಿಯಾಪದಗಳು

# ಅಕರ್ಮಕ ಕ್ರಿಯಾಪದ

**2) ಅಕರ್ಮಕ ಕ್ರಿಯಾಪದ**

ಕ್ರಿಯಾಪದವು ವಾಕ್ಯದಲ್ಲಿ ಕರ್ಮ ಪದಗಳನ್ನು ಹೊಂದಿರದಿದ್ದರೆ, ಅಂತಹ ಕ್ರಿಯಾಪದಗಳನ್ನು **ಅಕರ್ಮಕ ಕ್ರಿಯಾಪದ** ಅನ್ನುವರು. ಅಕರ್ಮಕ ಕ್ರಿಯಾಪದ ಅಂದರೆ ಕ್ರಿಯೆಗೆ ಕರ್ಮ ಬೇಕಾಗದ ಕ್ರಿಯಾಪದ. ಅಂದರೆ ಕ್ರಿಯೆ ಸ್ವತಃ ನಡೆಯುತ್ತದೆ; ಅದರ ಮೇಲೆ ಬೇರೆ ವಸ್ತುವಿನ ಪರಿಣಾಮ ಇರುವುದಿಲ್ಲ, ಸರಳವಾಗಿ ಕ್ರಿಯೆಗೆ **'ಏನನ್ನು'?** ಅಥವಾ **'ಯಾರನ್ನು'?** ಎಂದು ಕೇಳಿದಾಗ ಉತ್ತರ ಬಾರದಿದ್ದರೆ ಅದು ಅಕರ್ಮಕ ಕ್ರಿಯಾಪದ.

**ಉದಾಹರಣೆಗಳು**

1. ಮಗು ನಗುತ್ತದೆ.
2. ಅವನು ನಿದ್ರಿಸುತ್ತಾನೆ.
3. ಹಕ್ಕಿ ಹಾರುತ್ತದೆ.
4. ಮಳೆ ಬರುತ್ತದೆ.

ಇಲ್ಲಿ **ನಗುತ್ತದೆ, ನಿದ್ರಿಸುತ್ತಾನೆ, ಹಾರುತ್ತದೆ, ಬರುತ್ತದೆ** ಇವು ಅಕರ್ಮಕ ಕ್ರಿಯಾಪದಗಳು.



**ಕೆಳಗಿನ ವಾಕ್ಯಗಳನ್ನು ಸಕರ್ಮಕ ಕ್ರಿಯಾಪದ ಅಕರ್ಮಕ ಕ್ರಿಯಾಪದಗಳೆಂದು ವಿಂಗಡಿಸಿ ಬರೆ**

1) ರಾಣಿಯು ಓಡುತ್ತಾಳೆ.
2) ರಾಮನು ಹಣ್ಣು ತಿನ್ನುತ್ತಾನೆ.
3) ಅವಳು ಪತ್ರವನ್ನು ಬರೆಯುತ್ತಾಳೆ.
4) ಅವನು ನಗುತ್ತಿದ್ದಾನೆ.
5) ಹಕ್ಕಿಗಳು ಹಾರುತ್ತವೆ.
6) ನಾನು ಪುಸ್ತಕ ಓದುತ್ತೇನೆ.
7) ಅವನು ನೀರು ಕುಡಿಯುತ್ತಾನೆ.
8) ಮಗು ನಿದ್ರಿಸುತ್ತಿದೆ.
9) ತಾಯಿ ಊಟ ಬಡಿಸುತ್ತಾಳೆ.
10) ನಾನು ಕುಳಿತುಕೊಳ್ಳುತ್ತೇನೆ

| ಸಕರ್ಮಕ ಕ್ರಿಯಾಪದ | ಅಕರ್ಮಕ ಕ್ರಿಯಾಪದ |
|---|---|
| ............................. | ............................. |
| ............................. | ............................. |
| ............................. | ............................. |
| ............................. | ............................. |
| ............................. | ............................. |
| ............................. | ............................. |
| ............................. | ............................. |
| ............................. | ............................. |
| ............................. | ............................. |
| ............................. | ............................. |
| ............................. | ............................. |

# 8. ಹಚ್ಚೇವು ಕನ್ನಡದ ದೀಪ

**ಕವಿ ಪರಿಚಯ :** ಡಿ.ಎಸ್. ಕರ್ಕಿ (1923 - 1984) ಕನ್ನಡದ ಪ್ರಮುಖ ಕವಿ, ಪ್ರಾಧ್ಯಾಪಕ. ಬೆಳಗಾವಿ ಮೂಲದ ಇವರು ಭಾವಗೀತೆ, ಪ್ರಬಂಧ, ಮಕ್ಕಳ ಸಾಹಿತ್ಯ ಮತ್ತು ಸಂಶೋಧನಾ ಕ್ಷೇತ್ರದಲ್ಲಿ ಗಮನಾರ್ಹ ಸೇವೆ ಸಲ್ಲಿಸಿದ್ದಾರೆ. ಇವರು ಮಕ್ಕಳಿಗಾಗಿ ಬರೆದ 'ತನನಂ ತೊಂ' ಮತ್ತು ಬಣ್ಣದ ಚೆಂಡು ಕೃತಿಗಳು ಪ್ರಸಿದ್ಧವಾಗಿವೆ. ಪ್ರಸ್ತುತ 'ಹಚ್ಚೇವು ಕನ್ನಡದ ದೀಪ' ಅವರ ಪ್ರಸಿದ್ಧ ನಾಡಗೀತೆ ಎನಿಸಿದೆ. 1972ರಲ್ಲಿ ಅವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕನ್ನಡ ನಾಡು ನುಡಿಯನ್ನು ಉಳಿಸಲು ನಾವೆಲ್ಲ ಒಂದಾಗಬೇಕು. ನಡುನಾಡು, ಗಡಿನಾಡಿ ಆಚೆ ನಮ್ಮ ಕನ್ನಡದ ಕಂಪು ಹಬ್ಬಬೇಕು. ನಮ್ಮ ಹಿರಿಯರು ಗಳಿಸಿದ ಕೀರ್ತಿಯನ್ನು ಉಳಿಸುತ್ತಾ ಮಂಗಳ ಗೀತೆಯನ್ನು ಹಾಡಬೇಕು ಎಂದು ಕವಿ ಡಿಎಸ್ ಕರ್ಕಿ ಅವರು ತಮ್ಮ ಕನ್ನಡದ ಒಲವನ್ನು ಈ ಕವಿತೆಯಲ್ಲಿ ಬಿಂಬಿಸಿದ್ದಾರೆ.

ಹಚ್ಚೇವು ಕನ್ನಡದ ದೀಪ
ಕರುನಾಡದೀಪ ಸಿರಿನುಡಿಯ ದೀಪ
ಒಲವೆತ್ತಿ ತೋರುವಾ ದೀಪ । ಹಚ್ಚೇವು

ಬಹುದಿನಗಳಿಂದ ಮೈಮರೆವೆಯಿಂದ
ಕೂಡಿರುವ ಕೊಳೆಯ ಕೊಚ್ಚೇವು
ಎಲ್ಲೆಲ್ಲಿ ಕನ್ನಡದ ಕಂಪು
ಸೂಸಲಲ್ಲಲ್ಲಿ ಕರಣ ಚಾಚೇವು
ನಡುನಾಡೆ ಇರಲಿ, ಗಡಿನಾಡೆ ಇರಲಿ
ಕನ್ನಡದ ಕಳೆಯ ಕೆಚ್ಚೇವು

ಮರತೇವು ಮರೆವ, ತೆರೆದೇವು ಮನವ,
ಎರೆದೇವು ಒಲವ-ಹಿರಿ ನೆನಪ
ನರನರವನೆಲ್ಲ ಹುರಿಗೊಳಿಸಿ ಹೊಸೆದು
ಹಚ್ಚೇವು ಕನ್ನಡದ ದೀಪ

ಕಲ್ಪನೆಯ ಕಣ್ಣು ಹರಿವನಕ ಸಾಲು
ದೀಪಗಳ ಬೆಳಕ ಬೀರೇವು
ಹಚ್ಚಿರುವ ದೀಪದಲಿ ತಾಯರೂಪ
ಅಚ್ಚಳಿಯದಂತೆ ತೋರೇವು
ಒಡಲೊಡಲ ಕೆಚ್ಚಿನಾ ಕಿಡಿಗಳನ್ನು
ಗಡಿನಾಡಿನಾಚೆ ತೂರೇವು



ಹೊಮ್ಮಿರಲು ಪ್ರೀತಿ ಎಲ್ಲಿಯದು ಭೀತಿ
ನಾಡೊಲವೆ ನೀತಿ ಹಿಡಿನೆನಪ
ಮನೆಮನೆಗಳಲ್ಲಿ ಮನಮನಗಳಲ್ಲಿ
ಹಚ್ಚೇವು ಕನ್ನಡದ ದೀಪ

ನಮ್ಮವರು ಗಳಿಸಿದ ಹೆಸರ
ಉಳಿಸಲೆಲ್ಲಾರು ಒಂದುಗೂಡೇವು
ನಮ್ಮೆದೆಯ ಮಿಡಿಯುವೀ ಮಾತಿನಲ್ಲಿ
ಮಾತೆಯನು ಪೂಜೆ ಮಾಡೇವು
ನಮ್ಮುಸಿರು ತೀಡುವೀ ನಾಡಿನಲ್ಲಿ
ಮಾಂಗಲ್ಯಗೀತ ಹಾಡೇವು

ತೊರೆದೇವು ಮರುಳ ಕಡೆದೇವು ಇರುಳ
ಪಡೆದೇವು ತಿರುಳ –ಹಿಡಿನೆನಪ
ಕರುಳೆಂಬ ಕುಡಿಗೆ ಮಿಂಚನ್ನೆ ಮುಡಿಸಿ
ಹಚ್ಚೇವು ಕನ್ನಡದ ದೀಪ.

– ಡಿ. ಎಸ್. ಕರ್ಕಿ



❖ ನನಗೆ ತಿಳಿದಂತೆ

● ಪದಗಳ ಅರ್ಥ ತಿಳಿಯೋಣ. ಸರಿಯಾದ ಅರ್ಥವನ್ನು ಹೊಂದಿಸಿ ಬರೆಯಿರಿ:

| ಪದ | ಅರ್ಥ |
|---|---|
| 1. ಮೈಮರೆವೆ | ಅ. ಧೈರ್ಯ |
| 2. ಕರಣ | ಆ. ತನ್ಮಯ |
| 3. ಕೆಚ್ಚು | ಇ. ಸಾರ |
| 4. ಇರುಳು | ಈ. ಇಂದ್ರಿಯ |
| 5. ತಿರುಳು | ಉ. ರಾತ್ರಿ |



ಯೋಚಿಸಿ ಬರೆ

● ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸು.

1. ಕವಿಯು ಎಂತಹ ದೀಪವನ್ನು ಹಚ್ಚುವುದಾಗಿ ಹೇಳಿದ್ದಾರೆ?
2. ಕನ್ನಡದ ಕಂಪು ಎಲ್ಲೆಲ್ಲಿ ಸೂಸಬೇಕೆಂದು ಕವಿ ಆಶಿಸುತ್ತಾರೆ?
3. ಎಂತಹ ಮನಸ್ಸನ್ನು ತೆರೆಯಬೇಕು ಮತ್ತು ಏನನ್ನು ಮರೆಯಬೇಕು?
4. ''ಮನೆಮನೆಗಳಲ್ಲಿ ಮನಮನಗಳಲ್ಲಿ'' ಏನನ್ನು ಹಚ್ಚಬೇಕು?

❖ ಕನ್ನಡದ ಜ್ಞಾನಪೀಠ ಪ್ರಶಸ್ತಿ ವಿಜೇತರ ಭಾವ ಚಿತ್ರ ಅಂಟಿಸು.



❖ **ಹೊಂದಿಸೋಣ ಬಾ**

- **ಕೆಳಗೆ ಎಡಭಾಗದಲ್ಲಿ ಕವಿತೆಯ ಸಾಲುಗಳನ್ನು, ಬಲಭಾಗದಲ್ಲಿ ಅವುಗಳ ಅರ್ಥವನ್ನು ಬರೆಯಲಾಗಿದೆ. ಸರಿಯಾದ ಜೋಡಿಯನ್ನು ಗುರುತಿಸಿ ಸಾಲಿನ ಎದುರು ಸರಿಯಾದ ಅರ್ಥದ ಅಕ್ಷರ ಬರೆಯಿರಿ.**

| | | |
|---|---|---|
| 1. ಹಚ್ಚೇವು ಕನ್ನಡದ ದೀಪ ಕರುನಾಡದೀಪ ಸಿರಿನುಡಿಯದೀಪ | ಎ | ಅ) ನಮ್ಮ ನಾಡಿನವರು ಗಳಿಸಿದ ಹೆಸರನ್ನು ಉಳಿಸಲು ಎಲ್ಲರೂ ಒಂದಾಗುವೆವು. |
| 2. ಬಹುದಿನಗಳಿಂದ ಮೈಮರೆವೆಯಿಂದ ಕೂಡಿರುವ ಕೊಳೆಯ ಕೊಚ್ಚೇವು | | ಆ) ಪ್ರತಿಯೊಬ್ಬರ ದೇಹದಲ್ಲಿರುವ ಶೌರ್ಯದ ಕಿಡಿಗಳನ್ನು ಗಡಿಯದಾಟಿ ತಲುಪಿಸುವೆವು. |
| 3. ಎಲ್ಲೆಲ್ಲಿ ಕನ್ನಡದ ಕಂಪು ಸೂಸಲಲ್ಲಲ್ಲಿ ಕರಣ ಚಾಚೇವು | | ಇ) ಕನ್ನಡದ ಕೀರ್ತಿಯನ್ನು ನಾಡಿನ ಮಧ್ಯದಲ್ಲಿರಲಿ, ಗಡಿಯಲ್ಲಿರಲಿ ಎಲ್ಲೆಡೆ ಹರಡುವೆವು. |
| 4. ನಡುನಾಡೆ ಇರಲಿ, ಗಡಿನಾಡೆ ಇರಲಿ ಕನ್ನಡದ ಕಳೆಯ ಕೆಚ್ಚೇವು | | ಈ) ಕನಸಿನ ಕಣ್ಣುಗಳ ಮೂಲಕ ದೀಪಗಳ ಸಾಲಿನ ಬೆಳಕನ್ನು ಹರಡುವೆ. |
| 5. ಒಡಲೊಡಲ ಕೆಚ್ಚಿನಾ ಕಿಡಿಗಳನ್ನು ಗಡಿನಾಡಿನಾಚೆ ತೂರೇವು | | ಉ) ಕನ್ನಡ ಎಂಬ ಪರಿಮಳ ಎಲ್ಲೆಲ್ಲಿ ಹರಡುತ್ತದೆಯೋ ಅಲ್ಲೆಲ್ಲಾ ನಮ್ಮ ಕೈಗಳನ್ನು ಚಾಚುವೆವು. |
| 6. ಕಲ್ಪನೆಯ ಕಣ್ಣು ಹರಿವನಕ ಸಾಲು ದೀಪಗಳ ಬೆಳಕ ಬೀರೇವು | | ಊ) ನಮ್ಮ ಉಸಿರು ತೀಡುವುವ ಈ ನಾಡಿನಲ್ಲಿ ಮಂಗಳದ ಹಾಡನ್ನು ಹಾಡುವೆವು. |
| 7. ನಮ್ಮವರು ಗಳಿಸಿದಾ ಹೆಸರ ಉಳಿಸಲೆಲ್ಲಾರು ಒಂದುಗೂಡೇವು | | ಎ) ಕನ್ನಡ ನಾಡಿನ ದೀಪವನ್ನೂ, ಶ್ರೀಮಂತ ಭಾಷೆಯ ದೀಪವನ್ನೂ ಹಚ್ಚುವೆವು. |
| 8. ನಮ್ಮುಸಿರು ತೀಡುವೀ ನಾಡಿನಲ್ಲಿ ಮಾಂಗಲ್ಯಗೀತ ಹಾಡೇವು | | ಏ) ಬಹುದಿನಗಳ ಅರಿವಿಲ್ಲದಿರುವಿಕೆ ಎಂಬ ಕೊಳೆಯನ್ನು ತೊಳೆದು ಹಾಕುವೆವು. |

# ವಾಕ್ಯ ಪ್ರಕಾರಗಳು

ನಾವು ಮಾತಿನಿಂದ ಅನೇಕ ಕೆಲಸಗಳನ್ನು ಮಾಡುತ್ತೇವೆ. ನಮ್ಮ ವಿಚಾರಗಳನ್ನು ಇತರರಿಗೆ ತಿಳಿಸುತ್ತೇವೆ. ನಾವು ಕಂಡದ್ದನ್ನು, ಕಲ್ಪಿಸಿದ್ದನ್ನು ಬಣ್ಣಿಸುತ್ತೇವೆ. ನಮ್ಮ ಭಾವನೆಗಳನ್ನು ವ್ಯಕ್ತಪಡಿಸುವೆವು. ಪ್ರಶ್ನೆಗಳನ್ನೂ ಕೇಳುವೆವು. ಅಪ್ಪಣೆ ಕೊಡುವೆವು. ಬಿನ್ನಹ ಮಾಡುವೆವು.

ಈ ಬೇರೆ ಬೇರೆ ಬಗೆಯ ಕೆಲಸಗಳನ್ನು ಮಾಡಲು ನಾವು ಬೇರೆ ಬೇರೆ ಬಗೆಯ ಮಾತುಗಳನ್ನು ಅಥವಾ ವಾಕ್ಯಗಳನ್ನು ಬಳಸುವೆವು.

**ಉದಾಹರಣೆಗಳು:**

- ಸೂರ್ಯನು ಪೂರ್ವದಲ್ಲಿ ಉದಯಿಸುತ್ತಾನೆ. ರೈತನು ಹೊಲವನ್ನು ಉಳುತ್ತಾನೆ.
- ವಾಹ್ ! ಈ ಗುಲಾಬಿ ಹೂವು ಎಷ್ಟು ಸುಂದರವಾಗಿದೆ !
- ಅಯ್ಯೋ ! ಮಗು ಕೆಳಗೆ ಬಿದ್ದು ಅಳುತ್ತಿದೆಯಲ್ಲ !
- ನಿಮ್ಮ ಶಾಲೆಯ ಹೆಸರೇನು ? ಕಾಡಿನ ರಾಜ ಯಾರು ?
- ಗುರುಗಳೇ, ನಮಗೆ ಒಳ್ಳೆಯ ದಾರಿಯನ್ನು ತೋರಿಸಿ.

ಹೀಗೆ ವಾಕ್ಯಗಳು ಬೇರೆ ಬೇರೆ ಬಗೆಯಾಗಿವೆ. ಮುಖ್ಯವಾಗಿ ಅರ್ಥದ ಆಧಾರದ ಮೇಲೆ ವಾಕ್ಯಗಳಲ್ಲಿ ಐದು ಪ್ರಕಾರಗಳು ಇವೆ.

**ವಾಕ್ಯ ಪ್ರಕಾರಗಳು**

- (1) ನಿಶ್ಚಿತಾರ್ಥಕ ವಾಕ್ಯ
- (2) ಪ್ರಶ್ನಾರ್ಥಕ ವಾಕ್ಯ
- (3) ಭಾವವಾಚಕ (ಉದ್ಗಾರವಾಚಕ) ವಾಕ್ಯ
- (4) ಆಜ್ಞಾರ್ಥಕ ಅಥವಾ ವಿಧ್ಯರ್ಥಕ ವಾಕ್ಯ
- (5) ಸಂಭಾವನಾರ್ಥಕ ವಾಕ್ಯ



## (1) ನಿಶ್ಚಿತಾರ್ಥಕ ವಾಕ್ಯ :

*ಈ ವಾಕ್ಯಗಳನ್ನು ಓದಿರಿ:*

1. ಕುವೆಂಪುರವರು ರಾಮಾಯಣ ದರ್ಶನಂ ಮಹಾಕಾವ್ಯವನ್ನು ಬರೆದಿದ್ದಾರೆ.
2. ನಾಳೆ ಶಾಲೆಯಲ್ಲಿ ಹಬ್ಬದ ಆಚರಣೆ ನಡೆಯುವುದು.
3. ನೀರು ಜೀವಕೋಟಿಗೆ ಅತ್ಯಗತ್ಯವಾಗಿದೆ.
4. ಸೂರ್ಯನು ಪಶ್ಚಿಮದಲ್ಲಿ ಮುಳುಗುತ್ತಾನೆ.

**ವಿವರಣೆ:** 1ನೆಯ ವಾಕ್ಯವು ನಡೆದು ಹೋದ ಕ್ರಿಯೆಯನ್ನು ಹೇಳುವದು. 2ನೆಯ ವಾಕ್ಯವು ಭವಿಷ್ಯತ್ತಿನಲ್ಲಿ ಆಗುವ ಕೆಲಸವನ್ನು ಸೂಚಿಸುವದು. ನೀರು ಜೀವಕೋಟಿಗೆ ಅತ್ಯಗತ್ಯವಾಗಿದೆ, ಸೂರ್ಯನು ಪಶ್ಚಿಮದಲ್ಲಿ ಮುಳುಗುತ್ತಾನೆ'' ಎಂಬ ವಾಕ್ಯಗಳು ಸದಾ ಸತ್ಯವಾದ ಸಂಗತಿಗಳನ್ನು ಹೇಳುವವು.

**ನಿಯಮ:** ಹೀಗೆ ವರ್ತಮಾನ (ನಡೆಯುತ್ತಿರುವ), ಭೂತ (ನಡೆದುಹೋದ), ಭವಿಷ್ಯತ್ (ನಡೆಯಲಿರುವ) ಕ್ರಿಯೆಗಳನ್ನು, ಸ್ಥಿತಿಗತಿಗಳನ್ನು ಸೂಚಿಸುವ ಮತ್ತು ನಿತ್ಯ ಸತ್ಯವಾದ ಸಂಗತಿಗಳನ್ನು ಖಚಿತವಾಗಿ ಹೇಳುವ ವಾಕ್ಯಗಳು **ನಿಶ್ಚಿತಾರ್ಥಕ ವಾಕ್ಯ**ಗಳು.

## (2) ಪ್ರಶ್ನಾರ್ಥಕ ವಾಕ್ಯ :

**ಈ ವಾಕ್ಯಗಳನ್ನು ಓದಿರಿ:**

1. ನಿಮ್ಮ ಶಾಲೆಯ ಹೆಸರೇನು ?
2. ನಿನಗೆ ಕಥೆ ಪುಸ್ತಕ ಓದಲು ಇಷ್ಟವಿದೆಯೇ ?
3. ಪಕ್ಷಿಗಳು ಹೇಗೆ ಗೂಡನ್ನು ಕಟ್ಟುತ್ತವೆ ?
4. ನಮ್ಮ ದೇಶದ ರಾಜಧಾನಿ ಯಾವುದು ?



**ವಿವರಣೆ:** ಈ ನಾಲ್ಕು ವಾಕ್ಯಗಳು ಯಾವದೊಂದು ಸಾಮಾನ್ಯ ಮಾತನ್ನು ಹೇಳುವದಿಲ್ಲ, ಆದರೆ ಇವು ಇನ್ನೊಬ್ಬರಿಂದ ಉತ್ತರವನ್ನು ಅಪೇಕ್ಷಿಸಿ ಪ್ರಶ್ನೆಯನ್ನು ಕೇಳುವುವು. ಇಂತಹ ವಾಕ್ಯಗಳು **ಪ್ರಶ್ನಾರ್ಥಕ ವಾಕ್ಯ**ಗಳು.

## (3) ಭಾವವಾಚಕ (ಉದ್ಗಾರವಾಚಕ) ವಾಕ್ಯ :

**ಈ ವಾಕ್ಯಗಳನ್ನು ಓದಿರಿ:**

1. ವಾಹ್ ! ಈ ಗುಲಾಬಿ ಹೂವು ಎಷ್ಟು ಸುಂದರವಾಗಿದೆ !
2. ಅಬ್ಬಾ ! ಎಷ್ಟು ಎತ್ತರವಾಗಿದೆ ಆ ಪರ್ವತ !
3. ಅಯ್ಯೋ ! ಪಾಪ !ನಾಯಿಮರಿ ಹೊಂಡಕ್ಕೆ ಬಿದ್ದಿದೆ.



**ವಿವರಣೆ:** ಇಲ್ಲಿಯ ಪ್ರತಿಯೊಂದು ವಾಕ್ಯವು ನಮ್ಮ ಮನಸ್ಸಿನಲ್ಲಿ ಹಠಾತ್ತಾಗಿ ಉಂಟಾಗುವ ಭಾವನೆಯನ್ನು ಸೂಚಿಸುವದು. 1ನೆಯ ವಾಕ್ಯವು ಆನಂದ ಮತ್ತು ಮೆಚ್ಚುಗೆಯನ್ನು, 2ನೆಯ ವಾಕ್ಯವು ಆಶ್ಚರ್ಯವನ್ನು ಹಾಗೂ 3ನೆಯ ವಾಕ್ಯದಲ್ಲಿ ಕರುಣೆ/ಬೇಸರದ ಭಾವನೆಗಳು ವ್ಯಕ್ತವಾಗಿವೆ. ಹೀಗೆ ತೀವ್ರ ಭಾವನೆಗಳನ್ನು ವ್ಯಕ್ತಪಡಿಸುವ ವಾಕ್ಯಗಳು ಭಾವವಾಚಕ ವಾಕ್ಯಗಳು.

**ನೆನಪಿಡಿ:** ಮನಸ್ಸಿನಲ್ಲಿ ಉಂಟಾದ ಭಾವನೆಗಳು ಶಬ್ದಗಳ ಮೂಲಕ ಹೊರಹೊಮ್ಮುವದಕ್ಕೆ ಉದ್ಗಾರ ಎಂದು ಹೇಳುವರು. ಆದುದರಿಂದ ಇವಕ್ಕೆ **ಉದ್ಗಾರವಾಚಕ ವಾಕ್ಯ**ಗಳೆಂದೂ ಹೇಳುವರು.

## (4) ಆಜ್ಞಾರ್ಥಕ (ವಿಧ್ಯರ್ಥಕ) ವಾಕ್ಯ :

**ಈ ವಾಕ್ಯಗಳನ್ನು ಓದಿರಿ:**

1. ಬೇಗನೆ ಪಾಠವನ್ನು ಓದಿ ಮುಗಿಸು.
2. ಕೊಠಡಿಯಿಂದ ಹೊರಗೆ ಹೋಗು.
3. ಎಲ್ಲರಿಗೂ ಒಳ್ಳೆಯದಾಗಲಿ.
4. ದಯಮಾಡಿ ನನಗೆ ಒಂದು ದಿನ ರಜೆ ನೀಡಿರಿ.



**ವಿವರಣೆ:** ಮೇಲಿನ ವಾಕ್ಯಗಳಲ್ಲಿ 1 ಮತ್ತು 2ನೆಯ ವಾಕ್ಯಗಳು ಅಪ್ಪಣೆ/ಆಜ್ಞೆಯನ್ನು ಸೂಚಿಸುವವು. 3ನೆಯ ವಾಕ್ಯವು ಇಚ್ಛೆಯನ್ನು (ಆಶೀರ್ವದಿಸುವ) ಸೂಚಿಸುವದು. 4ನೇ ವಾಕ್ಯದಲ್ಲಿ ವಿನಮ್ರ ಬೇಡಿಕೆ ಇದೆ.

**ನೆನಪಿಡಿ:** ಹೀಗೆ ಅಪ್ಪಣೆ ಕೊಡುವದು, ಆಶೀರ್ವದಿಸುವದು, ಬೇಡಿಕೊಳ್ಳುವದು ಮುಂತಾದ ಕ್ರಿಯೆಗಳನ್ನು ಹೇಳುವ ವಾಕ್ಯಗಳು **ಆಜ್ಞಾರ್ಥಕ (ವಿಧ್ಯರ್ಥಕ)** ವಾಕ್ಯಗಳು.



**ವಿವರಣೆ:** ಇಂಥ ವಾಕ್ಯಗಳು ಅನಿಶ್ಚಿತತೆ, ಸಂಶಯ ಇಲ್ಲವೆ ತರ್ಕ (ಊಹೆ) ಇವುಗಳನ್ನು ಸೂಚಿಸುವವು. ಕ್ರಿಯೆ ಆಗಬಹುದೆಂಬ ಅನುಮಾನ ಅಥವಾ ಆಗುವದೋ ಇಲ್ಲವೋ ಎಂಬ ಬಗ್ಗೆ ಅನಿಶ್ಚಿತತೆಯನ್ನು ತೋರಿಸುವ ಇಂಥ ವಾಕ್ಯಗಳು **ಸಂಭಾವನಾರ್ಥಕ ವಾಕ್ಯ**ಗಳು.

## (5) ಸಂಭಾವನಾರ್ಥಕ ವಾಕ್ಯ :

**ಈ ವಾಕ್ಯಗಳನ್ನು ಓದಿರಿ:**

1. ಮೋಡ ಕವಿದಿದೆ, ಸಂಜೆ ಮಳೆ ಬಂದೀತು.
2. ಅಣ್ಣನು ನಾಳೆ ಊರಿನಿಂದ ಬಂದಾನು.
3. ಅವಳು ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದಾಳು.

❖ ಕೆಳಗಿನ ವಾಕ್ಯಗಳಲ್ಲಿ ಪ್ರತಿಯೊಂದು ಯಾವ ಪ್ರಕಾರದ ವಾಕ್ಯವೆಂಬುದನ್ನು ಗುರುತಿಸಿ ಬರೆಯಿರಿ.

| ವಾಕ್ಯಗಳು | ವಾಕ್ಯದ ಪ್ರಕಾರ |
|---|---|
| 1. ಆಹಾ ! ಮೈಸೂರು ಅರಮನೆ ಎಷ್ಟು ಜಗಮಗಿಸುತ್ತಿದೆ! | ____________ |
| 2. ನಮ್ಮ ಶಾಲೆಯ ಸುತ್ತಲೂ ಸುಂದರವಾದ ಗಿಡಗಳಿವೆ. | ____________ |
| 3) ಭಾರತದ ರಾಷ್ಟ್ರೀಯ ಪ್ರಾಣಿ ಯಾವುದು? | ____________ |
| 4) ಚೆನ್ನಾಗಿ ಓದಿದ್ದಾನೆ, ಅವನು ಪರೀಕ್ಷೆಯಲ್ಲಿ ಪಾಸ್ ಆದಾನು. | ____________ |
| 5) ನಿನಗೆ ನೂರು ವರ್ಷ ಆಯುಷ್ಯ ಆರೋಗ್ಯ ಸಿಗಲಿ. | ____________ |
| 6) ಕಾವ್ಯಾ ಈ ಬಾರಿ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಗೆದ್ದಾಳು. | ____________ |

❖ ವಾಕ್ಯ ಪ್ರಕಾರಗಳು (ಮುಂದುವರಿದು).....
ಕೆಳಗಿನ ಸಕಾರಾತ್ಮಕ ಮತ್ತು ನಕಾರಾತ್ಮಕ ವಾಕ್ಯಗಳನ್ನು ಗಮನವಿಟ್ಟು ಓದಿ ತಿಳಿದುಕೊಳ್ಳಿರಿ.

| ಕ್ರ.ಸಂ. | ಸಕಾರಾತ್ಮಕ ವಾಕ್ಯ | ನಕಾರಾತ್ಮಕ ವಾಕ್ಯ |
|---|---|---|
| 1 | ಸೂರ್ಯನು ಪೂರ್ವದಲ್ಲಿ ಮೂಡುತ್ತಾನೆ | ಸೂರ್ಯನು ಪಶ್ಚಿಮದಲ್ಲಿ ಮೂಡುವುದಿಲ್ಲ. |
| 2 | ಬಾಲಕನು ಸಿಹಿ ಹಣ್ಣನ್ನು ತಿಂದನು. | ಬಾಲಕನು ಕಹಿ ಹಣ್ಣನ್ನು ತಿನ್ನಲಿಲ್ಲ. |
| 3 | ಇಂದು ನಮ್ಮ ಶಾಲೆಯಲ್ಲಿ ಪಂದ್ಯಾಟ ಇದೆ. | ಇಂದು ನಮ್ಮ ಶಾಲೆಯಲ್ಲಿ ಪಂದ್ಯಾಟ ಇಲ್ಲ. |
| 4 | ಅವನು ಶಾಲೆಗೆ ಬಂದಿದ್ದಾನೆಯೇ? | ಅವನು ಶಾಲೆಗೆ ಬರಲಿಲ್ಲವೇ ? |

❖ ಮುಖ್ಯವಾಗಿ ಗಮನಿಸಬೇಕಾದ ಅಂಶ: ಉದ್ಗಾರವಾಚಕ ವಾಕ್ಯಗಳನ್ನು ಬಿಟ್ಟು ಉಳಿದೆಲ್ಲ ಪ್ರಕಾರದ ವಾಕ್ಯಗಳಿಗೆ ನಾವು ನಿಷೇಧಾರ್ಥಕ ರೂಪಗಳನ್ನು ನೀಡಬಹುದು.
ಕೆಳಗಿನ ವಾಕ್ಯಗಳನ್ನು ನಿಷೇಧಾರ್ಥಕ (ಅಲ್ಲ/ಬೇಡ/ಇಲ್ಲ ಎನ್ನುವ ಅರ್ಥ ಬರುವಂತೆ) ಬರೆಯಿರಿ:

| | | |
|---|---|---|
| 1 | ಈ ಪುಸ್ತಕವನ್ನು ನೀವು ಓದುವಿರಾ ? | ........................................ |
| 2 | ಸಂಜೆ ಮಳೆ ಬಂದೀತು. | ........................................ |
| 3 | ಅವಳು ಪಂದ್ಯವನ್ನು ಗೆದ್ದಾಳು. | ........................................ |
| 4 | ಸತ್ಯವಾದ ಮಾತುಗಳನ್ನು ಆಡಿರಿ. | ........................................ |

## ಪಾತ್ರಾಭಿನಯ

ವಿದ್ಯಾರ್ಥಿಗಳು ಸೇರಿ ಮಾತನಾಡಬೇಕು:

ಒಬ್ಬನು 'ಉತ್ತರ ಕರ್ನಾಟಕ' ಶೈಲಿಯಲ್ಲಿ ಮಾತನಾಡಬೇಕು

ಮತ್ತೊಬ್ಬನು 'ದಕ್ಷಿಣ ಕರ್ನಾಟಕ' ಶೈಲಿಯಲ್ಲಿ ಮಾತನಾಡಬೇಕು

(ಸನ್ನಿವೇಶ: ಗೆಳೆಯರಾದ ಬಸವರಾಜ (ಉತ್ತರ ಕರ್ನಾಟಕ) ಮತ್ತು ಮಂಜುನಾಥ (ದಕ್ಷಿಣ ಕರ್ನಾಟಕ) ಬಸ್ ನಿಲ್ದಾಣದಲ್ಲಿ ಭೇಟಿಯಾದಾಗ)

**ಬಸವರಾಜ (ಉ.ಕ):** ''ಲೇ ಮಂಜು, ಎತ್ತ ನಡೆದೀದಿ? ಬಹಳ ದಿನಾ ಆತು ನೋಡಿ ನಿನ್ನ... ಆರಾಮ ಇದೀಯಾ ಇಲ್ಲೋ?''

**ಮಂಜುನಾಥ (ದ.ಕ):** ''ಓಹೋ ಬಸವಣ್ಣ! ಬಂದೆ ಕಣಪ್ಪ, ಹಿಂಗೆ ಮಾರ್ಕೆಟ್ ಕಡೆ ಹೋಗಿದ್ದೆ. ನಾನಂತೂ ಆರಾಮಾಗಿದ್ದೀನಿ, ನೀನು ಹೇಗಿದ್ದೀಯಾ? ನಿಮ್ಮ ಮನೇಲಿ ಎಲ್ಲ ಚೆನ್ನಾಗಿದ್ದಾರಾ?''

**ಬಸವರಾಜ (ಉ.ಕ):** ನಾವೂ ಭಾಳ ಆರಾಮ ಅದೇವ್ ತಡಿ. ಮುಂದಿನ ವಾರ ನಮ್ ಮನ್ಯಾಗ ಊಟಕ್ಕ ಇಟ್ಟೇವಿ, ನೀನು ಪಕ್ಕಾ ಬರಬೇಕು ನೋಡು. ಹೂಂ ಅಂದರಷ್ಟ ಬಿಡ್ತೀನಿ, ಇಲ್ಲಾಂದ್ರ ಮನಿ ತನಕ ಬಂದು ಕರ್ಕೊಂಡ ಹೋಗ್ತಿನಿ!''

**ಮಂಜುನಾಥ (ದ.ಕ):** ''ಅಯ್ಯೋ ಖಂಡಿತ ಬರ್ತೀನಿ ಬಿಡಪ್ಪ, ನೀನು ಅಷ್ಟೊಂದು ಪ್ರೀತಿಯಿಂದ ಕರೆಯುವಾಗ ಬರದೇ ಇರೋಕೆ ಆಗುತ್ತಾ? ಏನೇ ಇರಲಿ, ನಿಮ್ಮ ಕಡೆ ಪ್ರೀತಿ ಜಾಸ್ತಿ ಕಣೋ. ಅಂದಹಾಗೆ, ಊಟಕ್ಕೆ ಏನೇನು ಮಾಡಿಸ್ತೀಯಾ?''

**ಬಸವರಾಜ (ಉ.ಕ):** ''ಮತ್ತೇನು ಮಾಡ್ತಾರ? ಮಸ್ತ್ ಬಿಸಿ ಬಿಸಿ ರೊಟ್ಟಿ, ಬದನೆ ಕಾಯಿ ಪಲ್ಯಾ, ಶೇಂಗಾ ಚಟ್ನಿ ಇರ್ತಾವ. ಉಂಡ ಮ್ಯಾಲ ಒಂಚೂರು ಮೊಸರು ಹಾಕ್ಕೊಂಡರ ಜನ್ಮ ಪಾವನ ಆಗ್ತದ ತಮ್ಮಾ''

**ಮಂಜುನಾಥ (ದ.ಕ):** ''ಕೇಳೋಕೆ ಖುಷಿಯಾಗುತ್ತೆ ಕಣಪ್ಪ. ನಮ್ ಕಡೆ ಆದ್ರೆ ಬಿಸಿ ಬಿಸಿ ಮುದ್ದೆ, ಅವರೆಕಾಳು ಸಾಂಬಾರು ಮಾಡ್ತಿದ್ವಿ. ಸರಿ ಬಿಡು, ಮುಂದಿನ ವಾರ ಸಿಗೋಣ, ಬರ್ತೀನಿ ಕಣೋ!''

## ನಿನ್ನ ಹುಡುಕಾಟ

ಇದೇ ರೀತಿ ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಮಾತನಾಡುವ ಜಾನಪದ ಶೈಲಿಗಳ ಕುರಿತು ಗ್ರಂಥಾಲಯದ ಪುಸ್ತಕ, ಅಂತರ್ಜಾಲ ಹಾಗೂ ಶಿಕ್ಷಕರ ಸಹಾಯ ಪಡೆದು ಸಾಹಿತ್ಯವನ್ನು ತಿಳಿದುಕೊಂಡು, ಅವುಗಳ ಕುರಿತು ಚರ್ಚಿಸಿರಿ ಹಾಗೂ ಇದೇ ರೀತಿಯ ಸಂವಾದ ರಚಿಸಿರಿ.

ಕನ್ನಡದ ಕಂಪು, ಮನಸ್ಸಿಗೆ ಇಂಪು

# 9. ಮೈದಾನದ ರಾಜ ಹೆಬ್ಬಕ

ಲೇಖಕರ ಪರಿಚಯ : ಶ್ರೀ ಶಿವಾನಂದ ಬಸಲಿಂಗಪ್ಪಾ ಹಿರೇಮಠ ಇವರು ಸುಮಾರು ಇಪ್ಪತ್ತೆಂಟು ವರ್ಷಗಳಿಂದ ಸೋಲಾಪುರದ ಸಿದ್ದೇಶ್ವರ ಪ್ರೌಢ ಶಾಲೆಯಲ್ಲಿ ಗಣಿತ ಮತ್ತು ವಿಜ್ಞಾನದ ಶಿಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಪುಣ್ಯಶ್ಲೋಕ ಅಹಿಲ್ಯಾಬಾಯಿ ಹೋಳಕರ ವಿಶ್ವವಿದ್ಯಾಲಯದಲ್ಲಿ ರಾಜ್ಯಪಾಲರಿಂದ ನಿಯುಕ್ತರಾದ ಸಿನೇಟ ಸದಸ್ಯರಾಗಿದ್ದರು. ವಾಯಿಲ್ಡ್ ಫೋಟೊಗ್ರಾಫಿಯಲ್ಲಿ ಎರಡು ಬಾರಿ ಅಂತರರಾಷ್ಟ್ರೀಯ ಹಾಗೂ ನಾಲ್ಕು ಬಾರಿ ರಾಷ್ಟ್ರಮಟ್ಟದ ಪುರಸ್ಕಾರ ಪಡೆದಿದ್ದಾರೆ. ಕಿರ್ಲೋಸ್ಕರ ವಸುಂಧರಾ ಮಹೋತ್ಸವದಲ್ಲಿ ''ವಸುಂಧರಾ ಮಿತ್ರ'' ಪುರಸ್ಕಾರ ದೊರೆತಿದೆ. ಇಂದಿಗೂ ಅವರು ಒಬ್ಬ ಸರ್ಪಮಿತ್ರ, ಪಕ್ಷಿಮಿತ್ರ, ಪರಿಸರ ಪ್ರೇಮಿ ಎಂದು ಗುರುತಿಸಿಕೊಂಡಿದ್ದಾರೆ.

ಪ್ರಸ್ತುತ ಪಾಠವು ಅವರ 'ಮಿ ಮಾಳಢೋಕ ಬೋಲತೊಯ' ಈ ಮರಾಠಿ ಪ್ರಬಂಧದ ಅನುವಾದವಾಗಿದೆ.

ಅಳಿವಿನ ಅಂಚಿನಲ್ಲಿರುವ ಹೆಬ್ಬಕ ಪಕ್ಷಿಯ ವರ್ಣನೆಯನ್ನು ಮಾಡುತ್ತಾ ಅದನ್ನು ಉಳಿಸಿಕೊಳ್ಳುವುದು ಎಷ್ಟು ಅನಿವಾರ್ಯ ಎಂಬುದರ ಕುರಿತು ಜಾಗೃತಿ ಮೂಡಿಸುವ ಲೇಖನ ಇದಾಗಿದೆ. ಹೆಬ್ಬಕವು ತನ್ನ ಆತ್ಮಕಥೆಯನ್ನು ಹೇಳುತ್ತಿರುವಂತೆ ಅದರ ನೋವನ್ನು ಅದರದೇ ಭಾಷೆಯಲ್ಲಿ ಲೇಖಕರು ಇಲ್ಲಿ ಮನಮುಟ್ಟುವಂತೆ ಹೇಳಿದ್ದಾರೆ.

ಮಕ್ಕಳೇ ನಾನು ಯಾರು ಗೊತ್ತಾ? ನನ್ನ ಒಯ್ಯಾರದ, ರಾಜಗಂಭೀರ ನಡಿಗೆಯಿಂದಾಗಿ ನನ್ನನ್ನು 'ಮೈದಾನದ ರಾಜ' ಎಂದು ಕರೆಯುತ್ತಾರೆ. ನಾನೇ ನಿಮ್ಮ ಹೆಬ್ಬಕ. ಗ್ರಾಮೀಣ ಭಾಷೆಯಲ್ಲಿ ನನ್ನನ್ನು ಹುಡಕ್ಕಿ, ಹೆಬ್ಬಕ ಎಂದು ಕರೆದರೂ, ಇಂಗ್ಲೀಷಿನಲ್ಲಿ ನನ್ನನ್ನು ಗ್ರೇಟ್ ಇಂಡಿಯನ್ ಬಸ್ಟರ್ಡ್ ಎಂದೂ, ಮರಾಠಿಯಲ್ಲಿ ಮಾಳಢೋಕ ಎಂದೂ ಕರೆಯುತ್ತಾರೆ. ಇಂದು ನಾನು ನನ್ನ ಕಥೆಯನ್ನು ನಿಮಗೆ ಹೇಳಲು ಬಂದಿದ್ದೇನೆ. ಕೇಳುವಿರಲ್ಲವೇ ನನ್ನ ಆತ್ಮಕಥೆಯನ್ನು!



ಭಾರತದಂತಹ ವಿಶಾಲವಾದ ಸಾಂಸ್ಕೃತಿಕ, ಧಾರ್ಮಿಕ, ಕಲಾತ್ಮಕ ಪರಂಪರೆ ಹೊಂದಿದ ದೇಶದಲ್ಲಿ ಅಪಾರ ಜೈವವೈವಿಧ್ಯತೆಯನ್ನು ಒಳಗೊಂಡಿರುವ ಬಯಲು ಅಥವಾ ಹುಲ್ಲುಗಾವಲು ನನ್ನ ಜನ್ಮಭೂಮಿಯೂ, ಕರ್ಮಭೂಮಿಯೂ ಆಗಿದೆ.

ಗಾಳಿಯ ಜೊತೆಗೆ ಲಯಬದ್ಧವಾಗಿ ಸರಸರನೇ ಹೊಯ್ದಾಡುವ ಹುಲ್ಲಿನಸಾಲು, ಅದರಿಂದ ಹೊರಡುವ ನಾದ, ಇಂತಹ ಸಂಗೀತಮಯ ಪರಿಸರದಲ್ಲಿ ನನ್ನ ಬಾಲ್ಯ ಕಳೆದಿದೆ. ಈ ಹುಲ್ಲುಗಾವಲಿನ ಮೈದಾನದಲ್ಲಿ ನನ್ನೊಂದಿಗೆ ಮುಂಗುಸಿ. ಅನೇಕ ಪ್ರಕಾರದ ಕೀಟಕಗಳು, ಬಣ್ಣ ಬಣ್ಣದ ಚಿಟ್ಟೆಗಳು, ಕಪ್ಪೆಗಳು, ಚಿಕ್ಕ ಚಿಕ್ಕ ಪಕ್ಷಿಗಳು, ಸರಿಸೃಪಗಳು, ಕಾಡು ಪ್ರಾಣಿಗಳು ಇಂತಹ ನೂರಾರು ಜೀವಿಗಳು ವಾಸಿಸುತ್ತವೆ. ಇದನ್ನೇ 'ನಮ್ಮ ಮನೆ' ಎಂದು ಕರೆಯುತ್ತೇನೆ. ಆದರೆ ಮಾನವರು ತಮ್ಮ ಅನುಕೂಲಕ್ಕಾಗಿ ಈ ಸಮೃದ್ಧ ಜೀವವೈವಿಧ್ಯತೆಗೆ 'ಪಾಳು ಬಿದ್ದ ಭೂಮಿ'ಎಂಬ ಹೆಸರು ನೀಡಿದರು.

ನೀವು ವಾಸಿಸುವ ಸ್ಥಳಗಳನ್ನು ಗ್ರಾಮ, ನಗರ, ಮಹಾನಗರ ಎಂದು ಕರೆಯುತ್ತೀರಿ. ಆದರೆ ನಮ್ಮ ವಾಸಸ್ಥಾನಕ್ಕೆ ಮಾತ್ರ ಪಾಳುಬಿದ್ದ ಭೂಮಿ ಎಂದು ಹೆಸರು ಇಡುತ್ತೀರಿ. ನನ್ನನ್ನು ನನ್ನ ಬಂಧುಗಳನ್ನು ನೀವು

ಗಂಭೀರವಾಗಿ ಪರಿಗಣಿಸುವದಿಲ್ಲ. ನಮ್ಮ ಮನಸ್ಸಿನ ನೋವು ನಿಮಗೆ ಹೇಗೆ ಅರ್ಥವಾಗುವುದು?

ನನ್ನ ಜೀವನ ವಿಶಾಲವಾದ ಹುಲ್ಲುಗಾವಲಿನ ಮೈದಾನದಲ್ಲಿ ಸಾಗುತ್ತದೆ. ನಿಃಶಬ್ದ ವಾತಾವರಣ, ವಿಶಾಲವಾದ ಆಕಾಶದ ಕೆಳಗೆ ಅಲ್ಲಿ ಇಲ್ಲಿ ಅಲೆದಾಡುತ್ತ ತಾಯಿಯ ಮಮತೆಯ ಮಡಿಲಲ್ಲಿ ಆಟವಾಡುತ್ತ ನನ್ನ ಬಾಲ್ಯ ಕಳೆಯಿತು.

ನನ್ನ ಎತ್ತರ ಸುಮಾರು ಒಂದು ಮೀಟರ್ ಮತ್ತು ತೂಕ ಸುಮಾರು ಹದಿನೆಂಟು ಕಿಲೋ ಗ್ರಾಂ. ಆದ್ದರಿಂದ ನಾನು ಸುಲಭವಾಗಿ ಜನರ ಕಣ್ಣಿಗೆ ಬೀಳುತ್ತೇನೆ. ದೇಹದ ಭಾರ ಹೆಚ್ಚು ಇರುವದರಿಂದ, ಕಾಲಿನ ಬೆರಳುಗಳ ವಿಶಿಷ್ಟ ರಚನೆಯಿಂದಾಗಿ ನಾನು ಹೆಚ್ಚಿನ ಸಮಯ ನೆಲದ ಮೇಲೆಯೇ ಸಂಚರಿಸುವ ಪಕ್ಷಿ.

ಗಾಢ ಕಂದು ಬಣ್ಣದ ಮೇಲೆ ಕಪ್ಪು ಅಲೆಗಳಂತಿರುವ ರೇಖೆಗಳು, ಕೆಳಭಾಗ ಬಿಳಿಮುಸುಕಿನಂತಿದ್ದು, ಎದೆಯ ಮೇಲೆ ಅಗಲವಾದ ಕಪ್ಪು ಹಾರದಂತೆ ಕಾಣುವ ಗುರುತು, ತಲೆಯ ಮೇಲೆ ಸ್ಪಷ್ಟವಾಗಿ ಕಾಣುವ ಕಪ್ಪು ತುರಾಯಿ ಇಂತಹ ಸುಂದರ ಹಾಗೂ ಆಕರ್ಷಕ ರೂಪವನ್ನು ಪ್ರಕೃತಿ ನನಗೆ ನೀಡಿದೆ.

ನಾನು ಮತ್ತು ನನ್ನ ಸಂಗಾತಿ ನೋಡಲು ಒಂದೇ ರೀತಿಯಾಗಿದ್ದರೂ ಹೆಣ್ಣು ಪಕ್ಷಿ ಗಾತ್ರದಲ್ಲಿ ಸ್ವಲ್ಪ ಚಿಕ್ಕದಾಗಿರುತ್ತದೆ.

ಬೆಳಿಗ್ಗೆ ಮತ್ತು ಸಾಯಂಕಾಲ ಹುಲ್ಲುಗಾವಲಿನ ಮೈದಾನದಲ್ಲಿ ಆಹಾರ ಹುಡುಕುವಾಗ ನಾನು ಹುಳ ಹುಪ್ಪಟೆ, ಕಪ್ಪೆ, ಪಕ್ಷಿಗಳ ಮೊಟ್ಟೆ, ಹಾವು, ಮಿಡತೆ ಇತ್ಯಾದಿಗಳನ್ನು ಆಹಾರವಾಗಿ ತಿನ್ನುತ್ತೇನೆ. ನಿಮ್ಮ ಹೊಲದಲ್ಲಿಯ ಬೆಳೆಗಳ ಮೇಲಿನ ಕೀಟಕಗಳು ನನ್ನ ಮೆಚ್ಚಿನ ಆಹಾರ. ಈ ಮೂಲಕ ನಾನು ರೈತರಿಗೆ ಸಹಕಾರಿಯಾಗಿದ್ದೇನೆ. ಬಿಸಿಲು ಹೆಚ್ಚಾದಂತೆ ನಾನು ಚಿಕ್ಕ ಗಿಡಗಳ ನೆರಳಲ್ಲಿ ಅಥವಾ ಬೆಳೆಗಳ ನಡುವೆ ಹೋಗಿ ವಿಶ್ರಾಂತಿ ಪಡೆಯುತ್ತೇನೆ.

ನಮ್ಮಲ್ಲಿ ಹೆಣ್ಣು ಪಕ್ಷಿ ಒಂದೇ ಒಂದು ಮೊಟ್ಟೆಯನ್ನು ಇಡುತ್ತದೆ. ಅದು ಮಸುಕಾದ ಹಸಿರು ಕಂದು ಬಣ್ಣದ್ದಾಗಿದ್ದು, ಅದರ ಮೇಲೆ ಗಾಡ ಕಂದು ಬಣ್ಣದ ಕಲೆಗಳಿರುತ್ತವೆ. ಅದನ್ನು ಭೂಮಿಯ ಮೇಲಿನ ಚಿಕ್ಕ ತಗ್ಗುಗಳಲ್ಲಿ ಅಥವಾ ಗಿಡದ ಪೊಳ್ಳಿನಲ್ಲಿ ಇಡುತ್ತದೆ.

ನನ್ನ ಗಂಭೀರ ಒಯ್ಯಾರದಿಂದ ಕೂಡಿದ ರಾಜಗಾಂಭೀರ್ಯ ನಡಿಗೆಯಿಂದಾಗಿ ನನ್ನನ್ನು ಮೈದಾನದ ರಾಜನೆಂದು ಕರೆಯುತ್ತಾರೆ ಆದರೆ ಇಂದು ಈ ರಾಜ ನಿಃಶಬ್ದವಾಗಿ ಅಳಿದು ಹೋಗುತ್ತಿದ್ದಾನೆ. ನಮ್ಮ ಸಂಖ್ಯೆ ದಿನೇ ದಿನೇ ಕಡಿಮೆಯಾಗುತ್ತಿದೆ ನಮ್ಮನ್ನು ಈಗ ಅತ್ಯಂತ ಅಪರೂಪದ ಮತ್ತು ಅತಿ ಅಪಾಯದಲ್ಲಿರುವ ಪ್ರಜಾತಿ ಎಂದು ಘೋಷಿಸಲಾಗಿದೆ.

ಮಹಾರಾಷ್ಟ್ರ, ರಾಜಸ್ಥಾನ, ಗುಜರಾತ, ಕರ್ನಾಟಕ, ಆಂಧ್ರಪ್ರದೇಶ ಈ ರಾಜ್ಯಗಳಲ್ಲಿ ನಮ್ಮ ವಾಸವಿದೆ. ಅದರಲ್ಲೂ ರಾಜಸ್ಥಾನದಲ್ಲಿ ನಾವು ಹೆಚ್ಚಾಗಿ ಕಂಡುಬರುತ್ತೇವೆ. ಮಹಾರಾಷ್ಟ್ರದಲ್ಲೂ ನಮ್ಮ ಸಂಖ್ಯೆ ವಿಪುಲವಾಗಿತ್ತು. ಆದರೆ ಇಂದು ಭಾರತದಲ್ಲಿ ಕೇವಲ 150 ಕ್ಕೆ ನಮ್ಮ ಸಂಖ್ಯೆ ಇಳಿದಿದೆ. ಮಹಾರಾಷ್ಟ್ರದಲ್ಲಿ ಒಂದೆರಡು ಮಾತ್ರ.

ನಮ್ಮ ನಾಶಕ್ಕೆ ಕಾರಣ ನಿಸರ್ಗವಲ್ಲ ಮಾನವನೇ ಆಗಿದ್ದಾನೆ.

- **ಬೇಟೆಗಾರಿಕೆ**
- **ಕೃಷಿ ಭೂಮಿಯ ವಿಸ್ತರಣೆ**
- **ಕುಸಿಯುತ್ತಿರುವ ಹುಲ್ಲುಗಾವಲಿನ ಪ್ರದೇಶ**
- **ಬೀದಿನಾಯಿಗಳ ಹಾವಳಿ**
- **ವನರಕ್ಷಿತ ಪ್ರದೇಶಗಳಲ್ಲಿ ವಸತಿಗಳ ವಿಸ್ತರಣೆ**

ಇದರಿಂದಾಗಿ ನಮ್ಮ ಪ್ರಜಾತಿಯ ಸಂಖ್ಯೆ ದಿನೇ ದಿನೇ ಕಡಿಮೆಯಾಗುತ್ತಿದ್ದು ನಾವು ನಾಶದ ಅಂದರೆ ಅಳಿವಿನ ಅಂಚಿನಲ್ಲಿದ್ದೇವೆ ಅದಕ್ಕಾಗಿಯೇ ಸರಕಾರವು ಅನೇಕ ಯೋಜನೆಗಳ ಮೂಲಕ ನಮ್ಮನ್ನು ರಕ್ಷಿಸುವ ಹೊಣೆ ಹೊತ್ತುಕೊಂಡಿದೆ. ಅವರೊಂದಿಗೆ ಕೆಲವು ಪಕ್ಷಿ ಪ್ರೇಮಿಗಳ ಸಂಘಟನೆಗಳು ಕೈಗೂಡಿಸಿವೆ.

ಈಗ ನೀವೇ ನಿರ್ಧರಿಸಿರಿ. ನನ್ನನ್ನು ಉಳಿಸುವಿರೋ? ಇಲ್ಲವೇ ಕಳೆದುಕೊಳ್ಳುವಿರೋ? ನೀವು ನನ್ನನ್ನು ಉಳಿಸದಿದ್ದರೆ, ಮುಂದಿನ ಪೀಳಿಗೆ ನನ್ನನ್ನು ಕೇವಲ ಪುಸ್ತಕಗಳ ಪುಟಗಳಲ್ಲಿ ಮತ್ತು ಫೋಟೋಗಳಲ್ಲಿ ಮಾತ್ರ ನೋಡಬಹುದಾಗಿದೆ.

❖ ನನಗೆ ತಿಳಿದಂತೆ.

**ಕೊಟ್ಟ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆರಿಸಿ, ಅದರ ಎದುರಿಗೆ ನಕ್ಷತ್ರ (★)ದ ಗುರುತು ಹಾಕಿರಿ. ಅದರಂತೆ ನೀವು ಅದೇ ಉತ್ತರ ಆಯ್ಕೆ ಮಾಡಲು ಕಾರಣವೇನೆಂದು ಗೆಳೆಯರೊಂದಿಗೆ ಚರ್ಚಿಸಿರಿ.**

**1) ಭಾರತ ದೇಶವು ಎಂತಹ ಪರಂಪರೆಯನ್ನು ಹೊಂದಿದೆ?**

i) ಒಳಜಗಳ ಹಾಗೂ ದ್ವೇಷಗಳಿಂದ ಕೂಡಿದ ಪರಂಪರೆ. ☐

ii) ವಿಶಾಲವಾದ, ಸಾಂಸ್ಕೃತಿಕ, ಧಾರ್ಮಿಕ, ಕಲಾತ್ಮಕ ಪರಂಪರೆ. ☐

iii) ಅಂದಶ್ರದ್ಧೆಗಳಿಂದ ಕೂಡಿದ ಪರಂಪರೆ. ☐

iv) ರಾಜ ಮಹಾರಾಜರ ಯುದ್ಧಗಳ ಪರಂಪರೆ. ☐

**2) ಹೆಬ್ಬಕಗಳ ಅಸ್ತಿತ್ವದ ಮೇಲೆ ಪರಿಣಾಮ ಬೀರುವ ಕಾರಣಗಳು.**

i) ಹೆಚ್ಚಿನ ಮಳೆ, ಬದಲಾಗುತ್ತಿರುವ ಹವಾಮಾನ. ☐

ii) ಕಡಿಮೆ ಮಳೆ ಮತ್ತು ಒಣ ಹವೆ. ☐

iii) ಕೃಷಿಭೂಮಿಯ ವಿಸ್ತರಣೆ, ಕಣ್ಮರೆಯಾಗುತ್ತಿರುವ ಹುಲ್ಲುಗಾವಲು ಹಾಗೂ ಬೀದಿ ನಾಯಿಗಳ ಹಾವಳಿ. ☐

iv) ಬರಗಾಲ ಹಾಗೂ ಪ್ರದೂಷಣೆ. ☐

**3) ಹೆಬ್ಬಕಗಳು ರೈತನ ಬೆಳೆಗಳನ್ನು ರಕ್ಷಿಸುತ್ತವೆ.**

i) ಹಗಲು ರಾತ್ರಿ ಕಾವಲು ಕಾಯುತ್ತವೆ. ☐

ii) ದನ ಕರುಗಳನ್ನು ಓಡಿಸುತ್ತವೆ. ☐

iii) ಪಕ್ಷಿಗಳು ಬರದಂತೆ ನೋಡಿಕೊಳ್ಳುತ್ತವೆ. ☐

iv) ಬೆಳೆಗಳ ಮೇಲಿನ ಕೀಟಕಗಳನ್ನು ತಿನ್ನುತ್ತವೆ. ☐

**ಕೊಟ್ಟ ಸುಳಿವುಗಳಿಗೆ ಅನುಸಾರ ಉತ್ತರ ಬರೆಯಿರಿ.**






## ❖ ಹೊಂದಿಸೋಣ ಬಾ

| 'ಅ' ಸ್ತಂಭ | 'ಬ' ಸ್ತಂಭ |
|---|---|
| 1. ಅಳಿವಿನ ಅಂಚಿನಲ್ಲಿ | i) ನನ್ನನ್ನು ಉಳಿಸಿರಿ. |
| 2. ಹೆಬ್ಬಕದ ಮೊಟ್ಟೆ | ii) ಹೆಬ್ಬಕಗಳು |
| 3. ಪಾಳುಬಿದ್ದ ಭೂಮಿ | iii) ಹಸಿರು-ಕಂದು ಬಣ್ಣ ಕಲೆಗಳು |
| 4. ನಾನು ಅಳಿಯುವ ಮೊದಲು | iv) ಹೆಬ್ಬಕ್ಕಗಳ ಮನೆ |

## ಸಾಲುಗಳ ಮೇಲೆ ಚರ್ಚೆ :

- **ಕೊಟ್ಟ ಸಾಲುಗಳ ಕುರಿತು ಚರ್ಚಿಸಿರಿ ನಿಮ್ಮ ವಿಚಾರಗಳನ್ನು ಬರೆಯಿರಿ.**

1) ನೀವು ವಾಸಿಸುವ ಸ್ಥಳಗಳನ್ನು ಗ್ರಾಮ, ನಗರ, ಮಹಾನಗರ ಎಂದು ಕರೆಯುತ್ತೀರಿ. ಆದರೆ ನಮ್ಮ ವಾಸಸ್ಥಾನಕ್ಕೆ ಮಾತ್ರ ಪಾಳುಬಿದ್ದ ಭೂಮಿ ಎನ್ನುತ್ತೀರಿ.
2) ನಾವು ಅಳಿವಿನ ಅಂಚಿನಲ್ಲಿದ್ದೇವೆ. ಸರಕಾರವು ನಮ್ಮನ್ನು ರಕ್ಷಿಸುವ ಹೊಣೆ ಹೊತ್ತುಕೊಂಡಿದೆ.

## ಯೋಚಿಸಿ ಬರೆ

1) ಪಾಠದ ಸಹಾಯದಿಂದ ಹೆಬ್ಬಕವನ್ನು ವರ್ಣಿಸಿರಿ.
2) ಹೆಬ್ಬಕಗಳು ಅಳಿವಿನ ಅಂಚಿನಲ್ಲಿರಲು ಕಾರಣಗಳೇನು?
3) ಈ ಪಕ್ಷಿಗಳನ್ನು ಉಳಿಸಲು ಸರಕಾರ ಏನು ಮಾಡುತ್ತಿದೆ? ನೀವು ಏನು ಮಾಡುವಿರಿ?
4) ನಿಮ್ಮ ಸುತ್ತ-ಮುತ್ತ ಇತ್ತೀಚೆಗೆ ಕಡಿಮೆಯಾಗುತ್ತಿರುವ ಪ್ರಾಣಿ ಪಕ್ಷಿಗಳ ಕುರಿತು ಬರೆಯಿರಿ.

## ❖ ರಚಿಸೋಣ ಬಾ

ನನ್ನ ಜೀವನ ವಿಶಾಲವಾದ ಹುಲ್ಲುಗಾವಲಿನ ಮೈದಾನದಲ್ಲಿ ಸಾಗುತ್ತದೆ. ನಿಃಶಬ್ದ ವಾತಾವರಣ, ವಿಶಾಲವಾದ ಆಕಾಶದ ಕೆಳಗೆ ಅಲ್ಲಿ-ಇಲ್ಲಿ ಅಲೆದಾಡುತ್ತ, ತಾಯಿಯ ಮಮತೆಯ ಮಡಿಲಲ್ಲಿ ಆಟವಾಡುತ್ತ ನನ್ನ ಬಾಲ್ಯ ಕಳೆದಿದೆ.

ಮೇಲಿನ ವಾಕ್ಯಗಳನ್ನು ನೋಡಿದಾಗ ನಮಗೆ ತಿಳಿಯುವುದೇನೆಂದರೆ ಹೆಬ್ಬಕವು ಇಲ್ಲಿ ತನ್ನ ಕಥೆಯನ್ನು ಹೇಳುತ್ತಿದೆ. ಹೀಗೆ ತನ್ನ ಕಥೆ ತಾನೇ ಹೇಳುತ್ತಿರುವುದಕ್ಕೆ **ಆತ್ಮಕಥೆ** ಎನ್ನುವರು. ಇಲ್ಲಿ ಅದು ತನ್ನ ಹುಟ್ಟು, ವರ್ಣನೆ, ಆಹಾರ, ಜೀವನ, ಕಷ್ಟಗಳು ಇವುಗಳ ಬಗ್ಗೆ ತಿಳಿಸುತ್ತಿದೆ.

- **ಪಾಠವನ್ನು ಮತ್ತೊಮ್ಮೆ ಗಮನವಿಟ್ಟು ಓದಿರಿ. ಅದರ ವಿಶೇಷತೆಗಳನ್ನು ತಿಳಿದುಕೊಳ್ಳಿರಿ. ಅದರಂತೆ ನೀವು ಕೂಡ ಯಾವುದಾದರೂ ಒಂದು ವಸ್ತು, ಪ್ರಾಣಿ, ಪಕ್ಷಿಯ ಕುರಿತು ಆತ್ಮಕಥೆಯನ್ನು ಬರೆಯಿರಿ.**

## ❖ ಭಾಷೆ ತಿಳಿಯೋಣ ಬನ್ನಿ.

★ **ಸಂಧಿಯ ಕುರಿತು ಕೊಟ್ಟ ಕೋಷ್ಟಕವನ್ನು ಪೂರ್ಣ ಮಾಡಿರಿ.**

| ಪೂರ್ವ ಪದ | | ಉತ್ತರ ಪದ | | ಸಂಧಿ ಪದ | ಸಂಧಿಯ ಹೆಸರು |
|---|---|---|---|---|---|
| ಹುಲ್ಲು | + | ________ | = | ಹುಲ್ಲುಗಾವಲು | ಗದಬಾದೇಶ ಸಂಧಿ |
| ____ | + | ಅಲ್ಲಿ | = | ಭಾಷೆಯಲ್ಲಿ | -------- |
| ____ | + | ________ | = | ರೂಪವನ್ನು | ಆಗಮ ಸಂಧಿ |
| ಮಡಿಲು | + | ಅಲ್ಲಿ | = | ------- | ಸ್ವರಲೋಪ ಸಂಧಿ |

❖ **ಕೊಟ್ಟ ಸುಳಿವುಗಳನ್ನು ಓದಿ ಚೌಕಟ್ಟನ್ನು ಪೂರ್ಣ ಮಾಡಿರಿ.**

| | | | | | |
|---|---|---|---|---|---|
| 1) ಮಧುರವಾಗಿ ಹಾಡುವ ಪಕ್ಷಿ | → | | | ಲೆ | |
| 2) ಮನೆಗಳ ಸುತ್ತ ಕಾಣಿಸುವ ಸಣ್ಣ ಪಕ್ಷಿ | → | | ಬ್ಬ | | |
| 3) ಸಂದೇಶ ತರುವ ಪಕ್ಷಿ | → | | ರಿ | | |
| 4) ರಾಷ್ಟ್ರ ಪಕ್ಷಿ | → | ನ | | | |
| 5) ರಾತ್ರಿ ಕಾಣಿಸುವ ಪಕ್ಷಿ | → | | ಬೆ | | |



**ನಿನ್ನ ಹುಡುಕಾಟ:**

ಅಳಿವಿನ ಅಂಚಿನಲ್ಲಿರುವ ಕೆಲವು ಪ್ರಾಣಿ, ಪಕ್ಷಿ ಹಾಗೂ ವನಸ್ಪತಿಗಳ ಕುರಿತು ಮಾಹಿತಿ ಹಾಗೂ ಚಿತ್ರ ಸಂಗ್ರಹಿಸಿರಿ.

1) ಅವುಗಳ ಅಳಿವಿಗೆ ಕಾರಣವೇನು?

2) ಅವುಗಳನ್ನು ಉಳಿಸಲು ಸರಕಾರ ಯಾವ ಕ್ರಮಗಳನ್ನು ಕೈಗೊಂಡಿದೆ?

ಮೇಲಿನ ವಿಚಾರಗಳ ಕುರಿತು ಶಿಕ್ಷಕರೊಂದಿಗೆ ಚರ್ಚಿಸಿರಿ ಹಾಗೂ ಅಂತರ್ಜಾಲದಿಂದ ವಿಷಯ ಸಂಗ್ರಹ ಮಾಡಿ ಸಚಿತ್ರ ಪ್ರಕಲ್ಪ ತಯಾರಿಸಿ ಅದನ್ನು ವರ್ಗದಲ್ಲಿ ಪ್ರದರ್ಶಿಸಿರಿ.

❖ **ಕೆಳಗಿನ ಘೋಷವಾಕ್ಯಗಳನ್ನು ಓದು. 'ಪಕ್ಷಿಗಳ ರಕ್ಷಣೆ' ಕುರಿತು ಸ್ವಂತದ ಘೋಷ ವಾಕ್ಯಗಳನ್ನು ತಯಾರಿಸು.**

**ಉಳಿಸಿದರೆ ವನರಾಶಿ ಉಳಿಯುವುದು ಜೀವರಾಶಿ.**

**ಚಿಲಿಪಿಲಿ ಹಾಡುವ ಪಕ್ಷಿ ವನದ ಸೌಂದರ್ಯಕ್ಕೆ ಸಾಕ್ಷಿ.**

❖ ತಿಳಿಯೋಣ ಬನ್ನಿ.

# ಅಂತರರಾಷ್ಟ್ರೀಯ ಖ್ಯಾತಿಯ ಪಕ್ಷಿಶಾಸ್ತ್ರಜ್ಞ ಮಾರುತಿ ಭುಜಂಗರಾವ ಚಿತ್ತಂಪಲ್ಲಿ



ಕಾರ್ಯ: ತಮ್ಮ ಜೀವನದ ಬಹುಪಾಲನ್ನು ಅವರು ಕಾಡು, ಪಕ್ಷಿಗಳು ಮತ್ತು ಪ್ರಕೃತಿ ಅಧ್ಯಯನಕ್ಕೆ ಸಮರ್ಪಿಸಿದರು. ಅವರು ಮಹಾರಾಷ್ಟ್ರದ ಅರಣ್ಯ ಇಲಾಖೆಯಲ್ಲಿ 36 ವರ್ಷಗಳಿಗಿಂತ ಹೆಚ್ಚು ಕಾಲ ಸೇವೆ ಸಲ್ಲಿಸಿದರು. ವಿವಿಧ ರಾಷ್ಟ್ರೀಯ ಉದ್ಯಾನಗಳು ಹಾಗೂ ಅಭಯಾರಣ್ಯಗಳ ಸ್ಥಾಪನೆಯಲ್ಲಿ ಮಹತ್ವದ ಪಾತ್ರವಹಿಸಿದರು. ಇವರು ಅನೇಕ ಪುಸ್ತಕಗಳನ್ನು ಮತ್ತು ಗ್ರಂಥಗಳನ್ನು ರಚಿಸಿದ್ದಾರೆ. ಇವೆಲ್ಲ ಪಕ್ಷಿಗಳು, ಪ್ರಾಣಿಗಳು, ಮರಗಳು, ಕಾಡುಗಳ ಜ್ಞಾನ ಮತ್ತು ಪರಿಸರ ಜಾಗೃತಿಗೆ ಸಂಬಂಧಿಸಿದ ಕೃತಿಗಳಾಗಿವೆ.

ಅದರಲ್ಲಿ 'ಪಕ್ಷಿಕೋಶ' ಪ್ರಮುಖ ಕೃತಿಯಾಗಿದೆ. ಇದು ಪಕ್ಷಿಗಳ ಬಗ್ಗೆ ಸಮೃದ್ಧ ಮಾಹಿತಿಯನ್ನು ಮರಾಠಿಯಲ್ಲಿ ಒದಗಿಸುವ ಮಹತ್ವದ ಗ್ರಂಥವಾಗಿದೆ.

ಇವರು ಎಲ್ಲೆಡೆ 'ಅರಣ್ಯಋಷಿ' ಎಂದು ಪ್ರಸಿದ್ಧರಾಗಿದ್ದರು. ಮಹಾರಾಷ್ಟ್ರದ ಸೋಲಾಪುರ ನಗರದ ಖ್ಯಾತ ಪಕ್ಷಿಶಾಸ್ತ್ರಜ್ಞ, ವನ್ಯಜೀವಿ ಸಂಶೋಧಕ, ಲೇಖಕ ಹಾಗೂ ಪರಿಸರ ಕಾರ್ಯಕರ್ತರಾಗಿದ್ದರು.

ಜನನ: 12 ನವೆಂಬರ್ 1932 ರಲ್ಲಿ.

ಮರಣ: 18 ಜೂನ್ 2025ರಲ್ಲಿ.

**ದೊರೆತ ಪ್ರಶಸ್ತಿಗಳು:**

- 2025ರಲ್ಲಿ ಪದ್ಮಶ್ರೀ ಪ್ರಶಸ್ತಿ.
- 2017 ಮಹಾರಾಷ್ಟ್ರ ಸರ್ಕಾರದಿಂದ ವಿಂದಾ ಕರಂದಿಕರ ಪ್ರಶಸ್ತಿ.
- 2018 ಪುಣೆಯಲ್ಲಿ ಕಿರ್ಲೋಸ್ಕರ್ ವಸುಂಧರ ಅವರ ಜೀವಮಾನ ಸಾಧನೆ ಪುರಸ್ಕಾರ.

# ತಾಡೋಬಾ ಅರಣ್ಯದಲ್ಲಿ ಕಾಳ್ಗಿಚ್ಚು-

## ಮೂಕ ಪ್ರಾಣಿಗಳ ಅರಣ್ಯರೋದನ, ಹಲವಾರು ಕಾಡು ಜೀವಿಗಳ ಕುಟುಂಬಗಳ ಬಲಿ

ಚಂದ್ರಪೂರ, ಅಕ್ಟೋಬರ್ 26: ಮಹಾರಾಷ್ಟ್ರದ ಪ್ರಸಿದ್ಧ ಅಭಯಾರಣ್ಯ ತಾಡೋಬಾದಲ್ಲಿ ನಿನ್ನೆ ಹಬ್ಬಿತು ಕಾಳ್ಗಿಚ್ಚು, ಈ ಕಾಳ್ಗಿಚ್ಚಿನಲ್ಲಿ ಹೃದಯ ಕಲುಕುವ ಘಟನೆಯೊಂದು ಕ್ಯಾಮೆರಾದಲ್ಲಿ ಸೆರೆಯಾಗಿದೆ ಅರಣ್ಯದ ಒಂದು ಭಾಗದಲ್ಲಿ ತೀವ್ರವಾಗಿ ಹಬ್ಬಿದ ಬೆಂಕಿಯಿಂದ ಹಲವು ಪ್ರಾಣಿ - ಪಕ್ಷಿಗಳ ವಾಸಸ್ಥಾನ ಸುಟ್ಟು ಹೋಗಿವೆ. ಅಷ್ಟೇ ಅಲ್ಲ ಅವುಗಳ ಪುಟ್ಟ ಪುಟ್ಟ ಮರಿಗಳು ಬೆಂಕಿಯಲ್ಲಿ ಸುಟ್ಟು ಅಸುನೀಗಿವೆ. ಈ ದುರ್ಘಟನೆಯಲ್ಲಿ ಒಂದು ಹಕ್ಕಿಯ ಗೂಡಿನಲ್ಲಿದ್ದ ಮರಿ ಬೆಂಕಿಗೆ ಬೆಂದು ಕರಕಲಾಗಿದೆ. ಆಗ ದುಃಖಿತಪ್ತ ತಾಯಿಹಕ್ಕಿ ಸತ್ತ ತನ್ನ ಮರಿಯ ಮುಂದೆ ಬಂದು ಒಂದೇ ಸವನೆ ಆರ್ತನಾಗಿ ಕೂಗುತ್ತಿದೆ. ಈ ದೃಶ್ಯ ಸಮಾಜ ಮಾಧ್ಯಮದಲ್ಲಿ ತಕ್ಷಣ ಹರಡಿ ಸಂಚಲನ ಮೂಡಿಸಿದೆ. ಈ ದೃಶ್ಯವು ಜನರ ಮನಸ್ಸನ್ನೇ ಕಲುಕಿದೆ. ಗೂಡು ಸುಟ್ಟ ನಂತರ ಅಲ್ಲಿ ಬಂದು ತನ್ನ ಬೆಂದ ಮರಿಯನ್ನು ನೋಡಿ ಒಂದೇ ಸವನೆ ಗೋಳಾಡಿ ತನ್ನ ಭಾಷೆಯಲ್ಲಿ, ನನ್ನ ಮರಿಯನ್ನು ಯಾರಾದರೂ ಬದುಕಿಸಿ ಕೊಡಿ ಎನ್ನುವ ರೀತಿಯಲ್ಲಿ ಕಣ್ಣೀರಿಡುತ್ತ ಕೂಗುತ್ತಿದೆ. ಅಷ್ಟೇ ಅಲ್ಲ ಕಾಳ್ಗಿಚ್ಚಿಗೆ ಕಾರಣರಾದವರನ್ನು ಶಪಿಸುವಂತಿದೆ ಅದರ ಚೀರಾಟ.

ಅರಣ್ಯ ಇಲಾಖೆಯ ಪ್ರಾಥಮಿಕ ತನಿಖೆಯ ಪ್ರಕಾರ, ಈ ಕಾಳ್ಗಿಚ್ಚು ಮಾನವನ ಅಜಾಗರೂಕತೆಯಿಂದ ಉಂಟಾಗಿರುವ ಸಾಧ್ಯತೆ ಹೆಚ್ಚಿದೆ ಎಂದು ತಿಳಿದು ಬಂದಿದೆ. ಕೆಲವು ಪೋಕರಿಗಳು ಅರಣ್ಯ ಪ್ರದೇಶದಲ್ಲಿ ಹಚ್ಚಿದ ಬೆಂಕಿಯ ಪರಿಣಾಮವಾಗಿ ಈ ದುರಂತ ಸಂಭವಿಸಿರಬಹುದು ಎಂದು ಶಂಕಿಸಲಾಗಿದೆ. ತಕ್ಷಣವೇ ಅಗ್ನಿಶಾಮಕ ತಂಡ ಹಾಗೂ ಅರಣ್ಯ ಸಿಬ್ಬಂದಿ ಬೆಂಕಿಯನ್ನು ನಿಯಂತ್ರಣಕ್ಕೆ ತಂದರು. ಹೆಚ್ಚಿನ ತನಿಖೆ ಮುಂದುವರೆದಿದೆ.



## ಮರಿಯ ಬಲಿ, ತಾಯಿ ಹಕ್ಕಿಯ ಆರ್ತನಾದ...

- ಕಾಡು ನಿಸರ್ಗದಲ್ಲಿ ವಾಸಿಸುವ ಎಲ್ಲ ಪ್ರಾಣಿ-ಪಕ್ಷಿಗಳ ವಾಸಸ್ಥಾನ. ಇಲ್ಲಿ ಜೀವಿಸುವ ಪ್ರತಿಯೊಂದು ಪ್ರಾಣಿ,ಪಕ್ಷಿಗೂ ಮನುಷ್ಯನ ಹಾಗೆ ಬದುಕಲು ಹಕ್ಕಿದೆ.ಅವುಗಳಿಗೂ ತಮ್ಮ ಕುಟುಂಬ ನಮ್ಮಷ್ಟೇ ಅಮೂಲ್ಯ.
- ನಾವು ಮಾಡುವ ಸಣ್ಣ ಅಜಾಗರೂಕತೆ ಹಲವಾರು ನಿರಪರಾಧ ಜೀವಗಳ ಅಂತ್ಯಕ್ಕೆ ಕಾರಣವಾಗಬಹುದು.
- ದಯವಿಟ್ಟು ಕಾಡಿನಲ್ಲಿ ಬೆಂಕಿಯನ್ನು ಹಚ್ಚಬೇಡಿ ಮತ್ತು ಹತ್ತಿದ ಬೆಂಕಿಯನ್ನು ಹಬ್ಬಲು ಬಿಡದೆ ತಕ್ಷಣ ನಂದಿಸಲು ಪ್ರಯತ್ನಿಸಿರಿ ಎಂದು ಸರಕಾರ ಸಾರ್ವಜನಿಕರಿಗೆ ಮನವಿ ಮಾಡಿದೆ.

❖ **ಸುದ್ದಿಯನ್ನು ಓದಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸು.**

ಅ) ಕಾಳ್ಗಿಚ್ಚು ಯಾವ ಯಾವ ಕಾರಣಗಳಿಂದ ಹುಟ್ಟಿಕೊಳ್ಳಬಹುದು?

ಆ) ಪ್ರಸ್ತುತ ದುರಂತ ಯಾವ ಅಭಯಾರಣ್ಯದಲ್ಲಿ ಸಂಭವಿಸಿದೆ?

ಇ) ಚಂದ್ರಪೂರ ಜಿಲ್ಲೆ ಮಹಾರಾಷ್ಟ್ರದ ಯಾವ ದಿಕ್ಕಿಗೆ ಬರುತ್ತದೆ?

ಈ) ಈ ಚಿತ್ರವನ್ನು ನೋಡಿದ ಮೇಲೆ ನಿನಗೆ ಏನೆನಿಸುತ್ತದೆ?

ಉ) ಈ ಘಟನೆ ಯಾವ ದಿನಾಂಕದಂದು ಸಂಭವಿಸಿದೆ?

ಊ) ಪ್ರಸ್ತುತ ಸುದ್ದಿಗೆ ಬೇರೆ ಯಾವ ತಲೆಬರಹ ಕೊಡಬಹುದು?

**ಮೇಲಿನ ಸುದ್ದಿಯನ್ನು ಓದಿ ಸಾರಾಂಶವನ್ನು ನಿನ್ನ ಮಾತುಗಳಲ್ಲಿ ಬರೆ.**

# 10. ತಲ್ಲಣಿಸದಿರು ಕಂಡ್ಯ ತಾಳು ಮನವೆ

**ಕವಿ ಪರಿಚಯ :- ಕನಕದಾಸರು (1509 - 1606) ಕೀರ್ತನಕಾರರು.** 15 - 16ನೆಯ ಶತಮಾನದ ಕರ್ನಾಟಕದ ಪ್ರಸಿದ್ಧ ಹರಿದಾಸರು, ಕೀರ್ತನಕಾರರು ಮತ್ತು ದಾರ್ಶನಿಕರು. ಹಾವೇರಿ ಜಿಲ್ಲೆಯ 'ಬಾಡ' ಗ್ರಾಮದ ಕುರುಬ ಸಮುದಾಯದಲ್ಲಿ ಬಚ್ಚಮ್ಮ ಮತ್ತು ಬೀರಪ್ಪನಾಯಕ ದಂಪತಿಗಳ ಮಗನಾಗಿ ಜನಿಸಿದರು. ಇವರ ಮೂಲ ಹೆಸರು ತಿಮ್ಮಪ್ಪನಾಯಕ, ಇವರ ಗುರುಗಳು ವ್ಯಾಸತೀರ್ಥರು. ಇವರ ಅಂಕಿತನಾಮ 'ಕಾಗಿನೆಲೆ ಆದಿಕೇಶವ' ಇವರು ಸಾವಿರಾರು ಕೀರ್ತನೆಗಳನ್ನು ರಚಿಸಿದ್ದಾರೆ. ಇವುಗಳ ಮೂಲಕ ಜಾತಿ ಪದ್ಧತಿ ಮತ್ತು ಅನಿಷ್ಟ ರೂಢಿಗಳನ್ನು ಖಂಡಿಸಿದ್ದಾರೆ.

ಇವರ ಮುಖ್ಯ ಕೃತಿಗಳು ಮೋಹನ ತರಂಗಿಣಿ, ಹರಿಭಕ್ತಸಾರ, ನಳಚರಿತ್ರೆ, ನರಸಿಂಹಸ್ತವನ ಮತ್ತು ರಾಮಧಾನ್ಯಚರಿತ್ರೆ. ಇವರು ಕರ್ನಾಟಕ ಸಂಗೀತ ಮತ್ತು ಸಾಹಿತ್ಯಕ್ಕೆ ಅನನ್ಯ ಕೊಡುಗೆ ಕೊಟ್ಟಿದ್ದಾರೆ.

''ಹುಟ್ಟಿಸಿದ ದೇವರು ಹುಲ್ಲು ಮೇಯಿಸಲಾರ'' ಎಂಬಂತೆ ನಾವು ಯಾವುದೇ ಪರಿಸ್ಥಿತಿಯಲ್ಲಿದ್ದರೂ ಆ ದೇವರು ನಮ್ಮನ್ನು ರಕ್ಷಿಸುತ್ತಾನೆ ಎಂಬ ನಂಬಿಕೆಯಿಂದ ಸಮಾಧಾನವಾಗಿರು ಎಂದು ಕನಕದಾಸರು ಅನೇಕ ಉದಾಹರಣೆ ನೀಡಿ ಈ ಕೀರ್ತನೆಯಲ್ಲಿ ವಿವರಿಸಿದ್ದಾರೆ.



ತಲ್ಲಣಿಸದಿರು ಕಂಡ್ಯ ತಾಳು ಮನವೇ
ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ ।। ಪ ।।

ಬೆಟ್ಟದಾ ತುದಿಯಲ್ಲಿ ಹುಟ್ಟಿದಾ ವೃಕ್ಷಕ್ಕೆ
ಕಟ್ಟೆಯನು ಕಟ್ಟಿ ನೀರೆರೆದವರು ಯಾರೋ
ಪುಟ್ಟಿಸಿದ ದೇವ ತಾ ಹೊಣೆಗಾರನಾಗಿರಲು
ಗಟ್ಯಾಗಿ ರಕ್ಷಿಪನಿದಕೆ ಸಂಶಯವಿಲ್ಲ ।। 1 ।।

ಅಡವಿಯೊಳಗಾಡುವ ಮೃಗ ಪಕ್ಷಿಗಳಿಗೆಲ್ಲ
ಅಡಿಗಡಿಗೆ ಆಹಾರವನಿತ್ತವರು ಯಾರೋ
ಹಡೆದ ಜನನಿಯ ತೆರದಿ ಸ್ವಾಮಿ ಹೊಣೆಗೇಡಾಗಿ
ಬಿಡದೆ ರಕ್ಷಿಪನಿದಕೆ ಸಂದೇಹ ಬೇಡ ।। 2 ।।

ಕಲ್ಲಿನಲಿ ಹುಟ್ಟಿದ ಕೂಗುವಾ ಕಪ್ಪೆಗೆ
ಅಲ್ಲಿ ಆಹಾರವನು ತಂದೀಯುವರು ಯಾರೋ
ಬಲ್ಲಿದನು ಕಾಗಿನೆಲೆ ಆದಿಕೇಶವರಾಯ
ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ ।। 3 ।।

– ಕನಕದಾಸರು

## ❖ ಶಬ್ದಾರ್ಥ :

1) ತಲ್ಲಣ – ತಳಮಳ 2) ಕಂಡ್ಯ – ಕಾಣು 3) ವೃಕ್ಷ – ಮರ
4) ಹೊಣೆಗಾರ – ಜವಾಬ್ದಾರಿಯನ್ನು ಹೊತ್ತವ 5) ಮೃಗ – ಪ್ರಾಣಿ

## ❖ ನನಗೆ ತಿಳಿದಂತೆ.

- **ಯೋಗ್ಯ ಪರ್ಯಾಯಕ್ಕೆ ಸರಿ ( ✓ ) ಚಿಹ್ನೆ ಹಾಕು.**

**1) ಎಲ್ಲಿ ಹುಟ್ಟಿದ ವೃಕ್ಷಕ್ಕೆ ಕಟ್ಟೆಯನ್ನು ಕಟ್ಟಿ ನೀರು ಹಾಕಿದ್ದಾರೆಂದು ಕನಕದಾಸರು ಕೇಳುತ್ತಿದ್ದಾರೆ?**

ಅ) ಬೆಟ್ಟದ ತುದಿ ☐
ಬ) ಹೊಲದ ಬದಿ ☐
ಕ) ನದಿಯ ದಡ ☐
ಡ) ಊರ ಹೊರಗೆ ☐

**2) ಕೂಗುವಾ ಕಪ್ಪೆ ಹುಟ್ಟಿರುವ ಸ್ಥಳ –**

ಅ) ಮಣ್ಣು ☐
ಬ) ನೀರು ☐
ಕ) ನೆಲ ☐
ಡ) ಕಲ್ಲು ☐

**3) ಕನಕದಾಸರು ಇವರ ಆರಾಧಕರು–**

ಅ) ಕಾಗಿನೆಲೆ ಆದಿಕೇಶವರಾಯ ☐
ಬ) ಪುರಂದರ ವಿಠಲ ☐
ಕ) ಹಯವದನ ರಾಯ ☐
ಡ) ಕೂಡಲ ಸಂಗಮದೇವ. ☐



## ಹೊಂದಿಸೋಣ ಬಾ

| 'ಅ' | 'ಬ' |
|---|---|
| 1) ತಲ್ಲಣಿಸು | i) ಮೃಗ ಪಕ್ಷಿಗಳಿಗೆ |
| 2) ಪುಟ್ಟಿಸಿದ ದೇವ ತಾ | ii) ಆದಿಕೇಶವರಾಯ |
| 3) ಬಲ್ಲಿದನು ಕಾಗಿನೆಲೆ | iii) ಹೊಣೆಗಾರನಾಗಿರಲು |
| 4) ಅಡವಿಯೊಳಗೆ ಆಡುವ | iv) ತಳಮಳಗೊಳ್ಳು |

## ಸಾಲುಗಳ ಮೇಲೆ ಚರ್ಚೆ

ಕವಿತೆಯಿಂದ ಆಯ್ದು ಕೊಟ್ಟಿರುವ ಸಾಲುಗಳ ಅರ್ಥವನ್ನು ಗೆಳೆಯರೊಂದಿಗೆ ಚರ್ಚಿಸಿ ನಿನ್ನ ವಿಚಾರವನ್ನು ಲೇಖನ ಪುಸ್ತಕದಲ್ಲಿ ಬರೆ.

''ಹಡೆದ ಜನನಿಯ ತೆರದಿ ಸ್ವಾಮಿ ಹೊಣೆಗೀಡಾಗಿ
ಬಿಡದೆ ರಕ್ಷಿಪನಿದಕೆ ಸಂದೇಹ ಬೇಡ.''

## ಯೋಚಿಸಿ ಬರೆ

- **ಕೆಳಗೆ ಕೊಟ್ಟ ಪ್ರಶ್ನೆಗಳಿಗೆ ಉತ್ತರಿಸು**

1) ಕನಕದಾಸರು ಮನಕ್ಕೆ ತಲ್ಲಣಿಸಬೇಡವೆಂದು ಏಕೆ ಹೇಳುತ್ತಾರೆ?
2) ''ಪುಟ್ಟಿಸಿದ ದೇವರು ಗಟ್ಯಾಗಿ ರಕ್ಷಿಪನು ಸಂಶಯ ಬೇಡ'' ಎಂದು ಹೇಳಲು ಕನಕದಾಸರು ಕೊಟ್ಟ ಉದಾಹರಣೆಗಳು ಯಾವುವು ?
3) ಕಾಗಿನೆಲೆ ಆದಿಕೇಶವರಾಯ ಎಲ್ಲರನು ಸಲಹುವನು ಎಂದು ಹೇಳಲು ಯಾವ ಪ್ರಾಣಿಯ ಉದಾಹರಣೆಯನ್ನು ಕನಕದಾಸರು ನೀಡಿದ್ದಾರೆ.

❖ **ಯೋಗ್ಯ ಅಕ್ಷರ ತುಂಬಿ ಶಬ್ದ ಪೂರ್ಣ ಮಾಡು**

| | | |
|---|---|---|
| ....... | ತ | ....... |
| ನ | ....... | ಕ್ಷಿ |
| ಕ | ....... | ....... |
| ....... | ಸ | ....... |
| ಸ | ....... | ....... |
| ರು | ರು | ಕೆ |

❖ **ಭಾಷೆ ತಿಳಿಯೋಣ ಬನ್ನಿ**

- **ಉದಾಹರಣೆಯಲ್ಲಿ ತೋರಿಸಿದಂತೆ ಕೆಳಗಿನ ವಾಕ್ಯಗಳಲ್ಲಿ ಬಂದ ದ್ವಿರುಕ್ತಿ ಪದಕ್ಕೆ ಅಡಿಗೆರೆ ಹಾಕಿ ಗುರುತಿಸಿ.**

1) ಮುತ್ತುಗಳನ್ನು ರಾಶಿ ರಾಶಿಯಾಗಿ ಅಳೆದು ಮಾರಿದರು.
2) ಪುಟ್ಟಿಸಿದ ದೇವ ಅಡಿಗಡಿಗೆ ಆಹಾರವನ್ನು ಕೊಡುವನು.

❖ **ಕಂಸಿನಲ್ಲಿ ಕೊಟ್ಟ ದ್ವಿರುಕ್ತಿ ಪದಗಳನ್ನು ಆರಿಸಿ ಕೊಟ್ಟ ವಾಕ್ಯಗಳಲ್ಲಿ ತುಂಬಿರಿ.**

(ಮನೆಮನೆಗೂ, ಲಕ್ಷ ಲಕ್ಷ ಜನ, ಎತ್ತರೆತ್ತರಕೆ, ಚಿಕ್ಕ ಚಿಕ್ಕವರಿಗೆ, ನಡೆ ನಡೆ.)

1) ---------- ಪ್ರಯಾಗ ಸಂಗಮದಲ್ಲಿ ಮಿಂದರು.
2) ನಮ್ಮ ಬಾವುಟ ---------- ಹಾರಲಿ.
3) ---------- ಮೊದಲು ಹಂಚಿರಿ.
4) ---------- ಬೇಗ ಹೋಗೋಣ.
5) ಮತದಾನಕ್ಕಾಗಿ ---------- ಹೋಗಿ ಮತ ಹಾಕಲು ಪ್ರಚಾರ ಮಾಡಿದರು.

- **ಕೆಳಗೆ ಕೊಟ್ಟ ಶಬ್ದಗಳನ್ನು ಬಿಡಿಸಿ ಸಂಧಿಯ ಹೆಸರು ಹೇಳಿರಿ.**

1) ಹೊಣೆಗಾರ = ಹೊಣೆ + ಕಾರ = -----------
2) ಸಂಶಯವಿಲ್ಲ = ----------- + ----------- = ಆಗಮ ಸಂಧಿ
3) ನೀರೆರೆದು = ನೀರು + ----------- = -----------
4) ತುದಿಯಲ್ಲಿ = ----------- + ಅಲ್ಲಿ = -----------

❖ **ಅಡಿಗೆರೆ ಎಳೆದ ನಾಮಪದಗಳ ಪ್ರಕಾರಗಳನ್ನು ಗುರುತಿಸಿ ಬರೆಯಿರಿ.**

ಬೆಟ್ಟದಾ ತುದಿಯಲ್ಲಿ ಶಂಕರನ ಮಂದಿರವಿದೆ.

ಉದಾ: ಬೆಟ್ಟ – ರೂಢನಾಮ; ಶಂಕರ – ಅಂಕಿತನಾಮ.

1) ಎತ್ತರದ ಮರದಲ್ಲಿ ಹತ್ತಾರು ಪಕ್ಷಿಗಳು ಕುಳಿತ್ತಿದ್ದವು.
2) ವಿಶ್ವಾಮಿತ್ರನು ಹಿಮಾಲಯ ಪರ್ವತಕ್ಕೆ ಹೊರಟು ಹೋದನು
3) ರಸ್ತೆ ಬದಿಯಲ್ಲಿ ಭಿಕ್ಷುಕ ಭಿಕ್ಷೆ ಬೇಡುತ್ತಿದ್ದ.
4) ವೈದ್ಯರು ರೋಗಿಯನ್ನು ಪರೀಕ್ಷಿಸಿದರು.
5) ರಾಣಿ ಹಾಡನ್ನು ಇಂಪಾಗಿ ಹಾಡಿದಳು.

## ನಿನ್ನ ಹುಡುಕಾಟ

1) ಪುರಂದರದಾಸರ ಕೀರ್ತನೆಯನ್ನು ಸಂಗ್ರಹಿಸಿ ಹಾಡಿರಿ.
2) ದಾಸರ ಚಿತ್ರಗಳನ್ನು ಸಂಗ್ರಹಿಸಿ ಅಂಟಿಸು.







## ವ್ಯಾಕರಣ

### • ಸಮಾಸ

ಎರಡು ಅಥವಾ ಹೆಚ್ಚು ಪದಗಳು ಕೂಡಿಕೊಂಡು ಒಂದು ಅರ್ಥವನ್ನು ತಿಳಿಸುವ ಪದವು 'ಸಮಾಸ' ಎನಿಸುವುದು. ಸಂಧಿ ಪದದಂತೆ ಸಮಾಸದಲ್ಲಿಯೂ ಪೂರ್ವಪದ, ಉತ್ತರಪದಗಳಿದ್ದು ಅವೆರಡೂ ಸೇರುವುದರಿಂದ ಸಮಾಸಪದವಾಗುವುದು.

ಎರಡು ಅಥವಾ ಎರಡಕ್ಕಿಂತ ಹೆಚ್ಚು ಪದಗಳು ಅರ್ಥ ಕೆಡದಂತೆ ಮಧ್ಯದೊಳಗಿನ ವಿಭಕ್ತಿ ಪ್ರತ್ಯಯ ಲೋಪವಾಗಿ ಒಂದೇ ಪದವಾಗುವುದಕ್ಕೆ ಸಮಾಸ ಎನ್ನುವರು.

ಉದಾ : ಬಿಳಿದು + ತಾವರೆ = ಬೆಳ್ದಾವರೆ

ಹೊಸದು + ಕನ್ನಡ = ಹೊಸಗನ್ನಡ

ಸಮಾಸ ಪದವನ್ನು ವಿಭಜಿಸುವ ಕಾರ್ಯಕ್ಕೆ ಸಮಾಸ ವಿಗ್ರಹ ಎನ್ನುವರು. ಈ ವಿಭಜನೆಯ ಕಾಲಕ್ಕೆ ಪೂರ್ವಪದ ಮತ್ತು ಉತ್ತರಪದಗಳ ಮಧ್ಯ ಅರ್ಥಕ್ಕೆ ಅನುಸಾರವಾಗಿ ವಿಭಕ್ತಿ ಪ್ರತ್ಯಯ ಅಥವಾ ಬೇರೆ ಪ್ರತ್ಯಯ ಇಲ್ಲವೇ ಶಬ್ದಗಳು ಸೇರಿಸುವುದರಿಂದ ಸಮಾಸ ಪದದ ಅರ್ಥವು ಸ್ಪಷ್ಟವಾಗುತ್ತದೆ.

ಉದಾ : ಅರಸನ + ಮನೆ = ಅರಮನೆ.

**ಸಮಾಸದ ಪ್ರಕಾರಗಳು**

1) ತತ್ಪುರುಷ ಸಮಾಸ
2) ಕರ್ಮಧಾರೆಯ ಸಮಾಸ
3) ದ್ವಂದ್ವ ಸಮಾಸ
4) ದ್ವಿಗು ಸಮಾಸ
5) ಅಂಶಿ ಸಮಾಸ
6) ಕ್ರಿಯಾ ಸಮಾಸ
7) ಗಮಕ ಸಮಾಸ
8) ಬಹುವ್ರೀಹಿ ಸಮಾಸ

**1) ತತ್ಪುರುಷ ಸಮಾಸ :** ಎರಡು ನಾಮಪದಗಳು ಸಮಸ್ತಪದವಾಗುವಾಗ ಉತ್ತರ ಪದದಲ್ಲಿರುವ ಅರ್ಥವೇ ಪ್ರಧಾನವಾಗಿರುವ ಸಮಾಸಕ್ಕೆ ತತ್ಪುರುಷ ಸಮಾಸ ಎನ್ನುವರು. ಈ ಸಮಾಸದಲ್ಲಿ ಪೂರ್ವಪದದಲ್ಲಿ ಇರುವ ವಿಭಕ್ತಿ ಪ್ರತ್ಯಯ ಲೋಪವಾಗುತ್ತದೆ.

ಉದಾ: ಅರಸನ + ಮನೆ = ಅರಮನೆ

ದೇವರ + ಆಲಯ = ದೇವಾಲಯ

ತಲೆಯಲ್ಲಿ + ನೋವು = ತಲೆನೋವು

ರಾಜನ + ಪುತ್ರಿ = ರಾಜಪುತ್ರಿ

ರಣದಲ್ಲಿ + ಧೀರ = ರಣಧೀರ

# 11. ಲೋಕಕವಿರತ್ನ ಹಲ್ಧಾರ್ ನಾಗ್

ಲೇಖಕರ ಪರಿಚಯ :- ಎ. ಆರ್. ಮಣಿಕಾಂತ್

ಇವರು ಕವಿ, ಲೇಖಕ, ಪತ್ರಕರ್ತರಾಗಿ ಕನ್ನಡ ಸಾಹಿತ್ಯ ಹಾಗೂ ಪತ್ರಿಕಾ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ್ದಾರೆ. ನಮ್ಮೊಳಗಿನ ದೇವರು, ಅಂತರಂಗದ ಮಾತುಗಳು, ಜೀವನದ ಜರ್ನಲ್, ಮಾತಿನ ಮಂಟಪ, ನವಿಲುಗರಿ ಇವು ಅವರ ಪ್ರಮುಖ ಕೃತಿಗಳಾಗಿವೆ. ಜೀವನ ಮೌಲ್ಯಗಳು, ಮಾನವೀಯತೆ, ಯುವ ಜನತೆಗೆ ಪ್ರೇರಣೆ ಇವು ಅವರ ಲೇಖನದಲ್ಲಿನ ಅಂತರ್ಭೂತ ಘಟಕಗಳು. ಪ್ರಸ್ತುತ ಹಲ್ಧಾರ್ ನಾಗ್ ಇವರ ಕುರಿತ ಲೇಖನವನ್ನು 'ನವಿಲುಗರಿ' ಈ ಕೃತಿಯಿಂದ ಆಯ್ದುಕೊಳ್ಳಲಾಗಿದೆ.

ಬಡತನದಿಂದಾಗಿ ವಿದ್ಯೆ ಕಲಿಯಲಾಗದಿದ್ದರೂ ಕಲಿಯಲೇಬೇಕೆಂಬ ಛಲ ಹಾಗೂ ಸ್ವಪ್ರಯತ್ನದಿಂದ ಒಬ್ಬ ಸಾಮಾನ್ಯ ವ್ಯಕ್ತಿ ಲೋಕಕವಿರತ್ನನಾಗಿ ಜನ ಮನ್ನಣೆಯನ್ನು ಪಡೆದ ಹಲ್ಧಾರ್‌ನಾಗ್ ಅವರ ಜೀವನ ಪ್ರವಾಸದ ಕಥೆ ಇಲ್ಲಿದೆ..



ಒಡಿಶಾ ರಾಜ್ಯದ ಪುರಾತನ ನಗರವೆಂದೇ ಹೆಸರಾದ ಸಂಬಲ್ಪುರಿ ಜಿಲ್ಲೆಗೆ ಸೇರಿದವರಾದ ಹಲ್ಧಾರ್ ನಾಗ್ ಇವರು ಬುಡಕಟ್ಟು ಜನಾಂಗಕ್ಕೆ ಸೇರಿದವರು. ಬಡತನವನ್ನೇ ಉಸಿರಾಗಿಸಿಕೊಂಡು ಬೆಳೆದ ಇವರು ಸಾಧನೆಯ ಶಿಖರವೇರಿದ್ದು ಒಂದು ರೋಚಕವಾದ ಕಥೆ.

ದಾಖಲೆಗಳ ಪ್ರಕಾರ ಹಲ್ಧಾರ್ ನಾಗ್‌ರವರು ಹುಟ್ಟಿದ್ದು 1950ರ ಮಾರ್ಚ್ 31 ರಂದು. ಎಪ್ಪತ್ತೈದು ವರ್ಷದವರಾದ ಇವರು ಓದಿದ್ದು ಬರೀ ಮೂರನೆಯ ತರಗತಿ. ಮೂರು ಹೊತ್ತಿನ ಅನ್ನ ಸಂಪಾದನೆಯೇ ಬದುಕಿನ ಗುರಿಯಾಗಿರುವ ಹಲ್ಧಾರ್ ನಾಗ್‌ರವರ ಬಡ ಕುಟುಂಬವು ಅವರಿವರ ಮನೆಯಲ್ಲಿ, ಜಮೀನುಗಳಲ್ಲಿ ಕೂಲಿ ಮಾಡುತ್ತಾ ಜೀತದಾಳಾಗಿ ದುಡಿಯುವುದು ಅಭ್ಯಾಸವಾಗಿತ್ತು. ಮಕ್ಕಳಿಗೆ ಒಂದಷ್ಟು ದಿನ ಶಾಲೆಗೆ ಕಳುಹಿಸಿ ದೊಡ್ಡವರಾಗುತ್ತಿದ್ದಂತೆಯೇ ಹುಡುಗರನ್ನು ಕೂಲಿಗೆ ಕಳುಹಿಸುವುದು, ಹುಡುಗಿಯರಿಗೆ ಮದುವೆ ಮಾಡುವುದು ರೂಢಿಯಾಗಿತ್ತು. ಶ್ರೀಮಂತರ ಮಕ್ಕಳು ಮಾತ್ರ ಶಾಲೆ ಕಾಲೇಜಿಗೆ ಹೋಗಲು ಅರ್ಹರು ಎಂದು ಅವರ ಕುಟುಂಬದ ಹಿರಿಯರು ನಂಬಿದ್ದರು. ಹತ್ತು ವರ್ಷದ ಹಲ್ಧಾರರು ಮೂರನೇ ತರಗತಿಯಲ್ಲಿ ಕಲಿಯುವಾಗ ತಂದೆಯನ್ನು ಕಳೆದುಕೊಂಡರು.

ಆ ಹೊತ್ತಿಗೆ ಸೋದರ-ಸೋದರಿಯರ ಮದುವೆಯಾಗಿತ್ತು. ಅಪ್ಪ ಕಣ್ಮರೆಯಾದ ಬಳಿಕ ಮೂರನೇ ತರಗತಿ ಓದುತ್ತಿದ್ದ ಇವರಿಗೆ ಉದರ ನಿರ್ವಹಣೆಗಾಗಿ ಬಹಳ ಪರದಾಡಬೇಕಾಯಿತು.

ಅನಾಥರಾದ ಹಲ್ದಾರ್ ನಾಗ್‌ರವರಿಗೆ ಅನ್ನ ಸಂಪಾದನೆಯೇ ಬದುಕಿನ ಮುಖ್ಯ ಗುರಿಯಾಯಿತು. ಒಂದು ಹೊಟೇಲಿನಲ್ಲಿ ಟೇಬಲ್ ಒರೆಸುವ, ಲೋಟ ತೊಳೆಯುವ ಕೆಲಸಕ್ಕೆ ಸೇರಿಕೊಂಡರು. ಕೆಲ ದಿನಗಳ ನಂತರ ಹಿರಿಯರೊಬ್ಬರ ಸಹಕಾರದಿಂದ ಒಂದು ವಿದ್ಯಾರ್ಥಿನಿಲಯಕ್ಕೆ ಅಡುಗೆ ಸಹಾಯಕರಾಗಿ ಸೇರಿದರು. ಮೂರು ಹೊತ್ತು ಊಟ, ಉಳಿಯಲು ಜಾಗ, ತಿಂಗಳ ಕೊನೆಗೊಂದು ಸಿಕ್ಕ ಸಂಬಳ ಬದುಕಿಗೆ ಸಾಕೆನಿಸಿತು ಅವರಿಗೆ. ಹದಿನಾರು ವರ್ಷಗಳು ಹೀಗೆಯೇ ಕಳೆದು ಹೋದವು. ಸ್ವಉದ್ಯೋಗ ಮಾಡುವ ಕನಸು ಮನಸ್ಸಿನಲ್ಲಿ ಬೇರೂರತೊಡಗಿದುದರಿಂದ ಸ್ಥಳೀಯ ಬ್ಯಾಂಕಿನಲ್ಲಿ ಸಾವಿರ ರೂಪಾಯಿಗಳ ಸಾಲ ಪಡೆದು ಸ್ಟೇಷನರಿ ಅಂಗಡಿಯನ್ನು ತೆಗೆದರು. ಶಾಲಾ ವಿದ್ಯಾರ್ಥಿಗಳೇ ಪ್ರಮುಖ ಗ್ರಾಹಕರಾದರು. ಅಂಗಡಿಗೆ ಬಂದ ಹುಡುಗ, ಹುಡುಗಿಯರು ಶಾಲೆಯಲ್ಲಿನ ಪಾಠದ ಬಗ್ಗೆ ಮತ್ತು ಪದ್ಯಗಳ ಬಗ್ಗೆ ಮಾತಾಡುತ್ತಿದ್ದರು. ಇದನ್ನು ಕೇಳಿಸಿಕೊಂಡಾಗ ನಾನೂ ಓದಬೇಕು, ಬರೆಯಬೇಕು ಎಂದು ಅವರಿಗೆ ಅನಿಸತೊಡಗಿತು. ಈ ಬಯಕೆ ದಿನೇ ದಿನೇ ಹೆಚ್ಚುತ್ತಲೇ ಹೋಯಿತು. ಆಗ ಓಡಿಯಾ ಭಾಷೆಯ ಸಾಹಿತ್ಯಕೂಟಗಳನ್ನು ಏರ್ಪಡಿಸುತ್ತಿದ್ದ 'ಅಭಿಮನ್ಯು ಸಾಹಿತ್ಯ ಸಂಸತ್' ಎಂಬ ಸಂಸ್ಥೆಯೊಂದರ ಒಡನಾಟವು ಲಭಿಸಿತು. ಅಲ್ಲಿ ಕಥೆ, ಕವಿತೆ, ನಾಟಕಗಳ ಬಗ್ಗೆ ಚರ್ಚೆಗಳಾಗುತ್ತಿದ್ದವು. ಉತ್ಸಾಹವೊಂದು ಜೊತೆಗಿದ್ದರೆ ಕಲಿಯುವುದು ಬಹುಸುಲಭವೆಂಬ ಮಾತು ಸುಳ್ಳಾಗಲಿಲ್ಲ. ಹಲ್ದಾರ್ ನಾಗ್ ಕೆಲವೇ ತಿಂಗಳುಗಳಲ್ಲಿ ಸರಾಗವಾಗಿ ಓದಲು ಬರೆಯಲು ಕಲಿತೇ ಬಿಟ್ಟರು.

ಬುಡಕಟ್ಟು ಜನಾಂಗದವರು ಪುರಾಣ-ಪುಣ್ಯ ಕಥೆಗಳನ್ನು ಸಂಜೆಯ ಹೊತ್ತಿಗೆ ಹಾಡುವುದು ವಾಡಿಕೆ. ಹೊಸದಾಗಿ ಅಕ್ಷರ ಕಲಿತ ಹಲ್ದಾರ್‌ರಿಗೆ ತಮ್ಮ ಬಾಲ್ಯದಲ್ಲಿ ದಿನಾಲೂ ಸಂಜೆ ಅಮ್ಮಂದಿರು ಹಾಡುತ್ತಿದ್ದ ಹಾಡುಗಳು, ಕಥೆಗಳು ನೆನಪಾಗತೊಡಗಿದವು. ಏನಾದರೂ ಬರೆಯಬೇಕು, ಮನಸ್ಸಿನ ಭಾವನೆಗಳನ್ನು ಹೇಳಿಕೊಳ್ಳಬೇಕು ಎಂಬ ಆಸೆ ತೀವ್ರವಾಗತೊಡಗಿತು. ಆದರೆ ಕಥೆ, ಕವಿತೆ ರಚಿಸಬೇಕಾದರೆ ಭಾಷಾಜ್ಞಾನ ಅತ್ಯಗತ್ಯ. ಓಡಿಯಾ ಭಾಷೆಯ ಖ್ಯಾತ ಕವಿಗಳ



ಪದ್ಯಗಳನ್ನು ಓದಿ ತನ್ನ ಕವಿತೆಗಳೊಂದಿಗೆ ಜೋಡಿಸಿ ಬರೆಯತೊಡಗಿದರು. ಒಮ್ಮೆ ಖ್ಯಾತ ಕವಿ ವಿನೋದ್ ನಾಯಕರವರ ಕವನ ಸಂಕಲನ ಓದುವ ಅವಕಾಶ ದೊರಕಿತು. ತನ್ನ ಪದ್ಯಗಳು ಹೀಗೆಯೇ ಇರಬೇಕೆನ್ನಿಸಿ ತಾನು ಅಂಶತಃ ನಕಲು ಮಾಡಿದ ಕವಿತೆಗಳನ್ನು ಹರಿದು ಹಾಕಿದರು. ತಮ್ಮ 'ಮುದಿ ಆಲದ ಮರ' ಎಂಬ ಕೇಸಾಲಿ ಭಾಷೆಯಲ್ಲಿನ ಪದ್ಯ ರಚನೆ ಸ್ಥಳೀಯ ಪತ್ರಿಕೆಯಲ್ಲಿ ಚಂದದ ರೇಖಾಚಿತ್ರದೊಂದಿಗೆ ಪ್ರಕಟವಾಗಿಯೇ ಬಿಟ್ಟಿತು. ಸಾವಿರಾರು ಓದುಗರು ಅದನ್ನು ಮೆಚ್ಚಿಕೊಂಡರು. ಜನ ಮೆಚ್ಚುಗೆಯನ್ನು ಕಂಡ ಸಂಪಾದಕರು ಮತ್ತಷ್ಟು ಪದ್ಯಗಳನ್ನು ಕಳಿಸಿಕೊಡಿ ಎಂದು ಹಲ್ದಾರ್‌ರಿಗೆ ಬಿನ್ನವಿಸಿಕೊಂಡರು. ವಾರಕ್ಕೆ ಒಂದರಂತೆ ನಾಲ್ಕು ಪದ್ಯಗಳು ಪ್ರಕಟವಾಗಿ ಒಂದೇ ತಿಂಗಳಲ್ಲಿ ಓಡಿಶಾ ತುಂಬಾ ಏಕಕಾಲಕ್ಕೆ ಜನಪ್ರಿಯವಾದವು.

ವಿಶಿಷ್ಟಶೈಲಿ-ವಸ್ತುಗಳೊಂದಿಗೆ ಅನಕ್ಷರಸ್ಥರೊಬ್ಬರು ಪದ್ಯ ರಚಿಸಿರುವುದು ಜನರಿಗೆ ಸೋಜಿಗವೆನಿಸಿತು. ಕಾಲಿಗೆ ಚಪ್ಪಲಿ ಧರಿಸದ ಬಿಳಿಯ ಬನಿಯನ್ ತರದ ಮೇಲ್ವಸ್ತ್ರ ಹಾಗೂ ಕಚ್ಚೆಶೈಲಿಯ ಪಂಚೆ ಹಾಕಿದ ಕಡುಗಪ್ಪು ಆಕಾರದ ಹಲ್ದಾರ್ ನಾಗರನ್ನು ಕಾಣಲು ಜನರು ತವಕಿಸತೊಡಗಿದರು. ಬಿಬಿಸಿ ಲಂಡನ್ನಿನಿಂದ ಬಂದ ತಂಡ ಇವರನ್ನು ಸಂದರ್ಶನಗೈದು ಇವರ ಕುರಿತಾಗಿ ಸಾಕ್ಷ್ಯಚಿತ್ರವೊಂದನ್ನು ನಿರ್ಮಿಸಿ ಪ್ರದರ್ಶನಕ್ಕಿಟ್ಟಿತು. ರಾತ್ರೋರಾತ್ರಿ ಜಗತ್ತೇ ನಿಬ್ಬೆರಗಾಗಿ ನೋಡುವಂತಾದರು ಹಲ್ದಾರ್ ನಾಗ್. ಲಕ್ಷ-ಲಕ್ಷಸಂಖ್ಯೆಯಲ್ಲಿ ಅಭಿಮಾನಿಗಳು ಹುಟ್ಟಿಕೊಂಡರು. ಇವರ ಪದ್ಯಗಳು ಹಿಂದಿ, ಬಂಗಾಲಿ, ಇಂಗ್ಲಿಷ್ ಭಾಷೆಗೆ ಅನುವಾದಗೊಂಡವು. ಇವರ ಕವನಸಂಕಲನಗಳು ಸಂಶೋಧನೆಗೆ ಒಳಪಟ್ಟವು. ಸಂಬಲ್ಪುರ್ ವಿಶ್ವವಿದ್ಯಾಲಯ ಇವರಿಗೆ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ. ಓಡಿಶಾದ ಜನ ಇವರನ್ನು 'ಲೋಕಕವಿರತ್ನ'ಎಂದು ಕರೆದು ಸಂಭ್ರಮಿಸಿದ್ದಾರೆ. ಇದಕ್ಕೆ ಮುಕುಟವೆಂಬಂತೆ ಭಾರತದ ಕೇಂದ್ರ ಸರಕಾರವು ಉನ್ನತ 'ಪದ್ಮಶ್ರೀ' ಪ್ರಶಸ್ತಿ ನೀಡಿ ಗೌರವಿಸಿತು. ಎಪ್ಪತ್ತೈದು ವರ್ಷ ವಯಸ್ಸಿನ ಸಡಗರದಲ್ಲಿರುವ ಹಲ್ದಾರ್‌ರು ಪ್ರತಿವಾರವೂ ಸಾಹಿತ್ಯ, ಕವಿಗೋಷ್ಠಿಗಳಲ್ಲಿ ಸಹಭಾಗಿಯಾಗುತ್ತಾ ಎಪ್ಪತ್ತಕ್ಕೂ ಹೆಚ್ಚು ಪದ್ಯಗಳನ್ನು ತಡವರಿಸದೆ ಮುಗ್ಧತೆಯಿಂದ ಹೇಳುತ್ತಿದ್ದರೆ ಜನರು ಬಾಯಿಗೆ ಬೆರಳಿಡುತ್ತಾರೆ. ಹೀಗೆ ಬಡತನದಲ್ಲಿ ಬೆಂದು ಅರಳಿದ ಪ್ರತಿಭೆಗೆ ಸಾಕ್ಷಿಯೇ ಹಲ್ದಾರ್ ನಾಗ್.

❖ **ಶಬ್ದಾರ್ಥ:**

| | | |
|---|---|---|
| ಪುರಾತನ – ಹಿಂದಿನ, ಪ್ರಾಚೀನ, ಹಳೆಯ ಕಾಲದ | | ರೋಚಕ – ಮನ ಸೆಳೆಯುವ |
| ಒಡನಾಟ – ಸಹವಾಸ; | ವಾಡಿಕೆ – ರೂಢಿ, ಪದ್ಧತಿ; | ಸೋಜಿಗ – ಆಶ್ಚರ್ಯ, |
| ತವಕಿಸು – ಆತುರಪಡು, ಹಾತೊರೆ | | ನಿಬ್ಬೆರಗಾಗು – ಮೂಕವಿಸ್ಮಯನಾಗು |

❖ **ನನಗೆ ತಿಳಿದಂತೆ**

**ಕೆಳಗಿನ ಯೋಗ್ಯ ಪರ್ಯಾಯಕ್ಕೆ ಸರಿ ( ✓ ) ಚಿಹ್ನೆ ಹಾಕಿ ಗುರುತಿಸಿರಿ.**

**1) ಹಲ್ದಾರ್ ನಾಗ್ ಅವರ ಕಥೆ ರೋಚಕವಾಗಿದೆ ಏಕೆ?**

ಅ) ಹಲ್ದಾರ್ ನಾಗ್‌ರವರು ಬಡವರಾಗಿದ್ದರು. ☐

ಬ) ಹಲ್ದಾರ್ ನಾಗ್‌ರವರು ಚಿಕ್ಕಂದಿನಲ್ಲಿಯೇ ಕವಿಗಳಾಗಿದ್ದರು. ☐

ಕ) ಹಲ್ದಾರ್ ನಾಗ್‌ರವರು ಬಡವರಾಗಿದ್ದರೂ ಸಾಹಿತ್ಯ ಸಾಧನೆಯ ಶಿಖರ ಏರಿದರು. ☐

ಡ) ಹಲ್ದಾರ್ ನಾಗ್‌ರವರು ಬುಡಕಟ್ಟು ಜನಾಂಗದವರಾಗಿದ್ದರು. ☐

**2) ಹಲ್ದಾರ್ ನಾಗ್‌ರವರ ಕುರಿತು ಯಾವ ಹೇಳಿಕೆ ಸರಿಯಲ್ಲ ಅದರ ಮುಂದೆ ಸರಿ ಗುರುತು ಹಾಕಿರಿ.**

ಅ) ಹಲ್ದಾರ್‌ರು ಹೋಟೆಲ್ ಕೆಲಸಕ್ಕೆ ಸೇರಿದರು. ☐

ಬ) ಅವರು ವಿದ್ಯಾರ್ಥಿ ನಿಲಯದಲ್ಲಿ ಅಡುಗೆ ಸಹಾಯಕರಾಗಿ ಕೆಲಸಕ್ಕೆ ಸೇರಿಕೊಂಡರು. ☐

ಕ) ಅವರು ಸ್ಟೇಷನರಿ ಅಂಗಡಿ ತೆಗೆದರು. ☐

ಡ) ಹಲ್ಧಾರರು ಒಕ್ಕಲುತನ ಮಾಡಲು ಆರಂಭಿಸಿದರು. ☐

**3) ಹಲ್ಧಾರ್ ನಾಗ್‌ರವರಿಗೆ ಲೋಕಕವಿರತ್ನ ಎಂದು ಕರೆಯಲು ಕಾರಣವೇನು?**

ಅ) ಹಲ್ಧಾರ್ ನಾಗ್‌ರವರ ಕವಿತೆಗಳು ಓಡಿಶಾ ತುಂಬಾ ಜನಪ್ರಿಯವಾದವು. ☐

ಬ) ಹಲ್ಧಾರ್ ನಾಗ್ ಅವರು ರತ್ನದ ವ್ಯಾಪಾರಿಗಳಾಗಿದ್ದರು. ☐

ಕ) ಹಲ್ಧಾರ್ ನಾಗ್‌ರವರು ಲೋಕದ ತುಂಬಾ ಪ್ರವಾಸ ಮಾಡಿದರು. ☐

ಡ) ಹಲ್ಧಾರ್ ನಾಗ್ ಅವರು ಕವಿತೆಗಳನ್ನು ಸಂಗ್ರಹ ಮಾಡಿದರು. ☐

**ಸಾಲುಗಳ ಮೇಲೆ ಚರ್ಚೆ**

'ಉತ್ಸಾಹವೊಂದು ಜೊತೆಗಿದ್ದರೆ ಕಲಿಯುವುದು ಬಹುಸುಲಭವೆಂಬ ಮಾತು ಸುಳ್ಳಾಗಲಿಲ್ಲ'.

**ಶೋಧಿಸಿ ಬರೆ:** **ಗ್ರಂಥಾಲಯದ ಪುಸ್ತಕಗಳು, ಅಂತರ್ಜಾಲ, ಶಿಕ್ಷಕ, ಪಾಲಕರ ಸಹಾಯದಿಂದ ಕನ್ನಡದ ಜ್ಞಾನಪೀಠ ಪ್ರಶಸ್ತಿ ವಿಜೇತ ಸಾಹಿತಿ ಹಾಗೂ ಅವರ ಸಾಹಿತ್ಯ ಕೃತಿಗಳನ್ನು ಸರಿಯಾಗಿ ಹೊಂದಿಸಿರಿ.**

| 'ಅ' | 'ಬ' |
|---|---|
| 1) ಕುವೆಂಪು | ಅ) ಚಿಕ್ಕವೀರ ರಾಜೇಂದ್ರ |
| 2) ದ. ರಾ. ಬೇಂದ್ರೆ | ಆ) ಭಾರತ ಸಿಂಧು ರಶ್ಮಿ |
| 3) ಮಾಸ್ತಿ ವೆಂಕಟೇಶ್ ಅಯ್ಯಂಗಾರ್ | ಇ) ಸಮಗ್ರ ಸಾಹಿತ್ಯ |
| 4) ವಿ. ಕೃ. ಗೋಕಾಕ್ | ಈ) ಶ್ರೀ ರಾಮಾಯಣದರ್ಶನಂ |
| 5) ಯು. ಆರ್. ಅನಂತಮೂರ್ತಿ | ಉ) ಸಮಗ್ರ ಸಾಹಿತ್ಯ |
| 6) ಗಿರೀಶ ಕಾರ್ನಾಡ್ | ಊ) ಮೂಕಜ್ಜಿಯ ಕನಸುಗಳು |
| 7) ಚಂದ್ರಶೇಖರ ಕಂಬಾರ | ಎ) ನಾಕುತಂತಿ |
| 8) ಕೆ. ಶಿವರಾಮ ಕಾರಂತ | ಏ) ಸಮಗ್ರ ಸಾಹಿತ್ಯ |

## ❖ ಭಾಷೆ ತಿಳಿಯೋಣ ಬಾ

**ಅ) ಕೆಳಗಿನ ಶಬ್ದಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಉಪಯೋಗಿಸಿ ಬರೆ.**

ಅ) ಸಾಧನೆ – ................................

ಆ) ಸಹಕಾರ – ................................

ಇ) ಚರ್ಚೆ – ................................

ಈ) ಮುಕುಟ – ................................

**ಆ) ಥಟ್ಟನೆ ಹೇಳು**

**ಕೆಳಗಿನ ಬಿರುದುಗಳನ್ನು ಯಾವ ಕವಿಗಳಿಗೆ ನೀಡಲಾಗಿದೆ ಎಂಬುದನ್ನು ಅದರ ಮುಂದೆ ಬರೆಯಿರಿ.**

ಅ) ಕನ್ನಡದ ಕಣ್ವ...........................

ಆ) ಆದಿಕವಿ ................................

ಇ) ಕನ್ನಡದ ಆಸ್ತಿ ..........................

ಈ) ದಾನ ಚಿಂತಾಮಣಿ ...................

**ಇ) ವಿಶೇಷಣ: ವರ್ಣಿಸಿ ಹೇಳುವ ಪದಗಳಿಗೆ 'ವಿಶೇಷಣ' ಎನ್ನುತ್ತಾರೆ. ಕೆಳಗಿನ ವಾಕ್ಯಗಳಲ್ಲಿ ವಿಶೇಷಣ ಪದ ಗುರುತಿಸಿ ಬರೆ.**

1) ಭೀಮನ ಕೈಗಳು ಬಲಿಷ್ಠವಾಗಿವೆ. --------------------

2) ಕಲಾಂ ಅವರು ಶ್ರೇಷ್ಠ ವಿಜ್ಞಾನಿ. --------------------

3) ರಾಘುವಿನ ಹತ್ತಿರ ದೊಡ್ಡ ವಿಮಾನವಿದೆ. --------------------

4) ರಿತೇಶನ ಬಳಿ ಕರಿಯ ಮೊಲವಿದೆ. --------------------

**ಈ) ಶಬ್ದಕೋಶದ ಸಹಾಯದಿಂದ ಕೆಳಗಿನ ಪದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.**

ಕಣ್ಮರೆ ............................

ನಿರ್ವಹಣೆ ........................

ಬುಡಕಟ್ಟು ........................

ಮುಗ್ಧತೆ ...........................

**ಉ) ಕೆಳಗಿನ ಪದಗಳ ವಿರುದ್ಧಾರ್ಥಕ ಶಬ್ದಗಳನ್ನು ಬರೆ.**

1) ನಿರಕ್ಷರ x 2) ಹೊಗಳು x

3) ಅರ್ಹ x 4) ಸರಾಗ x

**ಚೌಕಟ್ಟಿನಲ್ಲಿ ನಮ್ಮ ದೇಶದ ವಿವಿಧ ಭಾಷೆಗಳು ಅಡಗಿವೆ ಅವುಗಳನ್ನು ಗುರುತಿಸಿ ಬರೆ.**

| | | | | | | |
|---|---|---|---|---|---|---|
| ಸು | ಬಂ | ಗಾ | ಲಿ | ಕ | ನ್ನ | ಡ |
| ಮ | ರಾ | ಠಿ | ಜ್ಞ | ಉ | ರ್ದು | ಧಿ |
| ಗು | ಜ | ರಾ | ತಿ | ಓ | ಳು | ಸಿಂ |
| ಪಂ | ಸ್ಥಾ | ಯ | ಗು | ಮಿ | ರಿ | ಕ್ಷ |
| ಜಾ | ನಿ | ಲು | ತ | ಹಿಂ | ದಿ | ಯಾ |
| ಬಿ | ತೆ | ಶ | ಮ | ಲ | ಯಾ | ಳಂ |
| ಸಂ | ಸ್ಕೃ | ತ | ಕೊಂ | ಕ | ಣಿ | ಷ |

❖ **ನಮ್ಮ ದೇಶದಲ್ಲಿಯ ರಾಜ್ಯಗಳ ಹೆಸರುಗಳು ಅಡಗಿರುವಂತೆ ಪದಬಂಧ ರಚಿಸು.**

# ಆಶುಕವಿ ಸಿದ್ದಪ್ಪ ಬಿದರಿ



ಓದು ಬರಹ ಬಾರದಿದ್ದರೂ, ನಿಂತ ನಿಲುವಿನಲ್ಲೇ ಕವಿತೆ ಹೇಳಬಲ್ಲ, ನೂರಾರು ಕವಿತೆಗಳ ಸರದಾರ, ಜನಪದೀಯ ಆಶುಕವಿ ಸಿದ್ದಪ್ಪ ಬಿದರಿ. ನಿರಕ್ಷರಿಯಾದರೂ ತಮ್ಮ ಅರಿವಿಗೆ ಬಂದ ಸಂಗತಿಗಳನ್ನೇ ಕವಿತೆಯನ್ನಾಗಿಸುವ ಸಿದ್ದಪ್ಪ ಬಿದರಿ ಉತ್ತರ ಕರ್ನಾಟಕದ ಚಿರಪರಿಚಿತ ಹೆಸರು. ಸಾವಿರದ ಮುನ್ನೂರಕ್ಕೂ ಹೆಚ್ಚು ಕವಿತೆಗಳನ್ನು ರಚಿಸಿರುವ ಸಿದ್ದಪ್ಪ ಅವರ ಸಮಗ್ರ ಕವನ ಸಂಕಲನದ ಎರಡು ಸಂಪುಟಗಳು ಸಾಹಿತ್ಯ ವಲಯದಲ್ಲಿ ಅಪಾರ ಮನ್ನಣೆ ಪಡೆದಿವೆ. ಯು.ಆರ್. ಅನಂತ ಮೂರ್ತಿ, ಜಿ.ಎಸ್. ಶಿವರುದ್ರಪ್ಪ, ಚೆನ್ನವೀರ ಕಣವಿ, ಚಂದ್ರಶೇಖರ ಕಂಬಾರ ಮುಂತಾದ ಸಾಹಿತ್ಯ ದಿಗ್ಗಜರ ಮೆಚ್ಚುಗೆಗೆ ಪಾತ್ರರಾದವರು ಸಿದ್ದಪ್ಪ ಬಿದರಿ. ಅವರಿಗೆ ಜೀವನಾನುಭವವೇ ಸಾಹಿತ್ಯದ ತಿರುಳು. ಅರಳು ಹುರಿದಂತೆ ಕವಿತೆಗಳನ್ನು ಕಟ್ಟಿ ಹಾಡುವ ಸಿದ್ದಪ್ಪ ಅವರು ಅದ್ಭುತ ಎನಿಸುವ ಜ್ಞಾಪಕ ಶಕ್ತಿ ಹೊಂದಿದ್ದಾರೆ. ತಮ್ಮ ಎಲ್ಲ ಕವಿತೆಗಳನ್ನು ಹೇಳಬಲ್ಲ ಅಪರೂಪದ ಪ್ರತಿಭೆ. ಸಾಹಿತ್ಯದ ಮೇರು ಪ್ರತಿಭೆಗಳಿಗೆ ನೀಡುವ ಅಂಬಿಕಾತನಯದತ್ತ ರಾಷ್ಟ್ರೀಯ ಪ್ರಶಸ್ತಿ 2018ರ ಸಾಲಿನಲ್ಲಿ ಸಿದ್ದಪ್ಪ ಅವರಿಗೆ ದೊರಕಿದೆ.

ಬಾಗಲಕೋಟೆ ಜಿಲ್ಲೆಯ ಬೀಳಗಿಯಲ್ಲಿ 1956ರಲ್ಲಿ ಜನಿಸಿದ ಸಿದ್ದಪ್ಪ ಒಂದನೆಯ ತರಗತಿಗೇ ಶಾಲೆ ಬಿಟ್ಟವರು. ತಮ್ಮ ಜನ್ಮಜಾತ ಪ್ರತಿಭೆಯಿಂದಲೇ ಕವನ ವಾಚನವನ್ನು ಆರಂಭಿಸಿದರು. ಗೆಳೆಯರು ಅವುಗಳನ್ನು ಬರೆದುಕೊಂಡರು. ಕೆಲವು ದಾನಿಗಳು ಅವುಗಳನ್ನು ಪ್ರಕಟಿಸಿದರು. 62ರ ವಯಸ್ಸಿನ ಬಿದರಿ ಅವರ 25 ಕವನ ಸಂಗ್ರಹಗಳು ಬಿಡುಗಡೆಗೊಂಡಿವೆ. 'ನುಡಿ ಮುತ್ತಿನ ಮಾಲೆ' ಸಮಗ್ರ ಸಂಪುಟಗಳು ಎರಡು ಬಾರಿ ಮುದ್ರಣ ಕಂಡಿವೆ. ನ್ಯೂಸ್18 ಈ ಟಿ.ವ್ಹಿ ಚ್ಯಾನಲ್ ಅವರ ಕಡೆಯಿಂದ 2025 ರ 'ವರ್ಷದ ಕನ್ನಡಿಗ' ಎಂಬ ಪ್ರಶಸ್ತಿಯನ್ನು ಕೊಟ್ಟು ಸಿದ್ದಪ್ಪ ಬಿದರಿ ಅವರನ್ನು ಗೌರವಿಸಲಾಯಿತು.

**ಕತ್ತಲೆಯನ್ನು ಓಡಿಸಲು ದೀಪ ಬೇಕು, ಅಜ್ಞಾನವನ್ನು ಓಡಿಸಲು ಅಕ್ಷರ ಬೇಕು**

# 12. ನಭದ ನಾರಿ ಸುನೀತಾ

5 ಜೂನ್ 2024ಕ್ಕೆ 8 ದಿವಸಗಳಿಗಾಗಿ ಬಾಹ್ಯಾಕಾಶಕ್ಕೆ ಹಾರಿ, 286 ದಿವಸಗಳವರೆಗೆ ಇದ್ದು, ಸುರಕ್ಷಿತವಾಗಿ ಮರಳಿ ಭೂಮಿಗೆ ಬಂದ ಸುನೀತಾ ವಿಲಿಯಮ್ಸಳ ರೋಚಕ ಕಥೆ ಇದು.

'ನಾಸಾ' (NASA) ದ ಸ್ಟಾರಲೈನರ್ ಸ್ಪೇಸಕ್ರಾಫ್ಟ್‌ನ ಯೋಗ್ಯತೆಯನ್ನು ಪರೀಕ್ಷಿಸುವ ಬಾಹ್ಯಾಕಾಶ ಕಾರ್ಯಾಚರಣೆಗಾಗಿ ಸುನೀತಾ ಇವರು ನೇಮಕವಾದರು. ಈ ಯಾನವು ಗಗನಯಾತ್ರಿಗಳಿಗೆ ಬಾಹ್ಯಾಕಾಶ ನಿಲ್ದಾಣಕ್ಕೆ ಸುರಕ್ಷಿತವಾಗಿ ಕೊಂಡೊಯ್ಯುವ ಮತ್ತು ಕರೆತರುವ ಕೆಲಸ ಸರಿಯಾಗಿ ಮಾಡುವುದೋ ಇಲ್ಲವೋ ಎಂಬುದನ್ನು ಪರೀಕ್ಷಿಸುವುದಾಗಿತ್ತು.




ಭೂಮಿಗೆ ಬಂತು ಮೈ ನಡುಗುವ ಸುದ್ದಿ... ಸುನೀತಾ ಬಾಹ್ಯಾಕಾಶ ನಿಲ್ದಾಣ ಸಮೀಪಿಸುತ್ತಿದ್ದಂತೆಯೇ ಸ್ಟಾರಲೈನರ್ ಯಾನದಲ್ಲಿ ದೊಡ್ಡ ಸಮಸ್ಯೆಯೊಂದು ಕಂಡು ಬಂತು. ಬಾಹ್ಯಾಕಾಶ ನೌಕೆ ಮತ್ತು ಬಾಹ್ಯಾಕಾಶ ನಿಲ್ದಾಣವು ಹಲವಾರು ಯಂತ್ರಗಳು ಮತ್ತು ಸಂಗಣಕಗಳಿಂದ ಕೂಡಿರುತ್ತದೆ. ಗಗನಯಾತ್ರಿಗಳ ಸುರಕ್ಷತೆ, ಆಮ್ಲಜನಕ ಪೂರೈಕೆ, ತಾಪಮಾನ ನಿಯಂತ್ರಣ ಮತ್ತು ಸಂವಹನಗಳನ್ನು ನಿರ್ವಹಿಸುವುದು ಅವುಗಳ ಕೆಲಸವಾಗಿರುತ್ತದೆ. ಈ ಯಾನದಿಂದ ಹೀಲಿಯಂ ಹೆಸರಿನ ಗ್ಯಾಸ್ ಸೋರಿಕೆಯಾಗುತ್ತಿರುವುದು ಗಮನಕ್ಕೆ ಬಂದಿತು. ಕೆಲವೊಂದು ಥ್ರಸ್ಟರ್ (ಎಂಜಿನ್)ಗಳೂ ಸಹ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂಬುದು ಗೊತ್ತಾಯಿತು. ಎಂಜಿನ್ನಿನ ಉಷ್ಣತೆ ಸಾಮಾನ್ಯಕ್ಕಿಂತ ಅತೀ ಹೆಚ್ಚಾಗಿತ್ತು. ಈ ಎಲ್ಲ ಕಾರಣಗಳಿಂದ ಸುನೀತಾ ಮತ್ತು ಅವರ ತಂಡದವರ ಜೀವಕ್ಕೆ ಅಪಾಯ ಕಾದಿತ್ತು. ಅವರೆಲ್ಲರೂ ಭೂಮಿಗೆ ಹಠಾತ್ ಮರಳುವುದು ತುಂಬಾ ಅಪಾಯಕರವಾಗಿತ್ತು. ಒಟ್ಟಿನಲ್ಲಿ ಅವರನ್ನು ಯಾವುದೇ ರೀತಿಯ ಸಂಕಟದಲ್ಲಿ ಸಿಲುಕಿಸುವ ವಿಚಾರ ನಾಸಾದವರದಾಗಿರಲಿಲ್ಲ. ಕಾರಣ ಈ ಎಂಜಿನ್ನು ದಿಕ್ಕು ಬದಲಿಸಲು, ಪೃಥ್ವಿಗೆ ಹಿಂದಿರುಗುವಾಗ ಬ್ರೇಕ್ ಹಿಡಿಯಲು ಮತ್ತು ಸುರಕ್ಷಿತವಾಗಿ ಭೂಮಿಗೆ ಇಳಿಸಲು ಉಪಯೋಗವಾಗುತ್ತಿತ್ತು. ಗಗನಯಾತ್ರಿಗಳ ಸುರಕ್ಷೆಗೆ ಮೊದಲು ಆದ್ಯತೆ ನೀಡಿ, ಸ್ಟಾರಲೈನರ್ ಯಾನದ

ತಾಂತ್ರಿಕ ದೋಷ ನಿವಾರಣೆ ಆಗುವವರೆಗೆ, ಸುನೀತಾ ವಿಲಿಯಮ್ಸ್ ಮತ್ತು ತಂಡವನ್ನು ಇನ್ನೂ ಸ್ವಲ್ಪ ಸಮಯ ಬಾಹ್ಯಾಕಾಶದಲ್ಲಿಯೇ ಇರಿಸಬೇಕೆಂದು ನಾಸಾ ವಿಜ್ಞಾನಿಗಳು ನಿರ್ಧರಿಸಿದರು.

ಈ ಸಂದರ್ಭದಲ್ಲಿ ಸುನೀತಾ ಸ್ವಲ್ಪವೂ ಹೆದರಲಿಲ್ಲ, ಬದಲಾಗಿ ಆತ್ಮವಿಶ್ವಾಸ, ಧೈರ್ಯ ಮತ್ತು ಜಾಣತನದಿಂದ ಬಾಹ್ಯಾಕಾಶದಲ್ಲಿ 150 ಕ್ಕಿಂತ ಹೆಚ್ಚು ಪ್ರಯೋಗಗಳನ್ನು ಮಾಡಿದರು. ಅಷ್ಟೇ ಅಲ್ಲ ಬಾಹ್ಯಾಕಾಶದಲ್ಲಿ ವನಸ್ಪತಿಗಳ ಬೆಳವಣಿಗೆಗಳ ಬಗ್ಗೆ ಸಂಶೋಧನೆ ಮಾಡಿದರು. ಆರೋಗ್ಯವಂತಳಾಗಿರಲು ತಪ್ಪದೇ ವ್ಯಾಯಾಮ ಮಾಡುವುದರ ಜೊತೆಗೆ ಭೂಮಿಯ ಹವಾಮಾನ ಮತ್ತು ಪರಿಸರದ ಬಗ್ಗೆ ಅಧ್ಯಯನ ಹಾಗೂ ಬಾಹ್ಯಾಕಾಶ ನಿಲ್ದಾಣದ ದುರುಸ್ತಿಗೆ ಸಹಾಯ ಮಾಡಿದರು. ಅವರು ಬಾಹ್ಯಾಕಾಶದಲ್ಲಿ ಕೇವಲ ಎಂಟರಿಂದ ಹತ್ತು ದಿವಸಗಳಿಗಾಗಿ ಹೋಗಿದ್ದರು. ಆದರೆ ಸುಮಾರು ಒಂಭತ್ತು ತಿಂಗಳುಗಳವರೆಗೆ ಅಲ್ಲಿಯೇ ನಿಲ್ಲುವ ಭೀಕರ ಪ್ರಸಂಗ ಒದಗಿ ಬಂತು. ಕೊನೆಗೆ ನಾಸಾ ಯಾಂತ್ರಿಕ ಸಮಸ್ಯೆ ಮತ್ತು ಗಗನಯಾತ್ರಿಗಳ ಸುರಕ್ಷೆಯನ್ನು ಗಮನದಲ್ಲಿರಿಸಿ ಸ್ಟಾರಲೈನರ್ ಯಾನವನ್ನು ಖಾಲಿಯಾಗಿಯೇ ಭೂಮಿಗೆ ಕರೆಸಿಕೊಂಡಿತು. ತದನಂತರ ಸುನೀತಾ ಅವರು ಸ್ಪೇಸಎಕ್ಸ್ ಕ್ರೂ9 ಡ್ರ್ಯಾಗನ್ ಫ್ರೀಡಮ್ ಕ್ಯಾಪ್ಸೂಲ್ ಹೆಸರಿನ ಬೇರೆ ಯಾನದಲ್ಲಿ 18 ಮಾರ್ಚ್ 2025ಕ್ಕೆ ಸುರಕ್ಷಿತವಾಗಿ ಮರಳಿ ಭೂಮಿಗೆ ಬಂದರು.

ಈ ಪ್ರಸಂಗವನ್ನು ನೆನೆಯುತ್ತಾ ಸುನೀತಾ ಅವರು, ''ನಮಗೆ ಎಳ್ಳಷ್ಟೂ ಭಯವಿರಲಿಲ್ಲ, ನಾಸಾ ನಮಗೆ ಸುರಕ್ಷಿತವಾಗಿ ಮನೆಗೆ ತಲುಪಿಸುತ್ತದೆ ಎಂಬುದು ಗೊತ್ತಿತ್ತು'' ಎಂದು ಬಣ್ಣಿಸುತ್ತಾರೆ.

ಈ ಪ್ರಸಂಗದಿಂದ ನಾವು ಕಲಿಯಬೇಕಾದ ಗುಣಗಳು ಏನೆಂದರೆ, ಸುರಕ್ಷತೆಗೆ ಮೊದಲು ಆದ್ಯತೆ, ತಾಳಿದವನು ಬಾಳಿಯಾನು ಎಂಬಂತೆ ಬಿಕ್ಕಟ್ಟಿನ ಸಮಯದಲ್ಲಿ ಸಂಯಮ, ಶಾಂತಿ ಅತ್ಯಗತ್ಯ. ವೈಜ್ಞಾನಿಕ ಸಮಸ್ಯೆಗಳು ಬಗೆಹರಿಯಲು ಸಮಯದ ಅವಶ್ಯಕತೆ ಇರುತ್ತದೆ. ಇಲ್ಲಿ ಇಂಥ ಕೈಮೀರಿದ ಪರಿಸ್ಥಿತಿಯಲ್ಲಿ ಸುನೀತಾ ಧೈರ್ಯದಿಂದ ಮಾಡಿದ್ದು ಇದನ್ನೇ ಎಂಬುದು ನಾವು ತಿಳಿದುಕೊಳ್ಳಬೇಕು.

ದೀರ್ಘಕಾಲದವರೆಗೆ ಬಾಹ್ಯಾಕಾಶದಲ್ಲಿ ಇರುವುದರಿಂದ ಸುನೀತಾ ಅವರ ಸ್ನಾಯುಗಳು ದುರ್ಬಲಗೊಂಡವು. ಆಕೆಯ ದೇಹದ ಸಮತೋಲನದಲ್ಲಿ ಸಮಸ್ಯೆ ಕಂಡು ಬಂತು.

ಭೂಮಿಗೆ ಹಿಂದಿರುಗಿದ ನಂತರ ಅವರಿಗೆ ಚೇತರಿಕೆಯ ತರಬೇತಿ ನೀಡಬೇಕಾಯಿತು. ಇಷ್ಟೆಲ್ಲ ಆದರೂ ಸುನೀತಾ ಅವರು ಮಾನಸಿಕವಾಗಿ ಮಾತ್ರ ಸದೃಢವಾಗಿದ್ದರು. ಯಾರು ಈ ಸುನೀತಾ? ತಿಳಿಯಿರಿ, ಸುನೀತಾ ವಿಲಿಯಮ್ಸ ಇವರು ಭಾರತೀಯ ಮೂಲದ ಪ್ರಸಿದ್ಧ ಅಮೇರಿಕನ್ ಗಗನಯಾತ್ರಿ. ಇವರ ಜನ್ಮ 19 ಸೆಪ್ಟೆಂಬರ್ 1965 ರಂದು ಅಮೆರಿಕದಲ್ಲಿ ಆಯಿತು. ಇವರ ತಂದೆ ಭಾರತೀಯ ಮೂಲದವರು.

ಸುನೀತಾ ವಿಲಿಯಮ್ಸ್ ನಾಸಾದಲ್ಲಿ ಕೆಲಸ ಮಾಡುತ್ತಾರೆ. ಹಲವಾರು ಬಾರಿ ಬಾಹ್ಯಾಕಾಶಕ್ಕೆ ಪ್ರಯಾಣಿಸಿ ಬಂದಿದ್ದಾರೆ. ಇವರು ವಿದ್ಯಾರ್ಥಿಗಳಿಗೆ ಮತ್ತು ಯುವಕರಿಗೆ ಸ್ಫೂರ್ತಿಯ ಸೆಲೆಯಾಗಿದ್ದಾರೆ. ಸುನೀತಾ ವಿಲಿಯಮ್ಸ್ ಕಠಿಣ ಪರಿಶ್ರಮ, ಧೈರ್ಯ ಮತ್ತು ಆತ್ಮವಿಶ್ವಾಸದ ಬಲದಿಂದ ಬಾಹ್ಯಾಕಾಶದಲ್ಲಿ ಮಾಡಿದ ಅದ್ಭುತ ಕೆಲಸಗಳಿಂದಾಗಿ ಜಗತ್ತಿಗೆ ಪರಿಚಿತರಾಗಿದ್ದಾರೆ.

ಬನ್ನಿ ನಾವು ನಾಸಾ (NASA) ಈ ಸಂಸ್ಥೆಯ ಬಗ್ಗೆ ಚರ್ಚೆ ಮಾಡುವಾ.

ನಾಸಾ ಎಂದರೇನು ಗೊತ್ತೆ? ''ನ್ಯಾಷನಲ್ ಏರೋನಾಟಿಕ್ಸ್ ಅಂಡ್ ಸ್ಪೇಸ್ ಅಡ್ಮಿನಿಸ್ಟ್ರೇಷನ್''. ಇದು ಬಾಹ್ಯಾಕಾಶ, ವಿಮಾನ ಮತ್ತು ವಿಜ್ಞಾನಕ್ಕೆ ಸಂಬಂಧಿಸಿದ ಸಂಶೋಧನೆಗಳನ್ನು ನಡೆಸುವ ಅಮೆರಿಕೆಯ ಒಂದು ಸರ್ಕಾರಿ ಸಂಸ್ಥೆಯಾಗಿದೆ.

❖ **ನನಗೆ ತಿಳಿದಂತೆ**

ಅ) **ಎಂಟು ದಿವಸಗಳಿಗಾಗಿ ಬಾಹ್ಯಾಕಾಶಕ್ಕೆ ಹೋದ ಸುನೀತಾ ಎಷ್ಟು ದಿವಸಗಳ ನಂತರ ಭೂಮಿಗೆ ಹಿಂತಿರುಗಿದರು?**

1) 186 ☐ 2) 286 ☐ 3) 156 ☐ 4) 150 ☐

❖ **ಆ) ಸುನೀತಾ ಸುಮಾರು 9 ತಿಂಗಳುಗಳ ದೀರ್ಘ ಅವಧಿಯ ನಂತರ ಭೂಮಿಗೆ ಕೆಳಗಿನ ಯಾವ ದಿನಾಂಕದಂದು ಮರಳಿದರು?**

1) 15 ಆಗಸ್ಟ್ 2025 ☐ 2) 05 ಮೇ 2025 ☐ 3) 05 ಜೂನ್ 2025 ☐ 4) 18 ಮಾರ್ಚ್ 2025 ☐

● **ಹೊಂದಿಸೋಣ ಬಾ.**

ಪಾಠದಲ್ಲಿಯ ಕೆಲವು ಶಬ್ದಗಳನ್ನು ಕೆಳಗೆ ನೀಡಲಾಗಿದೆ. ಗುಂಪಿನಲ್ಲಿ ಇವುಗಳ ಬಗ್ಗೆ ಚರ್ಚೆ ಮಾಡಿ ಮುಂದೆ ನೀಡಿದ ಸರಿಯಾದ ಅರ್ಥ ಹೋಲುವ ವಾಕ್ಯದ ಜೊತೆಗೆ ಹೋಲಿಸಿ. ಇದಕ್ಕಾಗಿ ಅಂತರ್ಜಾಲ ಅಥವಾ ನಿಮ್ಮ ಶಿಕ್ಷಕರ ಸಹಾಯ ಪಡೆಯಿರಿ.

| ಶಬ್ದಗಳು | ಅರ್ಥಗಳು |
|---|---|
| 1) ಬಾಹ್ಯಾಕಾಶ | ಗಗನಯಾತ್ರಿಗಳಿಗೆ ಬಾಹ್ಯಾಕಾಶ ನಿಲ್ದಾಣಕ್ಕೆ ಸುರಕ್ಷಿತವಾಗಿ ಕೊಂಡೊಯ್ಯುವ ಮತ್ತು ಕರೆತರುವ ಯಾನದ ಹೆಸರು. |
| 2) ಗಗನಯಾತ್ರಿ | ಭೂಮಿಯ ವಾತಾವರಣದಿಂದ ಸಂಪೂರ್ಣವಾಗಿ ಹೊರಗೆ ಗಾಳಿ. ನೀರು ಇಲ್ಲದ ವಿಶಾಲವಾದ ಖಾಲಿ ಪ್ರದೇಶ. |
| 3) ನಾಸಾ | ಬಾಹ್ಯಾಕಾಶ ಅಥವಾ ಅಂತರಿಕ್ಷಕ್ಕೆ ಹೋಗಿ ಕೆಲಸ ಮಾಡುವ ವ್ಯಕ್ತಿ. |
| 4) ಸ್ಟಾರ್‌ಲೈನರ | ಬಾಹ್ಯಾಕಾಶ, ವಿಮಾನ ಮತ್ತು ವಿಜ್ಞಾನಕ್ಕೆ ಸಂಬಂಧಿಸಿದ ಸಂಶೋಧನೆ ನಡೆಸುವ ಅಮೆರಿಕೆಯ ಒಂದು ಸರ್ಕಾರಿ ಸಂಸ್ಥೆ. |

**ಸಾಲುಗಳ ಮೇಲೆ ಚರ್ಚೆ:**

1) ಕೆಲವೊಂದು ಥ್ರಸ್ಟರಗಳೂ ಸಹ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂಬುದು ಗೊತ್ತಾಯಿತು. ಎಂಜಿನ್ನಿನ ಉಷ್ಣತೆ ಸಾಮಾನ್ಯಕ್ಕಿಂತ ಅತೀ ಹೆಚ್ಚಾಗಿತ್ತು. ಈ ಎಲ್ಲ ಕಾರಣಗಳಿಂದ ಸುನೀತಾ ಮತ್ತು ಅವರ ತಂಡದವರ ಜೀವಕ್ಕೆ ಅಪಾಯ ಕಾದಿತ್ತು.

2) ಈ ಪ್ರಸಂಗದಿಂದ ಕಲಿಯಬೇಕಾದ ಗುಣಗಳು ಏನೆಂದರೆ ಸುರಕ್ಷತೆಗೆ ಮೊದಲು ಆದ್ಯತೆ, ತಾಳಿದವನು ಬಾಳಿಯಾನು ಎಂಬಂತೆ ಬಿಕ್ಕಟ್ಟಿನ ಸಮೂಯದಲ್ಲಿ ಸಂಯಮ, ಶಾಂತಿ ಅತ್ಯಗತ್ಯ.

## ಯೋಚಿಸಿ ಬರೆ.

1) ಸುನೀತಾ ಮತ್ತು ಅವರ ತಂಡ ಮರಳಿ ಭೂಮಿಗೆ ಬರಲು ಹೇಗೆ ಸಾಧ್ಯವಾಯಿತು?

2) ಬಾಹ್ಯಾಕಾಶದಲ್ಲಿ ದೀರ್ಘಕಾಲದವರೆಗೆ ಇರುವುದರಿಂದ ದೇಹದ ಮೇಲೆ ಯಾವ ಪರಿಣಾಮಗಳು ಆಗುವವು?

3) ನೀವು ಓದಿದ ಈ ಪಾಠದ ಹೆಸರು 'ನಭದ ನಾರಿ ಸುನೀತಾ' ಎಂದು ಇಡಲಾಗಿದೆ. ನಿಮ್ಮ ಗುಂಪಿನಲ್ಲಿ ಚರ್ಚೆ ಮಾಡಿ ಈ ಪಾಠದ ಹೆಸರು ಇದನ್ನೇ ಏಕೆ ಇಡಲಾಗಿದೆ? ಎಂಬುದನ್ನು ಕಾರಣ ಸಹಿತ ಬರೆ.

4) ಈ ಪಾಠಕ್ಕೆ ಹೊಂದುವಂತಹ ಬೇರೆ ಶೀರ್ಷಿಕೆ ನೀಡಿ ಕಾರಣಗಳನ್ನು ಬರೆ.

## ❖ ರಚಿಸೋಣ ಬಾ.

ದಿನಚರಿಯ ಬರಹ....

ಕೆಲವರು ತಮ್ಮೊಂದಿಗೆ ಪ್ರತಿದಿನ ಘಟಿಸಿದ ಮಹತ್ವದ ವಿಷಯಗಳನ್ನು ಸಂಕ್ಷಿಪ್ತವಾಗಿ ತಮ್ಮ ಲೇಖನ ಪುಸ್ತಕದಲ್ಲಿ ಬರೆದಿಟ್ಟುಕೊಳ್ಳುವರು. ಅವರೊಂದಿಗೆ ಅಂದು ನಡೆದ ಘಟನೆ, ಅನುಭವ, ದೃಶ್ಯ ಪ್ರಾಮಾಣಿಕವಾಗಿ ಬರೆದಿಟ್ಟುಕೊಳ್ಳುವರು. ಇದಕ್ಕೆ ದಿನಚರಿ ಎನ್ನುವರು.

ಮಕ್ಕಳೇ ನೀವೂ ಏನಾದರೂ ಇಂಥ ನಿಮ್ಮ ವಿಷಯ ಅಥವಾ ವಿಚಾರಗಳನ್ನು ಬರೆಯುವ ಬಗ್ಗೆ ಯೋಚಿಸುತ್ತಿದ್ದೀರಾ? ಹಾಗಾದರೆ ಇಂದಿನಿಂದಲೇ ಪ್ರಾರಂಭಿಸಿ.

## ❖ ಭಾಷೆ ತಿಳಿಯೋಣ ಬಾ

ಬಿಟ್ಟ ಸ್ಥಳ ತುಂಬಿ ಸಮಾಸದ ಹೆಸರು ಬರೆ.

| ಪೂರ್ವಪದ | + | ಉತ್ತರಪದ | = | ಸಮಾಸಪದ |
|---|---|---|---|---|
| 1. ಗಗನದ | + | ಯಾತ್ರಿ | = | ..................... (ತತ್ಪುರುಷ ಸಮಾಸ) |
| 2. .......... | + | ತಾಣ | = | ನಿಲ್ದಾಣ (......................................) |
| 3. ದೇವರ | + | .............. | = | ದೇವಾಲಯ (.................................) |
| 4. ಮೃಗಗಳ | + | ರಾಜ | = | .............. (...............................) |
| 5. .......... | + | ಗೂಡು | = | ಹಕ್ಕಿಗೂಡು (..............................................) |

## ನಿನ್ನ ಹುಡುಕಾಟ

1. ಅಂತರ್ಜಾಲದಿಂದ ಕಲ್ಪನಾ ಚಾವ್ಲಾ ಹೆಮ್ಮೆಯ ಗಗನ ಯಾತ್ರಿ ಇವಳ ಕುರಿತು ಮಾಹಿತಿ ಸಂಗ್ರಹಿಸಿರಿ.
2. 'ಚಂದ್ರಯಾನ-2 ಇದು ಭಾರತದ ಹೆಮ್ಮೆ' ಇದರ ಮಾಹಿತಿ ಹಾಗೂ ಚಿತ್ರಗಳನ್ನು ಸಂಗ್ರಹಿಸಿ ಒಂದು ಪ್ರಕಲ್ಪ ತಯಾರಿಸಿ ವರ್ಗದಲ್ಲಿ ಪ್ರದರ್ಶಿಸಿರಿ.

## ವರದಿ ಲೇಖನ

ಶೈಕ್ಷಣಿಕ ವರದಿ ಎಂದರೆ ಯಾವುದೇ ಶಾಲಾ ಘಟನೆ ಅಥವಾ ಚಟುವಟಿಕೆಗಳನ್ನು ಕ್ರಮಬದ್ಧವಾಗಿ ವಿವರಿಸುವ ಬರಹ

ಇದರಲ್ಲಿ ಸಾಮಾನ್ಯವಾಗಿ ಕೆಳಗಿನ ಭಾಗಗಳು ಇರಬೇಕು.

1) ಶೀರ್ಷಿಕೆ
2) ದಿನಾಂಕ ಮತ್ತು ಸ್ಥಳ
3) ಘಟನೆಯ ವಿವರ
4) ಭಾಗವಹಿಸಿದವರು
5) ಮುಖ್ಯ ಘಟನೆಗಳು
6) ನಿರ್ಣಯ

### ಮಾದರಿ - ವರದಿ

ಶಾಲಾ ವಿಜ್ಞಾನ ಪ್ರದರ್ಶನ ವರದಿ

28 ಫೆಬ್ರುವರಿ 2026

ನಮ್ಮ ಶಾಲೆಯಲ್ಲಿ ಆರನೆಯ ತರಗತಿಯ ವಿದ್ಯಾರ್ಥಿಗಳಿಗಾಗಿ 28 ಫೆಬ್ರುವರಿ 2026ರಂದು ವಿಜ್ಞಾನ ಪ್ರದರ್ಶನವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ವಿವಿಧ ವಿಜ್ಞಾನದ ಮಾದರಿಗಳನ್ನು ತಯಾರಿಸಿ ಪ್ರದರ್ಶಿಸಿದರು. ವಿದ್ಯುತ್, ನೀರಿನ ಸಂರಕ್ಷಣೆ ಮತ್ತು ಪರಿಸರ ಸಂರಕ್ಷಣೆ ಕುರಿತು ಮಾದರಿಗಳು ವಿಶೇಷ ಗಮನ ಸೆಳೆದವು.

ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಪಾಲಕರು ಪ್ರದರ್ಶನವನ್ನು ಆಸಕ್ತಿಯಿಂದ ವೀಕ್ಷಿಸಿದರು. ಉತ್ತಮ ಮಾದರಿಗಳಿಗೆ ಬಹುಮಾನ ನೀಡಲಾಯಿತು. ಈ ಕಾರ್ಯಕ್ರಮವು ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ ಹಾಗೂ ಆಸಕ್ತಿಯನ್ನು ಹೆಚ್ಚಿಸಿತು. ಪ್ರದರ್ಶನವು ಯಶಸ್ವಿಯಾಗಿ ಮುಕ್ತಾಯವಾಯಿತು.

ಮೇಲಿನ ವರದಿಯನ್ನು ನೋಡಿ ನೀವೂ ಕೂಡ ಕೆಳಗಿನ ವಿಷಯದ ಕುರಿತು ವರದಿ ತಯಾರಿಸಿ ವರ್ಗದಲ್ಲಿ ಓದಿರಿ.

- ಕ್ರೀಡಾದಿನದ ವರದಿ
- ಶಿಕ್ಷಕರ ದಿನಾಚರಣೆಯ ವರದಿ
- ಶಾಲಾ ಪ್ರವಾಸದ ವರದಿ

❖ **ಕೆಳಗಿನ ಸುದ್ದಿಗಳನ್ನು ಓದಿ ಯೋಗ್ಯ ತಲೆಬರಹಗಳೊಂದಿಗೆ ಹೊಂದಿಸು.**

| ಸುದ್ದಿಯ ವಿವರಣೆ | ಸೂಕ್ತ ಮುಖ್ಯಾಂಶಗಳು |
|---|---|
| ನವದೆಹಲಿ: ಇತ್ತೀಚೆಗೆ ನೆರೆ ರಾಷ್ಟ್ರಗಳಲ್ಲಿ ಸಂಭವಿಸಿದ ಭೀಕರ ಭೂಕಂಪದಿಂದ ಜನಜೀವನ ಅಸ್ತವ್ಯಸ್ತಗೊಂಡಿದೆ. ಈ ಸಂಕಷ್ಟದ ಸಮಯದಲ್ಲಿ ಭಾರತವು ಸ್ನೇಹಹಸ್ತ ಚಾಚಿದ್ದು, ವಾಯುಪಡೆಯ ವಿಮಾನಗಳ ಮೂಲಕ ಟನ್‌ಗಟ್ಟಲೆ ಅಕ್ಕಿ, ಗೋಧಿ, ಬೇಳೆಕಾಳುಗಳು ಮತ್ತು ತುರ್ತು ಚಿಕಿತ್ಸೆಗೆ ಬೇಕಾದ ಔಷಧಿಗಳನ್ನು ರವಾನಿಸಿದೆ. ಇದು ಭಾರತದ ಔದಾರ್ಯ ನೀತಿಯನ್ನು ಎತ್ತಿ ತೋರಿಸುತ್ತದೆ. | ಕ್ರೀಡಾ ಲೋಕ: ವಿಶ್ವಕಪ್ ಕ್ರಿಕೆಟ್ ಹಬ್ಬಕ್ಕೆ ಕ್ಷಣಗಣನೆ   |
| ಬೆಂಗಳೂರು: ರಾಜ್ಯ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯು ಈ ಸಾಲಿನ 10ನೇ ತರಗತಿಯ ವಾರ್ಷಿಕ ಪರೀಕ್ಷೆಯ ಫಲಿತಾಂಶವನ್ನು ಅಧಿಕೃತ ವೆಬ್‌ಸೈಟ್‌ನಲ್ಲಿ ಬಿಡುಗಡೆ ಮಾಡಿದೆ. ಈ ಬಾರಿ ಗ್ರಾಮೀಣ ಭಾಗದ ವಿದ್ಯಾರ್ಥಿಗಳು ನಗರ ಪ್ರದೇಶದ ವಿದ್ಯಾರ್ಥಿಗಳಿಗಿಂತ ಉತ್ತಮ ಸಾಧನೆ ಮಾಡಿದ್ದಾರೆ. ಶಾಲಾ ಆವರಣದಲ್ಲಿ ವಿದ್ಯಾರ್ಥಿಗಳು ಸಿಹಿ ಹಂಚಿ, ಪರಸ್ಪರ ಅಭಿನಂದಿಸಿ ಸಂಭ್ರಮಿಸಿದರು. | ಸಂಕಷ್ಟದಲ್ಲಿ ನೆರವು: ಭಾರತದಿಂದ ಮಾನವೀಯತೆಯ ದ್ಯೋತಕ   |
| ಮುಂಬೈ: ನಗರದ ಮುಂಬೈ ಪಬ್ಲಿಕ್ ಶಾಲೆಯಲ್ಲಿ ಇಂದು 'ಜಲ ಸಂರಕ್ಷಣಾ ದಿನ'ವನ್ನು ಆಚರಿಸಲಾಯಿತು. ಅಂತರ್ಜಲ ಮಟ್ಟ ಕುಸಿಯುತ್ತಿರುವ ಬಗ್ಗೆ ಆತಂಕ ವ್ಯಕ್ತಪಡಿಸಿದ ವಿದ್ಯಾರ್ಥಿಗಳು, ಮಳೆ ನೀರು ಸಂಗ್ರಹ (Rainwater Harvesting) ಪದ್ಧತಿಯನ್ನು ಅಳವಡಿಸಿಕೊಳ್ಳುವಂತೆ ಸಾರ್ವಜನಿಕರಲ್ಲಿ ಮನವಿ ಮಾಡಿದರು. 'ನೀರನ್ನು ಉಳಿಸಿ – ಭೂಮಿಯನ್ನು ಉಳಿಸಿ' ಎಂಬ ಘೋಷವಾಕ್ಯಗಳು ಮೊಳಗಿದವು. | ಬಾಹ್ಯಾಕಾಶದಲ್ಲಿ ಭಾರತದ ಸಾಧನೆ. ಚಂದಿರನತ್ತ ಪಯಣ.  |
| ಶ್ರೀಹರಿಕೋಟಾ: ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ISRO) ಚಂದ್ರನ ಮೇಲೆ ಸಂಶೋಧನೆ ನಡೆಸಲು ಸಿದ್ಧತೆ ಪೂರ್ಣಗೊಳಿಸಿದೆ. ಈ ಐತಿಹಾಸಿಕ ಕಾರ್ಯಾಚರಣೆಯಲ್ಲಿ ಗಗನಯಾತ್ರಿಗಳು ಚಂದ್ರನ ಮೇಲ್ಮೈಗೆ ಇಳಿಯಲಿದ್ದಾರೆ. ಈ ಪ್ರಯೋಗವು ಯಶಸ್ವಿಯಾದರೆ ಬಾಹ್ಯಾಕಾಶ ಕ್ಷೇತ್ರದಲ್ಲಿ ಭಾರತದ ಕೀರ್ತಿ ಜಗತ್ತಿನಾದ್ಯಂತ ಪಸರಿಸಲಿದೆ. | ಶೈಕ್ಷಣಿಕ ಸಾಧನೆ: ಹತ್ತನೇ ತರಗತಿ ಫಲಿತಾಂಶ ಪ್ರಕಟ  |
| ಅಹಮದಾಬಾದ್: 2026ರ ಟಿ20 ವಿಶ್ವಕಪ್ ಕ್ರಿಕೆಟ್ ಪಂದ್ಯಾವಳಿಗೆ ಭಾರತವು ಆತಿಥ್ಯ ವಹಿಸುತ್ತಿದೆ. ಇದಕ್ಕಾಗಿ ವಿಶ್ವದ ಅತಿದೊಡ್ಡ ಕ್ರೀಡಾಂಗಣವನ್ನು ಸಜ್ಜುಗೊಳಿಸಲಾಗುತ್ತಿದೆ. ಪ್ರೇಕ್ಷಕರಿಗೆ ಮತ್ತು ಆಟಗಾರರಿಗೆ ಯಾವುದೇ ತೊಂದರೆಯಾಗದಂತೆ ಅತ್ಯಾಧುನಿಕ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದ್ದು, ಇಡೀ ದೇಶವೇ ಕ್ರಿಕೆಟ್ ಹಬ್ಬದ ಸಂಭ್ರಮದಲ್ಲಿದೆ. | ಪ್ರತಿ ಹನಿ ನೀರು ಅಮೂಲ್ಯ   |

**2) ಕರ್ಮಧಾರೆಯ ಸಮಾಸ :** ಪೂರ್ವ ಮತ್ತು ಉತ್ತರ ಪದಗಳು ಲಿಂಗ, ವಚನ, ವಿಭಕ್ತಿಗಳಿಂದ ಸಮಾನವಾಗಿದ್ದು ವಿಶೇಷ ಸಂಬಂಧದಿಂದ ಕೂಡಿ ಆಗುವ ಸಮಾಸಕ್ಕೆ ಕರ್ಮಧಾರೆಯ ಸಮಾಸ ಎನ್ನುವರು. ಈ ಸಮಾಸದಲ್ಲಿ ಪೂರ್ವಪದವು ವಿಶೇಷಣವಾಗಿದ್ದು ಉತ್ತರಪದವು ಪ್ರಧಾನವಾಗಿರುತ್ತದೆ.

ಉದಾ: ಹಿರಿದಾದ + ಮರ = ಹೆಮ್ಮರ

ಕರಿದಾದ + ಮೋಡ = ಕಾರ್ಮೋಡ

ಹಿರಿದಾದ + ಜೇನು = ಹೆಜ್ಜೇನು

ಹೊನ್ನಿನ + ಬಣ್ಣ = ಹೊಂಬಣ್ಣ

ಬಿಳಿದಾದ + ತಾವರೆ = ಬೆಳ್ದಾವರೆ

ಹೊಸದಾದ + ಕನ್ನಡ = ಹೊಸಗನ್ನಡ

**3) ದ್ವಂದ್ವ ಸಮಾಸ:** ಎರಡು ಅಥವಾ ಎರಡಕ್ಕಿಂತ ಹೆಚ್ಚು ನಾಮಪದಗಳು ಸೇರಿ ಎಲ್ಲ ಪದಗಳ ಅರ್ಥಗಳೂ ಪ್ರಧಾನವಾಗಿರುವ ಸಮಾಸಕ್ಕೆ ದ್ವಂದ್ವ ಸಮಾಸ ಎನ್ನುವರು.

ಉದಾ: ತಾಯಿಯೂ + ತಂದೆಯೂ = ತಾಯಿತಂದೆ

ಗಿಡವೂ + ಮರವೂ + ಬಳ್ಳಿಯೂ = ಗಿಡಮರಬಳ್ಳಿಗಳು

ಆನೆಯೂ + ಕುದುರೆಯೂ + ಒಂಟೆಯೂ = ಆನೆಕುದುರೆಒಂಟೆಗಳು

ರಾಮನೂ + ಲಕ್ಷ್ಮಣನೂ = ರಾಮಲಕ್ಷ್ಮಣರು

ಕೈಗಳೂ + ಕಾಲುಗಳೂ = ಕೈಕಾಲುಗಳು

ಗುಡುಗೂ + ಸಿಡಿಲೂ + ಮಿಂಚೂ = ಗುಡುಗುಸಿಡಿಲುಮಿಂಚುಗಳು

**4) ದ್ವಿಗು ಸಮಾಸ:** ಪೂರ್ವಪದವು ಸಂಖ್ಯಾ ವಾಚಕವಾಗಿದ್ದು ಉತ್ತರ ಪದದಲ್ಲಿರುವ ನಾಮಪದದೊಡನೆ ಸೇರಿ ಆಗುವ ಸಮಾಸವೇ ದ್ವಿಗು ಸಮಾಸ.

ಉದಾ : ಒಂದು + ಕಟ್ಟು = ಒಗ್ಗಟ್ಟು

ಎರಡು + ಮಡಿ = ಇಮ್ಮಡಿ

ನಾಲ್ಕು + ನೂರು = ನಾನೂರು

ಸಪ್ತಗಳಾದ + ಸ್ವರಗಳು = ಸಪ್ತಸ್ವರಗಳು

ಒಂದು + ಕಣ್ಣು = ಒಕ್ಕಣ್ಣು

ನಾಲ್ಕು + ಮೊಗ = ನಾಲ್ಮೊಗ

# 13. ಗಿರಿಗಿಟಿ

**ಲೇಖಕರ ಪರಿಚಯ:** ಕವಿ ಕೆಮ್ಮಿಂಜೆ ಸುಬ್ರಾಯ ಪಾಧ್ಯಾಯ:- ಇವರು ಪುತ್ತೂರು ತಾಲೂಕಿನ ಕೆಮ್ಮಿಂಜೆ ಗ್ರಾಮದವರು. ಇವರು ವೃತ್ತಿಯಲ್ಲಿ ಶಿಕ್ಷಕರಾಗಿದ್ದು ಮಕ್ಕಳ ಮನಸ್ಸನ್ನು ಚೆನ್ನಾಗಿ ಅರಿತಿದ್ದರು. ಆದ್ದರಿಂದಲೇ ಇವರ ಸಾಹಿತ್ಯವು ಮಕ್ಕಳಿಗಾಗಿ ಸರಳವೂ ಆಕರ್ಷಕವೂ ಆಗಿತ್ತು. ಇವರು ಮಕ್ಕಳಿಗಾಗಿ ಕಥೆ, ಕವಿತೆ, ನಾಟಕಗಳನ್ನು ರಚಿಸಿದ್ದಾರೆ. ಪ್ರಸ್ತುತ ಪದ್ಯವನ್ನು ಬೊಳುವಾರು ಮಹಮದ್ ಕುಂಞಿ ಅವರ 'ತಟ್ಟು ಚಪ್ಪಾಳೆ ಪುಟ್ಟ ಮಗು' ಈ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.

'ಗಿರಿಗಿಟಿ' ಇದು ಈ ಲೇಖಕರ ಜನಪ್ರಿಯ ಪದ್ಯವಾಗಿದೆ. ಇದರಲ್ಲಿ ತೆಂಗಿನ ಮರದ ಓಲೆಯಿಂದ ಮಕ್ಕಳು ಗಿರಿಗಿಟಿ ಹೇಗೆ ತಯಾರಿಸುತ್ತಾರೆ? ಮತ್ತು ಮೂವರು ಸ್ನೇಹಿತರ ಮಧ್ಯೆ ಗಿರಿಗಿಟಿ ಆಟ ಆಡುವಾಗ ಸಂಭವಿಸಿದ ಹಾಸ್ಯದೃಶ್ಯವನ್ನು ಹೆಣೆದಿದ್ದಾರೆ.

ತೆಂಗಿನ ಮರದಿಂದೋಲೆಯ ತೆಗೆದು
ಗಿರಿಗಿಟಿ ಮಾಡಿದ ರಂಗಣ್ಣಾ;
ಗಿರಿಗಿಟಿ ಆಟವ ಆಡಲು ನಡೆದರು
ರಂಗನು, ಕಿಟ್ಟಾ, ಪುಟ್ಟಣ್ಣಾ!

ಗಿರಿಗಿಟಿ ಹಿಡಿದು, ಮೂವರು ನಡೆದು
ಸೇರಿದರು ಮೈದಾನವನು;
ಮೈದಾನದಿ ಆ ಮೂವರು ಸೇರಿ
ಗಿರಿಗಿಟಿ ಆಟವ ಆಡಿದರು!

ಸುಯ್ಯನೆ ಗಾಳಿಯು ಬೀಸುತಲಿತ್ತು,
ಗಿರಿಗಿಟಿ ಗಿರ್ರನೆ ತಿರುಗುತಲಿತ್ತು;
''ಅಪ್ಪಂತಾಲಿ, ಗಿರಿಯಂತಾಲಿ''
ತಿರುಗಿದ ಗಿರಿಗಿಟಿ ರಂಗಣ್ಣಾ!

ರಂಗನು ತಿರುಗಿದ, ಕಿಟ್ಟನು ತಿರುಗಿದ,
ತಿರುಗಿದ ಪೋಕರಿ ಪುಟ್ಟಣ್ಣಾ;
ಗರಗರ ತಿರುಗುತ, ತಿರುಗುತ ಹಾರುತ
ಬೆರಳಿಂತಿರುಗಿಸಿ ಗಿರಿಗಿಟಿಯಾ.



ಗಿರಿಗಿಟಿ ಜಾರಿತು, ಕೈಯಿಂ ಹಾರಿತು
ಗಾಳಿಗೆ ಮೇಲಕ್ಕೇರುತ್ತಾ;
ಮರಿಗಿಳಿಯಂದದಿ ಗಿರಿಗಿಟಿ ಹಾರಿತು
ತಿರ್ರನೆ ಶಬ್ದವ ಮಾಡುತ್ತಾ.

ತಿರುಗುತಲಿದ್ದಾ ಮೂವರು ನಿಂತರು
ಸುತ್ತಲೂ 'ಪಿಳಿಪಿಳಿ' ನೋಡುತ್ತಾ;
ಗಿರಿಗಿಟಿಗಿಂತಲೂ ಭಾರೀ ವೇಗದಿ
ತಿರುಗಿತು ಮಕ್ಕಳ ಉರುಟುತಲೆ!

ಮೂವರು ನೆಲದಲಿ ದೊಪ್ಪನೆ ಬಿದ್ದರು
ಗಿರಿಗಿಟಿ ಆಟದ ಸೊಕ್ಕಿನಲಿ!
ತಲೆತಲೆ ಕುಟ್ಟುತ್ತ, ಭುಜಗಳು ತಟ್ಟುತ್ತ
ಬಿದ್ದರು ಕಕ್ಕಾಬಿಕ್ಕಿಯಲಿ!

– ಕೆಮ್ಮಿಂಜೆ ಸುಬ್ರಾಯ ಪಾಧ್ಯಾಯ



❖ ನನಗೆ ತಿಳಿದಂತೆ

**ಕೆಳಗೆ ಕೊಟ್ಟ ಪ್ರಶ್ನೆಗಳ ಸರಿಯಾದ ಉತ್ತರ ಯಾವುದಿದೆ? ಅದರ ಎದುರಿಗೆ ಚುಕ್ಕಿ ( ★ ) ಈ ಚಿಹ್ನೆಯನ್ನು ತೋರಿಸಿ ಆಯ್ಕೆ ಮಾಡಿದ ಉತ್ತರಗಳ ಕಾರಣ ಕೊಡಿರಿ.**

**1) ರಂಗಣ್ಣನು ತೆಂಗಿನ ಮರದ ಓಲೆಯಿಂದ ಏನು ಮಾಡಿದನು?**

ಗಾಳಿಪಟ ☐

ವಿಮಾನ ☐

ಗಿರಿಗಿಟಿ ☐

ಪಕ್ಷಿ ☐

**2) ಮೂವರು ಹೇಗೆ ನೋಡುತ್ತಾ ನಿಂತರು?**

ಸುಳುಸುಳು ☐

ಫಳಫಳ ☐

ಟಕಟಕ ☐

ಪಿಳಿಪಿಳಿ ☐

## ಹೊಂದಿಸೋಣ ಬಾ

**ಕೆಳಗೆ ಕೊಟ್ಟ ಶಬ್ದಗಳನ್ನು ಅದರ ಅರ್ಥದೊಂದಿಗೆ ಹೊಂದಿಸಿರಿ.**

| ಶಬ್ದ | ಅರ್ಥ |
|---|---|
| ಗಿರಿಗಿಟಿ | ಜೋರಾಗಿ ಕೆಳಗೆ ಬೀಳುವ ಶಬ್ದ |
| ಪಿಳಿಪಿಳಿ | ಗಾಳಿಚಕ್ರ ಅಥವಾ ಪಿನ್ ವೀಲ್ |
| ದೊಪ್ಪನೆ | ಕಣ್ಣುಗಳನ್ನು ವೇಗವಾಗಿ ಮಿಟುಕಿಸುವದು. |
| ಪೋಕರಿ | ಗಿರಿಗಿಟಿ ಹಾರುವಾಗ ಮಾಡುವ ಶಬ್ದ |
| ತಿರ್ರನೆ | ತುಂಟ |

## ಸಾಲುಗಳ ಮೇಲೆ ಚರ್ಚೆ :

1) ಸುಯ್ಯನೆ ಗಾಳಿ ಬೀಸುತಲಿತ್ತು, ಗಿರಿಗಿಟಿ ಗಿರ್ರನೆ ತಿರುಗುತಲಿತ್ತು

2) ಗಿರಿಗಿಟಿಗಿಂತಲೂ ಭಾರೀ ವೇಗದಿ, ತಿರುಗಿತು ಮಕ್ಕಳ ಉರುಟುತಲೆ!

## ಯೋಚಿಸಿ ಬರೆ.

1) ಗಾಳಿಯು ಹೇಗೆ ಬೀಸುತ್ತಿತ್ತು?

2) ಗಿರಿಗಿಟಿ ಹೇಗೆ ಹಾರಿತು?

3) ಗಿರಿಗಿಟಿ ಆಟ ಆಡಲು ಯಾರು ಯಾರು ಮೈದಾನಕ್ಕೆ ಹೋದರು?

4) ಕೊನೆಯಲ್ಲಿ ಹುಡುಗರು ಏಕೆ ಕೆಳಗೆ ಬಿದ್ದರು?

**ನೀನು ನಿನ್ನ ಸ್ನೇಹಿತರ ಜೊತೆಗೆ ಓಣಿಯಲ್ಲಿ ಯಾವ ಯಾವ ಆಟಗಳನ್ನು ಆಡುತ್ತೀಯಾ? ಕೆಳಗಿನ ಚೌಕಟ್ಟಿನಲ್ಲಿ ಅವುಗಳ ಹೆಸರು ಬರೆ.**




**ತಯಾರಿಸೋಣ ಬಾ**

ತೆಂಗಿನ ಗರಿಯನ್ನು ಅಥವಾ ಕಾಗದವನ್ನು ಬಳಸಿ ನಿಮ್ಮದೇ ಆದ ಬಣ್ಣ ಬಣ್ಣದ ಗಿರಿಗಿಟಿಯನ್ನು ತಯಾರಿಸಿ ಗೆಳೆಯರ ಜೊತೆಗೆ ಆಡು.

❖ **ಭಾಷೆ ತಿಳಿಯೋಣ ಬಾ.**

ಕವಿತೆಯೊಳಗಿಂದ ಕೆಳಗೆ ಕೊಟ್ಟ ಶಬ್ದಗಳ ಪ್ರಾಸ ಪದಗಳನ್ನು ಹುಡುಕಿ ಬರೆ.

ಬೀಸುತಲಿತ್ತು –

ರಂಗಣ್ಣಾ –

ಸೊಕ್ಕಿನಲಿ –

ಮೇಲಕ್ಕೇರುತ್ತಾ –

**ಶಬ್ದಕೋಶದ ಸಹಾಯದಿಂದ ಒಂದೇ ಶಬ್ದಕ್ಕೆ ಬೇರೆ ಬೇರೆ ಅರ್ಥಗಳನ್ನು ಬರೆ.**

**ಉದಾ. ಓಲೆ = ಪತ್ರ, ಕಿವಿಯೋಲೆ**

**ಕಾಡು** = ---------, ----------

**ಹತ್ತು** = ----------, ----------

**ಏಳು** = ----------, ----------

**ಹೊಳೆ** = ----------, ---------

❖ **ಪದ್ಯದಲ್ಲಿ ಬಂದಿರುವ ದ್ವಿರುಕ್ತಿ ಪದಗಳು ಹುಡುಕಿ ಬರೆ.**




**ನಿನ್ನ ಹುಡುಕಾಟ.**

ಗಿರಿಗಿಟಿಯಂತಹ ಇನ್ನೂ ಯಾವ ಯಾವ ಆಟಿಕೆಗಳನ್ನು ತಯಾರಿಸಬಹುದು ಎಂಬುದನ್ನು ಅಂತರ್ಜಾಲದಿಂದ ಅಥವಾ ಶಿಕ್ಷಕರಿಂದ ತಿಳಿದುಕೋ. ಅವುಗಳನ್ನು ತಯಾರಿಸು.

❖ **ಕಂಸದಲ್ಲಿ ಕೊಟ್ಟಿರುವ ಅಲಂಕಾರಿಕ ಪದಗಳನ್ನು ಯೋಗ್ಯ ಸ್ಥಳಗಳಲ್ಲಿ ತುಂಬಿ ವಾಕ್ಯಗಳನ್ನು ಪೂರ್ಣಗೊಳಿಸಿರಿ.**

**(ಮಧುರ, ಥಕಥೈ ಥಕಥೈ, ಚಿಕ್ಕಚಿಕ್ಕ, ಮಿನುಮಿನುಮಿನುಗು, ಭರಭರನೆ, ಗುಡುಗುಡು, ಸುಗಂಧ)**

........... ಗಗನದಲಿ ಗರ್ಜಿಸಿತು ............ ಗಾಳಿ ಬೀಸಿತು. .......... ಚಿಟ್ಟೆಗಳು ಚಿಗುರಿನ ಮೇಲೆ ಹಾಡುತ್ತಿದ್ದವು. ಬೇರುಗಳ ಮೇಲೆ ಬಿದ್ದ ಮಳೆ ಹನಿಗಳು ........... ತ್ತಿದ್ದವು. ಪಕ್ಷಿಗಳು .............. ಪಲ್ಲವಿ ಹಾಡಿದವು. ......... ಎಂದು ನವಿಲು ನರ್ತಿಸಿತು. ಮಳೆ ನಿಂತಾಗ ಮಣ್ಣಿನ ........... ಮೆಲ್ಲಗೆ ಹರಡಿತು.

**ಕೆಳಗಿನ ಚಿತ್ರದ ಆಧಾರದ ಮೇಲೆ ಲೇಖನದ ನಿಯಮಗಳನ್ನು ಓದಿ ಒಂದು ಪರಿಚ್ಛೇದ ಬರೆದು ತಲೆಬರಹ ಕೊಡು.**



**ನೀವು ಅನುಸರಿಸಬೇಕಾದ ನಿಯಮಗಳು :**

- **ವಿಶೇಷಣ ಬಳಸಿ:** ಕನಿಷ್ಠ ಒಂದು ವಿಶೇಷಣ ಇರಲಿ (ಉದಾ: ಸುಂದರ ಹೂವು)
- **ಸರ್ವನಾಮ ಬಳಸಿ:** ಪದೇ ಪದೇ ಹೆಸರನ್ನು ಬಳಸುವ ಬದಲು 'ಅವರು', 'ಅದು', 'ಅಲ್ಲಿ' ಬಳಸಿ.
- **ಸರಿಯಾದ ಕ್ರಿಯಾಪದ:** ವಾಕ್ಯವು ಸೂಕ್ತವಾದ ಕ್ರಿಯಾಪದದೊಂದಿಗೆ ಕೊನೆಗೊಳ್ಳಲಿ
- **ಲೇಖನ ಚಿಹ್ನೆಗಳು:** ಅಲ್ಪವಿರಾಮ ಮತ್ತು ಪೂರ್ಣವಿರಾಮಗಳನ್ನು ಗಮನಿಸಿ ಬಳಸಿ

**ಬರೆಯುವಾಗ ನೆನಪಿಡಿ:**

- ಸುಂದರ, ಹಸಿರು, ಬಣ್ಣ ಬಣ್ಣದ – ಇಂತಹ ಪದಗಳನ್ನು ಬಳಸಿ (ಇವು ವಿಶೇಷಣಗಳು)
- ಅವರು, ಅದು, ಅಲ್ಲಿ ಎಂಬ ಪದಗಳನ್ನು ಬಳಸಿ. (ಇವು ಸರ್ವನಾಮಗಳು).
- ಪ್ರತಿಯೊಂದು ವಾಕ್ಯದ ಕೊನೆಯಲ್ಲಿ **ಪೂರ್ಣವಿರಾಮ (.) ಹಾಕಿ.**
- **ಸ್ವರ ಚಿಹ್ನೆಗಳ ಯೋಗ್ಯ ಬಳಕೆ:** ಹೂವು, ನೀನು, ಗೃಹ.
- **ಒತ್ತಕ್ಷರಗಳ ಯೋಗ್ಯ ಬಳಕೆ:** ಅಕ್ಕ, ಸೂರ್ಯ, ಆಪ್ತ

..............................................................
..............................................................
..............................................................
..............................................................
..............................................................
..............................................................
..............................................................
..............................................................
..............................................................
..............................................................
..............................................................
..............................................................
..............................................................
..............................................................
..............................................................
..............................................................
..............................................................
..............................................................
..............................................................
..............................................................

ಓದಿ ಬೆಳೆಯಿರಿ, ಆಟವಾಡಿ ಅರಳಿರಿ

# 14. ಜೀವ ಉಳಿಸಿದ ಬಾಲಕರು

ಲೇಖಕರ ಪರಿಚಯ : ಬಿ. ಬೋರೆಗೌಡ. ಪ್ರಸ್ತುತ 'ಜೀವ ಉಳಿಸಿದ ಬಾಲಕರು' ಈ ಗದ್ಯಪಾಠವನ್ನು ಬಿ. ಬೋರೆಗೌಡ ಅವರು ಬರೆದ 'ಮಕ್ಕಳ ಸಾಹಸದ ಸತ್ಯ ಕಥೆಗಳು (1986)' ಈ ಪುಸ್ತಕದಿಂದ ಆಯ್ದುಕೊಳ್ಳಲಾಗಿದೆ.

ಇಲ್ಲಿ ಲೇಖಕರು ಬಡ ಅಂಬಿಗರ ಮಕ್ಕಳಾದ 12 ವರ್ಷದ ಅಂಬ್ರೋಸ್ ಹಾಗೂ ಮುರುಗನ್ ಇವರು ನೀರಿನಲ್ಲಿ ಮುಳುಗುತ್ತಿರುವ ಮೂರು ಜನರ ಜೀವವನ್ನು ತಮ್ಮ ಸಮಯಪ್ರಜ್ಞೆಯಿಂದ ಉಳಿಸಿದರು. ಸಾಮಾಜಿಕ ಸಂಸ್ಥೆ ಹಾಗೂ ಸರಕಾರವು ಇವರನ್ನು ಸನ್ಮಾನಿಸಿದವು. ಅವರ ಈ ಸಾಹಸ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಬೇಕೆಂಬುದೇ ಲೇಖಕರ ಉದ್ದೇಶವಾಗಿದೆ.



ಅಂಬ್ರೋಸ್ ಕೇವಲ ಹನ್ನೆರಡು ವರ್ಷ ವಯಸ್ಸಿನ ಚಿಕ್ಕ ಹುಡುಗ, ಪೋಲಿಯೋದಿಂದಾಗಿ ಆತನ ಒಂದು ಕಾಲು ಊನವಾಗಿತ್ತು. ಸರಿಯಾಗಿ ನಡೆಯಲು ಆಗುತ್ತಿರಲಿಲ್ಲ.

ಈತನ ತಂದೆ ಪಳನಿಸ್ವಾಮಿ, ತಾಯಿ ಅಂತೋಣಿಯಮ್ಮ. ಇವರ ಕಸುಬು ದೋಣಿಯಲ್ಲಿ ಕುಳಿತು ಜಲಾಶಯಗಳಲ್ಲಿ ಮೀನು ಹಿಡಿಯುವುದು. ಸ್ಥಳ-ತಮಿಳುನಾಡಿನ ಮೆಟ್ಟೂರು ಬಳಿಯ ಚಿನ್ನಪ್ಪಲಂ, ವಾಸಿಸಲು ಮನೆ ಸಹ ಇರಲಿಲ್ಲ, ಚಿಕ್ಕಂದಿನಲ್ಲೇ ತಂದೆ ತೀರಿಕೊಂಡನು. ಅನಂತರ ಅಂತೋಣಿಯಮ್ಮ ಅಂಬ್ರೋಸ್‌ನ ಸಹಿತ ಕರ್ನಾಟಕಕ್ಕೆ ವಲಸೆ ಬಂದಳು.

ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ ತಾಲ್ಲೂಕಿನ ಅಂತರಸಂತೆ ಒಂದು ದೊಡ್ಡ ಊರು. ಅದು ಕಬನೀ ಜಲಾಶಯದ ದಡದಲ್ಲಿದೆ. ಅಲ್ಲಿ ಮೀನುಗಾರ ಸುಬ್ರಮಣಿ ಎಂಬುವವರು ಇದ್ದರು. ಅವರ ಬಳಿ ಅಂಬ್ರೋಸನನ್ನು ಅವನ ತಾಯಿ ಕೆಲಸಕ್ಕೆ ಸೇರಿಸಿದಳು. ವರ್ಷಕ್ಕೆ ಒಂದು ಸಾವಿರ ರೂಪಾಯಿ ಸಂಬಳ, ಮೂರು ಜತೆ ಬಟ್ಟೆ, ನಿತ್ಯವೂ ಊಟ. ಇಷ್ಟು ಅಂಬ್ರೋಸನಿಗೆ ಸುಬ್ರಮಣಿಯಿಂದ ದೊರೆಯುತ್ತಿದ್ದವು. ಕೆಲಸಕ್ಕೆ ಸೇರಿದ ಕಾರಣ ಅಂಬ್ರೋಸನು ಶಾಲೆಗೆ ಸೇರಲಾಗಲಿಲ್ಲ.

ದಿನವೂ ದೋಣಿ ನಡೆಸುವುದು, ದೋಣಿಯಲ್ಲಿ ನಿಂತು ಬಲೆ ಬೀಸಿ ಮೀನು ಹಿಡಿದು ತನ್ನ ಯಜಮಾನನಿಗೆ ತಂದು ಕೊಡುವುದು ಆತನ ದಿನಚರಿ. ಕಬಿನಿ ಜಲಾಶಯದ ದಡದಲ್ಲಿ ಕೋಲುಗಳನ್ನು ನಿಲ್ಲಿಸಿ ಅವುಗಳ ಮೇಲೆ ದೋಣಿಯನ್ನು ಬೋರಲು ಹಾಕಿ ಆ ದೋಣಿಯ ಕೆಳಗೆ ಮಲಗುತ್ತಿದ್ದನು.

ಮತ್ತೊಬ್ಬ ಹುಡುಗ ಮುರುಗನ್, ಈತನ ವಯಸ್ಸು ಸಹ 12 ವರ್ಷ, ಊರು ತಮಿಳುನಾಡಿನ ಕೊಯಮತ್ತೂರು ಬಳಿಯ ಸೇಕಡೆಪಾಳ್ಯಂ. ತಂದೆಯ ಹೆಸರು ಪಳನಿಸ್ವಾಮಿ,ತಾಯಿ ಮಾದಮ್ಮಾಳ್. ಇವರೂ ಕೂಡ ತಮಿಳುನಾಡಿನಿಂದ ಅಂತರಸಂತೆಗೆ ಜೀವನೋಪಾಯಕ್ಕಾಗಿ ವಲಸೆ ಬಂದಿದ್ದರು.

ಮುರುಗನ್ ಸಹ ಶಾಲೆಗೆ ಸೇರಲಿಲ್ಲ, ಅಕ್ಷರ ಕಲಿಯಲಿಲ್ಲ, ನಿತ್ಯವೂ ತಂದೆಯೊಡನೆ ದೋಣಿಯಲ್ಲಿ ಕುಳಿತು ಮೀನು ಹಿಡಿಯಲು ಹೋಗುತ್ತಿದ್ದನು. ಕೆಲ ಸಮಯ ದೋಣಿ ನಡೆಸುವುದು, ಕೆಲವು ವೇಳೆ ಮೀನು ಹಿಡಿಯುವುದು, ಹಿಡಿದ ಮೀನನ್ನು ತಂದೆಯ ಜೊತೆಯಲ್ಲಿ ಹೋಗಿ ಮಾರುವುದು-ಇವು ಇವನ ದಿನಚರಿ. ಮೀನನ್ನು ಮಾರಿ ಬಂದ ಹಣದಿಂದ ಇವರು ಜೀವಿಸುತ್ತಿದ್ದರು. ಬಡತನದ ಕಾರಣದಿಂದ ಇವರಿಗೆ ವಾಸಕ್ಕೆ ಮನೆ ಇರಲಿಲ್ಲ, ಅಂಬ್ರೋಸನಂತೆಯೇ ದೋಣಿಯ ಅಡಿಯಲ್ಲಿಯೇ ಇವರ ವಸತಿ ಊಟ, ನಿದ್ರೆ.

ಅಂಬ್ರೋಸ್ ಮತ್ತು ಮುರುಗನ್ ಇಬ್ಬರೂ ಗೆಳೆಯರಾದರು. ಆಗಾಗ್ಗೆ ಮುರುಗನ್ ಅಂಬ್ರೋಸನ ದೋಣಿಯಲ್ಲಿ ಕುಳಿತು ಕಬಿನಿ ಜಲಾಶಯದಲ್ಲಿ ಮೀನು ಹಿಡಿಯಲು ಅಂಬ್ರೋಸನಿಗೆ ಸಹಾಯ ಮಾಡುತ್ತಿದ್ದನು. ಇಬ್ಬರ ನಾಡು, ಭಾಷೆ, ವಯಸ್ಸು ಹಾಗೂ ಜೀವನದ ರೀತಿ ಒಂದೇ ಆಗಿತ್ತು. ಇವರಿಬ್ಬರೂ ಅಚ್ಚುಮೆಚ್ಚಿನ ಸ್ನೇಹಿತರಾಗಿದ್ದರು. 'ಮೀನು ಮರಿಗೆ ಈಜು ಕಲಿಸುವವರು ಯಾರು?' ಎಂಬುದು ಒಂದು ಗಾದೆ. ಅಂತೆಯೇ ಮೀನುಗಾರರ ಮಕ್ಕಳಾದ ಇವರಿಗೂ ಈಜು ಅಭ್ಯಾಸವಾಗಿತ್ತು.

ಅಂತರಸಂತೆಯ ಬಳಿ ಭೀಮನಕೊಲ್ಲಿ ಗ್ರಾಮವಿದೆ. ಅಲ್ಲಿ 16-02-1984ರಂದು ಮಹದೇಶ್ವರಸ್ವಾಮಿಯ ಜಾತ್ರೆ ಸೇರಿತು. ಅಂತರಸಂತೆ ಮತ್ತು ಪಕ್ಕದ ಹಳ್ಳಿಯ ಜನ ಆ ಜಾತ್ರೆಗೆ ಹೋಗಿದ್ದರು. ದೇವರ ದರ್ಶನ ಮಾಡಿ, ಜಾತ್ರೆ ಮುಗಿಸಿ ಮರಳಿ ಬರುತ್ತಿದ್ದರು. ಅವರು ಮಧ್ಯೆ ಇದ್ದ ಕೊಲ್ಲಿಯನ್ನು ದಾಟಬೇಕಾಗಿತ್ತು. ಸಂಜೆಯಲ್ಲಿ ದಾಟಲು ಸಹಾಯವಾಗಿದ್ದುದು ಒಂದೇ ಒಂದು ನಾಡದೋಣಿ, ಆ ದೋಣಿ ಬಹು ಚಿಕ್ಕದು, ಅದರಲ್ಲಿ ಕೇವಲ ಆರು ಜನ ಮಾತ್ರ ಕುಳಿತು ಪ್ರಯಾಣ ಮಾಡಬಹುದಾಗಿತ್ತು. ಆದರೆ ಅದರ ಮೇಲೆ ಹತ್ತು ಜನ ಏರಿದರು. ಕತ್ತಲಾಗುವಷ್ಟರಲ್ಲಿ ಮನೆ ಸೇರಿಕೊಳ್ಳಬೇಕೆಂಬ ಆತುರ ಅವರಿಗೆ. ಸುಮಾರು ಒಂದು ಫರ್ಲಾಂಗ್ ದೂರದಲ್ಲಿ ಅಂಬ್ರೋಸ್ ತನ್ನ ದೋಣಿಯಲ್ಲಿ ಕುಳಿತು ಮೀನು ಹಿಡಿಯುತ್ತಿದ್ದನು. ಅವನು ಅಂಬಿಗನಿಗೆ ''ಆರು ಜನಕ್ಕಿಂತ ಹೆಚ್ಚು ಜನ ಕೂರಿಸಬೇಡ, ಅಪಾಯ'' ಎಂದು ಕೂಗಿ ಎಚ್ಚರಿಸಿದನು. ಕೇವಲ 12 ವರ್ಷದ ಹುಡುಗನಾದ ಅಂಬ್ರೋಸ್‌ನ ಮಾತು ವಯಸ್ಸಾದ ಅಂಬಿಗನಿಗೆ ಹಿಡಿಸಲಿಲ್ಲ. ಹತ್ತು ಜನರನ್ನು ಕೂರಿಸಿಕೊಂಡು ದೋಣಿಯನ್ನು ಮುಂದಕ್ಕೆ ಬಿಟ್ಟನು ಅಂಬ್ರೋಸ್ ತನ್ನ ಪಾಡಿಗೆ ತಾನು ತನ್ನ ದೋಣಿಯಲ್ಲಿ ಮೀನು ಹಿಡಿಯುತ್ತಿದ್ದನು. ಆತನ ದೋಣಿಯಲ್ಲಿ ಮುರುಗನ್ ಸಹ ಇದ್ದನು.

ಪ್ರಯಾಣಿಕರ ದೋಣಿ ದಡ ಬಿಟ್ಟು ಕೊಲ್ಲಿಯ ಮಧ್ಯಕ್ಕೆ ಬಂತು. ಪ್ರಯಾಣಿಕರ ಭಾರಕ್ಕೆ ಅದು ಅತ್ತ ಇತ್ತ ತೂಗಾಡುತ್ತಿತ್ತು. ದೋಣಿ ಮುಳುಗುವುದು ಖಚಿತವಾಯಿತು. ಪ್ರಯಾಣಿಕರು ರಕ್ಷಣೆಗಾಗಿ ಕೂಗಿಕೊಂಡರು. ಮರುಕ್ಷಣದಲ್ಲೇ ದೋಣಿ ಮುಳುಗಿತು.

ದೋಣಿಯಲ್ಲಿದ್ದ ಪ್ರಯಾಣಿಕರು ರಕ್ಷಣೆಗಾಗಿ ಕೂಗಿಕೊಂಡಾಗ ಮೀನುಹಿಡಿಯುತ್ತಿದ್ದ ಅಂಬ್ರೋಸ್ ಮತ್ತು ಮುರುಗನ್ ಅಕಡೆಗೆ ತಿರುಗಿ ನೋಡಿದರು. ದೋಣಿ ಮುಗುಚಿ ಅದರಲ್ಲಿದ್ದ ಜನ ಮುಳುಗುತ್ತಿರುವುದನ್ನು ಕಂಡು, ಅಯ್ಯೋ!..... ಎಂದರು. 'ನಾನು ಮೊದಲೇ ಹೇಳಿದೆ, ಆರು ಜನರ ಮೇಲೆ ಕೂರಿಸಬೇಡ ಎಂದು, ಅಂಬಿಗ ಕೇಳಲಿಲ್ಲ, ಬಾ ಬೇಗ ಹೋಗಿ ಪ್ರಯಾಣಿಕರನ್ನು ಉಳಿಸೋಣ' ಚಡಪಡಿಸಿದ ಅಂಬ್ರೋಸ್. ತಡಮಾಡದೆ ಇಬ್ಬರೂ ಮುಳುಗಿದವರ ರಕ್ಷಣೆಗಾಗಿ ತಮ್ಮ ದೋಣಿಯಲ್ಲಿ ಧಾವಿಸಿ ದೋಣಿ ಮುಳುಗಿದ ಸ್ಥಳವನ್ನು ತಲುಪಿದರು. ಅಷ್ಟರಲ್ಲಿ ಎಲ್ಲರೂ ಮುಳುಗಿ ಹೋಗಿದ್ದು ಮೂವರು ಮಾತ್ರ ಮುಳುಗಿ ಏಳುತ್ತಿದ್ದರು.

ಅಂಬ್ರೋಸ್ ಮುರುಗನ್‌ಗೆ ಹೀಗೆ ಹೇಳಿದನು, ''ನೀನು ದೋಣಿಯಿಂದ ಕೊಲ್ಲಿಗೆ ಧುಮುಕಿ ಮುಳುಗುತ್ತಿರುವವರನ್ನು ಮೇಲೆತ್ತಿಕೊಡು, ನಾನು ದೋಣಿಯೊಳಕ್ಕೆ ಎಳೆದುಕೊಳ್ಳುತ್ತೇನೆ ಅವರನ್ನು ಬೇಗನೆ ದಡಕ್ಕೆ ಒಯ್ಯೋಣ''.

ತಕ್ಷಣವೇ ಮುರುಗನ್ ನೀರಿಗೆ ಹಾರಿದನು. ಮುಳುಗುತ್ತಿರುವ ಒಬ್ಬೊಬ್ಬರ ಜುಟ್ಟು ಹಿಡಿದು ಮೇಲೆತ್ತಿ ಅಂಬ್ರೋಸ್‌ನ ಕೈಗೆ ಕೊಟ್ಟನು. ಅಂಬ್ರೋಸ್ ಎಳೆದುಕೊಳ್ಳುವಾಗ ಮುರುಗನ್ ಶರೀರವನ್ನು ದೋಣಿಯೊಳಕ್ಕೆ ತಳ್ಳಿದನು. ಕಾಣುತ್ತಿದ್ದ ಮೂವರನ್ನು ದೋಣಿಗೆ ಹಾಕಿದ ಮೇಲೆ ಯಾರಾದರೂ ನೀರಿಗೆ ಬಿದ್ದಿರುವವರು ಕಾಣುತ್ತಿದ್ದಾರೆಯೆ ? ಎಂದು

ಮತ್ತೊಮ್ಮೆ ಇಬ್ಬರೂ ನೋಡಿದರು. ಯಾರೂ ಕಾಣಲಿಲ್ಲ. ಮುರುಗನ್ ದೋಣಿ ಏರಿ ಕುಳಿತನು. ಇಬ್ಬರೂ ಹುಟ್ಟು ಹಾಕಿ ದೋಣಿಯನ್ನು ವೇಗವಾಗಿ ನಡೆಸಿದರು. ದಡಮುಟ್ಟಿದರು. ದಡ ಸೇರಿದ ಕೂಡಲೆ ಆ ಮೂವರಿಗೂ ಪ್ರಥಮ ಚಿಕಿತ್ಸೆ ನೀಡಿದರು. ಅವರ ಪ್ರಾಣ ಉಳಿಸಿದರು. ಚಿಕ್ಕವರಾದರೂ ಮುಳುಗುತ್ತಿರುವ ಜನರನ್ನು ರಕ್ಷಿಸುವ ಮಹತ್ಕಾರ್ಯ ಮಾಡಿದರು !

ಈ ಬಾಲಕರ ಸಾಹಸ ಕಾರ್ಯವನ್ನು ಮೆಚ್ಚಿ ಜಿಲ್ಲಾ ಕೇಂದ್ರವಾದ ಮೈಸೂರು ನಗರದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್‌ನವರು ಸನ್ಮಾನ ಸಮಾರಂಭವನ್ನು ಏರ್ಪಡಿಸಿದ್ದರು. ಪುರಪ್ರಮುಖರು ಆ ಸಭೆಗೆ ದಯಮಾಡಿಸಿದ್ದರು. ಆಗಿನ ಜಿಲ್ಲಾ ಪೋಲೀಸ್ ಅಧಿಕಾರಿ ಶ್ರೀಯುತ ಶ್ರೀನಿವಾಸನ್ ರವರೂ ಬಂದಿದ್ದರು. ಈ ಚಿಕ್ಕ ಬಾಲಕರ ಧೈರ್ಯ, ಸಾಹಸ ಹಾಗೂ ದಯಾಪೂರ್ಣ ಮನಸ್ಸು ಮೊದಲಾದ ಗುಣಗಳನ್ನು ಜಿಲ್ಲಾ ಪೋಲೀಸ್ ಅಧಿಕಾರಿಗಳು ಮನಸಾರೆ ಹೊಗಳಿದರು. ಬ್ಯಾಂಕ್ ಈ ಬಾಲಕರಿಗೆ ತಲಾ ಒಂದು ನೂರು ರೂಪಾಯಿ ನಗದು ಹಾಗೂ ಒಂದು ಜೊತೆ ಬಟ್ಟೆಗಳನ್ನು ಬಹುಮಾನವಾಗಿ ಕೊಟ್ಟು ಸನ್ಮಾನಿಸಿತು. ಆಗಿನ ಕರ್ನಾಟಕದ ಮುಖ್ಯಮಂತ್ರಿಗಳು ಈ ಬಾಲಕರ ಧೈರ್ಯ ಸಾಹಸಗಳನ್ನು ಪ್ರಶಂಸಿಸಿದರು. ಅವರು ಈ ಬಾಲಕರಿಗೆ ತಲಾ ಒಂದು ಸಾವಿರ ರೂಪಾಯಿಗಳ ನಗದು ಬಹುಮಾನ ಕೊಟ್ಟರು. ರಾಜ್ಯ ಪ್ರಶಸ್ತಿ ಸಹ ನೀಡಿದರು. ಪೋಲಿಯೋದಿಂದ ಕುಂಟನಾದ ಅಂಬ್ರೋಸ್‌ನಿಗೆ ವಿಕಲಚೇತನ ಕ್ಷೇಮಯೋಜನೆ ಪ್ರಕಾರ 50 ರೂಪಾಯಿಗಳ ಮಾಶಾಸನ ಬರುವ ಏರ್ಪಾಟು ಮಾಡಿದರು.

ಭಾರತದ ರಾಷ್ಟ್ರಪತಿಯವರು ಈ ಬಾಲಕರಿಬ್ಬರಿಗೂ ಜೀವರಕ್ಷಾ ಪದಕ (ಚಿನ್ನದ ಪದಕ) ಕೊಡಲು ತೀರ್ಮಾನಿಸಿ 14-11-1986ರಂದು ಸರ್ಕಾರದ ಖರ್ಚಿನಲ್ಲಿ ಇವರನ್ನು ನವದೆಹಲಿಗೆ ಕರೆಸಿಕೊಂಡು, ಅಲ್ಲಿ ಸೇರಿದ್ದ ಬೃಹತ್ಸಭೆಯಲ್ಲಿ ಇವರಿಗೆ ಜೀವರಕ್ಷಾ ಪದಕಗಳನ್ನು ಕೊಟ್ಟರು.

## ನನಗೆ ತಿಳಿದಂತೆ :

- **ಕೆಳಗೆ ಕೊಟ್ಟ ಪ್ರಶ್ನೆಗಳ ಸರಿಯಾದ ಉತ್ತರದ ಮುಂದೆ ಚುಕ್ಕಿ (★)ಚಿಹ್ನೆಯನ್ನು ತೋರಿಸಿ. ಆಯ್ಕೆ ಮಾಡಿದ ಉತ್ತರಗಳ ಕಾರಣ ಕುರಿತು ಚರ್ಚಿಸು**

**1) ಅಂಬ್ರೋಸ್‌ನಿಗೆ ಬರುತ್ತಿದ್ದ ಸಂಬಳ.**

ಅ) ಐದು ಸಾವಿರ ರೂಪಾಯಿ. ( )
ಬ) ಐವತ್ತು ರೂಪಾಯಿ. ( )
ಕ) ಒಂದು ಸಾವಿರ ರೂಪಾಯಿ. ( )
ಡ) ಒಂದು ಸಾವಿರ ಐದು ನೂರು ರೂಪಾಯಿ. ( )

**2) ಅಂಬ್ರೋಸ್ ಮತ್ತು ಮುರುಗನ್ ಗೆಳೆಯರಾಗಲು ಕಾರಣ**

ಅ) ಇಬ್ಬರ ನಾಡು, ಭಾಷೆ, ವಯಸ್ಸು ಹಾಗೂ ಜೀವನದ ರೀತಿ ಒಂದೇ ಆಗಿತ್ತು. ( )
ಬ) ಇಬ್ಬರೂ ಒಂದೇ ಶಾಲೆಗೆ ಹೋಗುತ್ತಿದ್ದರು. ( )
ಕ) ಇಬ್ಬರೂ ಒಂದೇ ಊರಿನವರಾಗಿದ್ದರು. ( )
ಡ) ಇಬ್ಬರೂ ಕೂಡಿ ಆಡುತ್ತಿದ್ದರು. ( )

## ಸಾಲುಗಳ ಮೇಲೆ ಚರ್ಚೆ :

ಕೆಳಗೆ ಪಾಠದಿಂದ ಆಯ್ದ ಕೆಲವು ವಾಕ್ಯಗಳನ್ನು ಕೊಡಲಾಗಿದೆ. ಅವುಗಳ ಮೇಲೆ ಗೆಳೆಯರೊಂದಿಗೆ ಚರ್ಚೆ ಮಾಡಿ.

1) ಕಬಿನಿ ಜಲಾಶಯದ ದಡದಲ್ಲಿ ಕೋಲುಗಳನ್ನು ನಿಲ್ಲಿಸಿ ಅವುಗಳ ಮೇಲೆ ದೋಣಿಯನ್ನು ಬೋರಲು ಹಾಕಿ ಆ ದೋಣಿಯ ಕೆಳಗೆ ಮಲಗುತ್ತಿದ್ದನು.

2) ಕೇವಲ 12 ವರ್ಷದ ಹುಡುಗನಾದ ಅಂಬ್ರೋಸ್‌ನ ಮಾತು ವಯಸ್ಸಾದ ಅಂಬಿಗನಿಗೆ ಹಿಡಿಸಲಿಲ್ಲ.

**ಯೋಚಿಸಿ ಬರೆ :**

**ಪಾಠವನ್ನು ಗಮನಕೊಟ್ಟು ಓದಿ ಕೇಳಿದ ಪ್ರಶ್ನೆಗಳಿಗೆ ಉತ್ತರ ಬರೆ.**

1) ಅಂಬ್ರೋಸ್ ಹಾಗೂ ಮುರುಗನ್‌ರ ದಿನಚರಿ ಹೇಗಿತ್ತು?
2) ಸುಬ್ರಮಣಿಯವರಿಂದ ಅಂಬ್ರೋಸ್‌ನಿಗೆ ಏನೇನು ದೊರೆಯುತ್ತಿತ್ತು?
3) ಅಂಬ್ರೋಸ್ ಮತ್ತು ಮುರುಗನ್ ಮುಳುಗುತ್ತಿದ್ದ ಜನರನ್ನು ಹೇಗೆ ಕಾಪಾಡಿದರು?
4) ಅಂಬ್ರೋಸ್ ಹಾಗೂ ಮುರುಗನ್ ಇವರನ್ನು ಯಾರು ಯಾರು ಸತ್ಕರಿಸಿದರು?
5) ಇಬ್ಬರೂ ಬಾಲಕರ ಸಾಹಸದ ಕುರಿತು ನಿನ್ನ ಅಭಿಪ್ರಾಯ ಬರೆ.

❖ **ಮೀನು ಮರಿಗೆ ಈಜು ಕಲಿಸುವವರು ಯಾರು?**

**ಈ ಗಾದೆಮಾತನ್ನು ನಿಮ್ಮ ಮಾತುಗಳಲ್ಲಿ 6ರಿಂದ 8 ವಾಕ್ಯಗಳಲ್ಲಿ ವಿವರಿಸಿ ಬರೆ.**

**ಕಲ್ಪನೆ ಮಾಡಿ ಬರೆ :**

**ನೀನು ನಿನ್ನ ಸ್ನೇಹಿತರೊಂದಿಗೆ ಶಾಲೆಗೆ ಹೋಗುತ್ತಿರುವೆ. ರಸ್ತೆಯ ಪಕ್ಕದ ಚರಂಡಿಯಲ್ಲಿ ನಾಯಿ ಮರಿಯೊಂದು ಬಿದ್ದಿದೆ. ಮೇಲೆ ಬರಲು ಆಗದೆ ಒದ್ದಾಡುತ್ತಿದೆ. ಆಗ ನೀನು ಏನು ಮಾಡುವೆ?**

❖ **ಭಾಷೆ ತಿಳಿಯೋಣ ಬಾ :**

**ಕೊಟ್ಟ ವಾಕ್ಯದಲ್ಲಿನ ಕ್ರಿಯಾಪದಗಳನ್ನು ಸಕರ್ಮಕ, ಅಕರ್ಮಕಗಳನ್ನಾಗಿ ವಿಂಗಡಿಸಿ ಬರೆ.**

1) ಅಂಬ್ರೋಸ್‌ನನ್ನು ಅವನ ತಾಯಿ ಕೆಲಸಕ್ಕೆ ಸೇರಿಸಿದಳು.
2) ಅಂಬ್ರೋಸ್‌ನು ದೋಣಿಯ ಕೆಳಗೆ ಮಲಗುತ್ತಿದ್ದನು.
3) ದೋಣಿ ಮುಳುಗಿತು.
4) ರಾಷ್ಟ್ರಪತಿಯವರು ಬಾಲಕರನ್ನು ದೆಹಲಿಗೆ ಕರೆಸಿಕೊಂಡರು.
5) ಇಬ್ಬರೂ ಗೆಳೆಯರಾದರು.
6) ಯಾರಾದರೂ ನೀರಿಗೆ ಬಿದ್ದವರು ಕಾಣುತ್ತಿದ್ದಾರೆಯೇ?

| ಸಕರ್ಮಕ | ಅಕರ್ಮಕ |
|---|---|
| | |
| | |
| | |

❖ **ಕೊಟ್ಟ ಶಬ್ದಗಳ ಲಿಂಗ -ವಚನ -ವಿಭಕ್ತಿ ಪ್ರತ್ಯಯ ಹೇಳಿರಿ.**

1) ಅಂಬ್ರೋಸ್‌ನನ್ನು 2) ದೋಣಿಯಿಂದ 3) ಸ್ನೇಹಿತರು 4) ತಾಯಿಯ
5) ದಡಕ್ಕೆ 6) ನಗರದಲ್ಲಿ

| ಶಬ್ದ | ಲಿಂಗ | ವಚನ | ವಿಭಕ್ತಿ | ಪ್ರತ್ಯಯ |
|---|---|---|---|---|
| ಅಂಬ್ರೋಸ್‌ನನ್ನು | ಪುಲ್ಲಿಂಗ | ಏಕವಚನ | ದ್ವಿತೀಯಾ | ಅನ್ನು |
| | | | | |
| | | | | |
| | | | | |
| | | | | |
| | | | | |

## ನಿನ್ನ ಹುಡುಕಾಟ :

ಆಂಬ್ರೋಸ್ ಹಾಗೂ ಮುರುಗನ್ ಇವರಂತೆಯೇ ಇನ್ನೂ ಅನೇಕ ಬಾಲಕ, ಬಾಲಕಿಯರ ಸಾಹಸದ ಕಥೆಗಳನ್ನು ವೃತ್ತಪತ್ರಿಕೆ, ನಿಯತಕಾಲಿಕೆ, ಗ್ರಂಥಾಲಯದ ಪುಸ್ತಕಗಳು ಹಾಗೂ ಅಂತರ್ಜಾಲದಿಂದ ಹುಡುಕಿ ಸಂಗ್ರಹಿಸಿ ಒಂದು ಸುಂದರ ಪ್ರಕಲ್ಪವನ್ನು ತಯಾರಿಸು.

**ಕನ್ನಡದ ವಿವಿಧ ನಿಯತಕಾಲಿಕೆಗಳಲ್ಲಿಯ ಸಾಹಸ ಕಥೆಗಳನ್ನು ಓದು ನಿನಗೆ ಇಷ್ಟವಾದ ಕಥೆಗಳ ಕುರಿತು ಬರೆ.**










**ಸೂಚನೆ: ಮೇಲಿನ ನಿಯತಕಾಲಿಕೆಯನ್ನು ಮಕ್ಕಳಿಗೆ ಓದಲು ಉಪಲಬ್ಧ ಮಾಡಿಕೊಟ್ಟು ಆ ಪುಸ್ತಕಗಳ ಬಗ್ಗೆ ಅವರ ಅಭಿಪ್ರಾಯ ತಿಳಿದುಕೊಳ್ಳಿರಿ.**

*ಪುಸ್ತಕದ / ನಿಯತಕಾಲಿಕೆಯ ಹೆಸರು:- ______________________

*ಇಷ್ಟವಾದ ಸಂಗತಿ:- ______________________

*ಓದಿದ ಕಥೆಯ ಬಗ್ಗೆ ಅಭಿಪ್ರಾಯ:-

ಸವಾಲುಗಳನ್ನು ಎದುರಿಸಿ, ಸಾಹಸಿಗಳಾಗಿ ಬೆಳೆಯಿರಿ

# 15. ಕನ್ನಡದ ಕಣ್ಮಣಿ

ಕನ್ನಡ ರಾಜ್ಯದ ಮಹಾರಾಣಿ
ಕನ್ನಡ ನಾಡಿನ ಕಣ್ಮಣಿ ।
ಆಂಗ್ಲರೊಡನೆ ಹೋರಾಡಿ
ಅರಿಗಳ ತಲೆಯ ಚಂಡಾಡಿ ।
ವೀರವನಿತೆಯಾದಳು ರಾಣಿ ಚೆನ್ನಮ್ಮ ॥ ಪ ॥

ಧೂಳಪ್ಪ ದೇಸಾಯಿ ಕಾಕತಿಯಾವ
ಮಗಳ ಮನದಾಗ ಬಿತ್ತಿದ ದೇಶಪ್ರೇಮ ।
ಕುದುರೆ ಸವಾರಿ ಸಮರ ಶಾಸ್ತ್ರವ ಕಲಿತು
ವೀರವನಿತೆಯಾದಳು ರಾಣಿ ಚೆನ್ನಮ್ಮ ॥ 1 ॥

ಮಲ್ಲಸರ್ಜನನ ಮಡದಿಯಾಗಿ
ಕಿತ್ತೂರಿನ ರಾಜಮಾತೆಯಾಗಿ
ದತ್ತುಪುತ್ರನ ರಕ್ಷಣೆ ರಾಜ್ಯದ ಏಳ್ಗೆಗೆ
ವೀರವನಿತೆಯಾದಳು ರಾಣಿ ಚೆನ್ನಮ್ಮಾ ॥ 2 ॥

ಥ್ಯಾಕರೆ ಕೇಳಿದ ಕಪ್ಪ ಕಾಣಿಕೆ
ರೋಷದಿ ಸಿಡಿದಳು ಕಪ್ಪ ನಿನಗೇಕೆ
ಬಿಳಿಯರ ದಾಳಿಗೆ ಅಂಜದೆ ವೈರಿಗೆ
ವೀರವನಿತೆಯಾದಳು ರಾಣಿ ಚೆನ್ನಮ್ಮಾ ॥ 3 ॥



ಬಲಗೈ ಬಂಟ ನಮ್ಮ ರಾಯಣ್ಣ
ಕಟ್ಟಿದ ಕಲಿಗಳ ಸೈನ್ಯವನ್ನ
ರಾಣಿಗೆ ಜೊತೆಯಾಗಿ ಅರಿಗಳ ತರಿದು
ವೀರವನಿತೆಯಾದಳು ರಾಣಿ ಚೆನ್ನಮ್ಮಾ ॥ 4 ॥

ಚೆನ್ನಮ್ಮಳ ದೇಶಭಕ್ತಿ ರಾಯಣ್ಣನ ಸ್ವಾಮಿಭಕ್ತಿ
ರಣರಂಗ ಫಲಿಸಿತು ಇವರಿಬ್ಬರ ಯುದ್ಧ ನೀತಿ
ಮೊಳಗಿತು ಖಡ್ಗದ ಝೇಂಕಾರ ಎಲ್ಲೆಡೆ ಜಯಕಾರ
ವೀರವನಿತೆಯಾದಳು ರಾಣಿ ಚೆನ್ನಮ್ಮಾ ॥ 5 ॥

## ❖ ನನಗೆ ತಿಳಿದಂತೆ

● **ಕೆಳಗೆ ಕೊಟ್ಟ ಪ್ರಶ್ನೆಗಳಿಗೆ ನಿಖರವಾದ ಉತ್ತರವನ್ನು ಹುಡುಕಿ ಸರಿ ಉತ್ತರಕ್ಕೆ (✓) ಚಿಹ್ನೆ ಹಾಕು.**

1) ಕಿತ್ತೂರು ರಾಜ್ಯದ ಮಹಾರಾಣಿ
(ಅ) ಝಾನ್ಸಿರಾಣಿ ☐
(ಬ) ಚೆನ್ನಮ್ಮಾ ☐
(ಕ) ಅಬ್ಬಕ್ಕದೇವಿ ☐
(ಡ) ಕಾಕತಿಯಾವ ದೇಸಾಯಿ ☐

2) ಕಪ್ಪ ಕಾಣಿಕೆ ಕೇಳಿದವರು
(ಅ) ಬಿಳಿಯರು ☐
(ಬ) ಥ್ಯಾಕರೆ ☐
(ಕ) ಮಲ್ಲಸರ್ಜ ☐
(ಡ) ಧೂಳಪ್ಪ ☐

3) ಬಲಗೈ ಬಂಟ
(ಅ) ರಾಯಣ್ಣ ☐
(ಬ) ಮಲ್ಲಸರ್ಜ ☐
(ಕ) ಥ್ಯಾಕರೆ ☐
(ಡ) ದೇಸಾಯಿ ☐

4) ಚೆನ್ನಮ್ಮಳ ದೇಶಭಕ್ತಿ ರಾಯಣ್ಣನ
(ಅ) ದೇಶಭಕ್ತಿ ☐
(ಬ) ದೇವರ ಭಕ್ತಿ ☐
(ಕ) ಗುರುಭಕ್ತಿ ☐
(ಡ) ಸ್ವಾಮಿಭಕ್ತಿ ☐



## ಹೊಂದಿಸೋಣ ಬಾ :

| (ಅ) | (ಬ) |
|---|---|
| 1) ಕನ್ನಡದ ಕಣ್ಮಣಿ | i) ರಾಯಣ್ಣ |
| 2) ಚೆನ್ನಮ್ಮಳ ಪತಿ | ii) ಧೂಳಪ್ಪ ದೇಸಾಯಿ |
| 3) ಬಲಗೈ ಬಂಟ | iii) ಕಿತ್ತೂರ ರಾಣಿ ಚೆನ್ನಮ್ಮ |
| 4) ಚೆನ್ನಮ್ಮಳ ತಂದೆ | iv) ಮಲ್ಲಸರ್ಜ |

## ಸಾಲುಗಳ ಮೇಲೆ ಚರ್ಚೆ

ಕವಿತೆಯ ಸಾಲುಗಳನ್ನು ಓದಿ ಚರ್ಚಿಸು ಮತ್ತು ಬರೆ.

''ಧೂಳಪ್ಪ ದೇಸಾಯಿ ಕಾಕತಿಯಾವ ಮಗಳ ಮನದಾಗ ಬಿತ್ತಿದ ದೇಶಪ್ರೇಮ ಕುದುರೆ ಸವಾರಿ ಸಮರ ಶಾಸ್ತ್ರವ ಕಲಿತು ವೀರವನಿತೆಯಾದಳು ರಾಣಿ ಚೆನ್ನಮ್ಮಾ''

- **ಯೋಚಿಸಿ ಬರೆ**

1) ಕವಿತೆಯ ಆಶಯವನ್ನು ನಿನ್ನ ಮಾತುಗಳಲ್ಲಿ ಬರೆ.

2) ಚೆನ್ನಮ್ಮಳ ಬಾಲ್ಯ ವಿವರಿಸು.

❖ **ರಚಿಸೋಣ ಬಾ**

ಚಿತ್ರದುರ್ಗದ ಒನಕೆ ಓಬವ್ವಳ ಕುರಿತು ನಾಲ್ಕು ಸಾಲುಗಳ ಕವಿತೆ ರಚಿಸು.

❖ **ಭಾಷೆ ತಿಳಿಯೋಣ ಬಾ**

- **ಕೊಟ್ಟ ಶಬ್ದಗಳ ಲಿಂಗ ಬದಲಿಸಿರಿ**

1) ಮಗಳು 2) ರಾಣಿ 3) ಪತ್ನಿ 4) ಹುಡುಗ 5) ತಾಯಿ

- **ವಾಕ್ಯದಲ್ಲಿಯ ಸರ್ವನಾಮಗಳನ್ನು ಗುರುತಿಸಿ ಬರೆ.**

1) ವೀಣಾ ನಿನ್ನೆ ಶಾಲೆಗೆ ಬಂದಿರಲಿಲ್ಲ ಅವಳ ಆರೋಗ್ಯ ಸರಿ ಇರಲಿಲ್ಲ.

2) ಭಿಕ್ಷುಕನನ್ನು ಕಂಡು ನಾಯಿ ಅವನ ಮೇಲೇರಿತು, ಅದು ಜೋರಾಗಿ ಬೊಗಳತೊಡಗಿತು.

3) ಮಕ್ಕಳು ಸಮೂಹಗೀತೆ ಹಾಡಿದರು ಅವರ ಧ್ವನಿ ಸುಮಧುರವಾಗಿತ್ತು.

❖ **ರಚಿಸೋಣ ಬಾ**

ಕಿತ್ತೂರು ರಾಣಿ ಚೆನ್ನಮ್ಮಳ ಕುರಿತು ಒಂದು ಚಿಕ್ಕ ಪರಿಚ್ಛೇದವನ್ನು ರಚಿಸಿ ಅದಕ್ಕೆ ಆಕರ್ಷಕ ತಲೆಬರಹ ಕೊಡು.

## ನಿನ್ನ ಹುಡುಕಾಟ

1) ಭಾರತದ ವೀರವನಿತೆಯರ ಕುರಿತು ಅಂತರ್ಜಾಲದಲ್ಲಿ ಹುಡುಕಿ ಪಟ್ಟಿ ಮಾಡು.

2) ಭಾರತದ ಪ್ರಸಿದ್ಧ ಮಹಿಳೆಯರ ಚಿತ್ರಗಳನ್ನು ಅಂಟಿಸಿ ಹೆಸರು ಬರೆ.

## ❖ ಅಲಂಕಾರ

### ● ಅಲಂಕಾರ ಎಂದರೇನು?

ಚೆಲುವು, ಸೌಂದರ್ಯ ಹೆಚ್ಚಿಸುವ ಮತ್ತು ಮನವನ್ನು ಆಕರ್ಷಿಸಿಸುವ ಸಾಧನವೆ ಅಲಂಕಾರ. 'ಇದ್ದ ಚೆಲುವಿಕೆ ಎದ್ದು ಕಾಣಬೇಕು, ಮುದ್ದಾಗಿ ತೋರಬೇಕು' ಎಂದು ಪಂಡಿತರೊಬ್ಬರು ಹೇಳಿದ್ದಾರೆ.

ಮನುಷ್ಯ ತಾನು ಸುಂದರವಾಗಿ ಕಾಣಲು ಕೆಲವು ಕೃತಕ ವಸ್ತುಗಳನ್ನು ಬಳಸುತ್ತಾನೆ. ಅದರಂತೆ ತಾನು ಆಡುವಂತಹ ಮಾತಿಗೂ ರಚಿಸುವ ಸಾಹಿತ್ಯಕ್ಕೂ ಅಲಂಕಾರ ಮಾಡುತ್ತಾನೆ. ಶಬ್ದ ಹಾಗೂ ಅರ್ಥಗಳ ಚಮತ್ಕಾರಿಕ ಬಳಕೆಯಿಂದ ಸಾಹಿತ್ಯವನ್ನು ಅಲಂಕರಿಸುತ್ತಾನೆ. ಸಾಹಿತ್ಯದಲ್ಲಿನ ಭಾಷಾಸೌಂದರ್ಯವನ್ನು ಹೆಚ್ಚಿಸುವ ಸಾಧನವೇ ಅಲಂಕಾರ.

**ಅಲಂಕಾರದ ಪ್ರಕಾರಗಳು**

- ಶಬ್ದಾಲಂಕಾರ
- ಅರ್ಥಾಲಂಕಾರ

### 1) ಶಬ್ದಾಲಂಕಾರ :

ಶಬ್ದ ಅಥವಾ ಪದಗಳ ಜೋಡಣೆಯ ಮೂಲಕ ಕಾವ್ಯ ಅಥವಾ ಮಾತಿನ ಸೌಂದರ್ಯ (ಸೊಬಗು) ಹೆಚ್ಚಿದರೆ ಅದನ್ನು ಶಬ್ದಾಲಂಕಾರ ಎನ್ನುವರು. ಇದು ಅಕ್ಷರ ಹಾಗೂ ಶಬ್ದಗಳ ಚಮತ್ಕಾರಿಕ ಜೋಡಣೆಯಿಂದ ಆಗುವುದು. ಇದರಿಂದ ಸಾಹಿತ್ಯದ ಬಾಹ್ಯ ಸೌಂದರ್ಯ ಹೆಚ್ಚುತ್ತದೆ.

**ಶಬ್ದಾಲಂಕಾರದ ಪ್ರಕಾರಗಳು**

- 1) ಅನುಪ್ರಾಸ ಅಲಂಕಾರ
  - ಅ) ವೃತ್ಯಾನುಪ್ರಾಸ ಅಲಂಕಾರ
  - ಬ) ಛೇಕಾನುಪ್ರಾಸ ಅಲಂಕಾರ
- 2) ಯಮಕ ಅಲಂಕಾರ

1) ಅನುಪ್ರಾಸ ಅಲಂಕಾರ :

ಅ) ವೃತ್ಯಾನುಪ್ರಾಸ ಅಲಂಕಾರ:

ಒಂದು ಅಥವಾ ಒಂದಕ್ಕಿಂತ ಹೆಚ್ಚು ವ್ಯಂಜನಾಕ್ಷರಗಳು ಪುನಃ ಪುನಃ ಬಳಸಲ್ಪಟ್ಟಿದ್ದರೆ ಅದನ್ನು ವೃತ್ಯಾನುಪ್ರಾಸ ಅಲಂಕಾರ ಎನ್ನುವರು.

ಉದಾಹರಣೆ: **ಬಲ್ಲವನೇ ಬಲ್ಲ ಬೆಲ್ಲದ ಸವಿಯ.**

ಮೇಲಿನ ವಾಕ್ಯದಲ್ಲಿ 'ಬ' ಮತ್ತು 'ಲ' ಅಕ್ಷರಗಳು ಮೇಲಿಂದ ಮೇಲೆ ಬಳಸಲ್ಪಟ್ಟಿವೆ.

**ಕೊಟ್ಟ ವಾಕ್ಯಗಳಲ್ಲಿ ಪುನಃ ಪುನಃ ಬಳಸಲ್ಪಟ್ಟ ವ್ಯಂಜನಾಕ್ಷರಗಳನ್ನು ಗುರುತಿಸು.**

1) ತುಂಟನಾದವನು ಮಂಟಪದಲ್ಲೂ ತಂಟೆಯ ಬಿಡಲಾರ.
2) ಕತ್ತೆಗೇನು ಗೊತ್ತು ಕಸ್ತೂರಿಯ ಸುವಾಸನೆ.
3) ಬಳೆಗಾರ ಬೊಮ್ಮಯ್ಯ ಬಂದಿಹನು ಬಾಗಿಲಿಗೆ.
4) ಬಸಪ್ಪನ ಮನೆಯಲ್ಲಿ ಬಿಸಿಬಿಸಿ ಗಸಗಸೆ ಪಾಯಸ.
5) ಎಳೆಗಿಳಿಗಳ ಬಳಗಗಳು ನಳನಳಿಸಿ ಬೆಳೆದ ಕಳವೆಯ ಎಳೆಯ ಕಾಳನರಸಿ ಬಂದವು.

# 16. ಐತಿಹಾಸಿಕ ಪಯಣ




**ರಮ್ಯ:** (ಗೊಂದಲದಿಂದ) ಸರ್, ನನ್ನ ಚಿಕ್ಕಪ್ಪ ನ್ಯೂಜಿಲೆಂಡನಲ್ಲಿ ಇದ್ದಾರೆ. ಅವರು ನಾನು ಹೋದ ಪ್ರವಾಸದ ಬಗ್ಗೆ ಫೋಟೋ ಸಮೇತ ಇ-ಮೇಲ್ ಮಾಡು ಅಂದಿದ್ದಾರೆ. ಆದ್ರೆ, ನನಗೆ ಅದು ಹೇಗೆ ಮಾಡೋದು ಅಂತಲೇ ಗೊತ್ತಿಲ್ಲ ಸರ್!

**ಶಿಕ್ಷಕರು:** (ನಗೆಮೊಗದಿಂದ) ಅದಕ್ಕೇನಂತೆ ರಮ್ಯ, ಇವತ್ತು ನಿನಗಷ್ಟೇ ಅಲ್ಲ, ಇಡೀ ತರಗತಿಗೆ ಇ-ಮೇಲ್ ಬಗ್ಗೆ ಹೇಳಿಕೊಡುತ್ತೇನೆ. ಎಲ್ಲರೂ ಇತ್ತ ಗಮನಿಸಿ ...

ನೆನಪಿಡಿ

ಇ-ಮೇಲ್ (E-mail) : ಎಂದರೆ 'ಎಲೆಕ್ಟ್ರಾನಿಕ್ ಮೇಲ್' (Electronic Mail) ಅಥವಾ ಕನ್ನಡದಲ್ಲಿ 'ಇ-ಅಂಚೆ'.

**ವಿಳಾಸ:** ಪತ್ರ ಕಳಿಸಲು ಮನೆಯ ವಿಳಾಸ ಬೇಕಾದಂತೆ, ಇ-ಅಂಚೆಗೆ ಇ-ಮೇಲ್ ಐಡಿ (ID) ಬೇಕು.

**ರಕ್ಷಣೆ:** ನಿಮ್ಮ ಇ-ಮೇಲ್ ಸುರಕ್ಷಿತವಾಗಿರಲು ಗುಪ್ತ ಸಂಕೇತ (Password) ಅವಶ್ಯಕ.

**ಅನುಕೂಲ:** ಕ್ಷಣಮಾತ್ರದಲ್ಲಿ ಪ್ರಪಂಚದ ಯಾವುದೇ ಮೂಲೆಗೆ ಸಂದೇಶ ಮತ್ತು ಫೋಟೋಗಳನ್ನು ಕಳುಹಿಸಬಹುದು.

(ಶಿಕ್ಷಕರು ರಮ್ಯಳ ramyapoojari@gmail.com ಎಂಬ ವಿಳಾಸವನ್ನು ಸಿದ್ಧಪಡಿಸಿಕೊಟ್ಟರು. ರಮ್ಯ ತನ್ನ ಪ್ರವಾಸದ ಅನುಭವಗಳನ್ನು ಹೀಗೆ ಬರೆದಳು...)

ಇಂದ: ramyapoojari@gmail.com ಗೆ

chikkappa123@gmail.com

**ವಿಷಯ:** ನಮ್ಮ ಶಾಲಾ ಪ್ರವಾಸದ ಸುಂದರ ನೆನಪುಗಳು

ಪ್ರೀತಿಯ ಚಿಕ್ಕಪ್ಪನಿಗೆ ನಮಸ್ಕಾರಗಳು,

ನಾನು ಕಳುಹಿಸುತ್ತಿರುವ ಈ ಇ-ಮೇಲ್ ಕೇವಲ ಮಾಹಿತಿಯಲ್ಲ, ನನ್ನ ಪ್ರವಾಸದ ಸವಿನೆನಪುಗಳ ಪೆಟ್ಟಿಗೆ ! ಬಾದಾಮಿಯ ಆ ಬೃಹತ್ ಕೆಂಪು ಕಲ್ಲಿನ ಗುಹೆಗಳ ಮುಂದೆ ನಿಂತಾಗ ನಾನು ಬೆರಗಾದೆ. ಅಬ್ಬಾ! ಅದೆಂತಹ ಕಲಾಕೌಶಲ್ಯ! ಇಂದಿನ ಕಾಲದಲ್ಲಿ ಇರುವಂತಹ ಯಾವುದೇ ಆಧುನಿಕ ಯಂತ್ರಗಳಿಲ್ಲದ ಆ ಕಾಲದಲ್ಲಿ ಕೇವಲ ಉಳಿ-ಸುತ್ತಿಗೆಯಿಂದ ಇಡೀ ಬೆಟ್ಟವನ್ನೇ ಕೊರೆದು ದೇವಾಲಯ ಮಾಡಿದ್ದನ್ನು ನೋಡಿ ನನ್ನ ಮೈ ಜುಮ್ ಎಂದಿತು.

ನನ್ನ ಅನುಭವಗಳ ಕೆಲವು ಕ್ಷಣಗಳು ಇಲ್ಲಿವೆ:

**ನಟರಾಜನ ನೃತ್ಯ:**

ಒಂದನೆಯ ಗುಹೆಯಲ್ಲಿ 18 ಕೈಗಳ ನಟರಾಜನ ಶಿಲ್ಪದ ಮುಂದೆ ನಾನು ಕೂಡ ಅದೇ ಭಂಗಿಯಲ್ಲಿ ನಿಲ್ಲಲು ಪ್ರಯತ್ನಿಸಿದೆ. ನನ್ನ ಗೆಳೆಯರೆಲ್ಲರೂ ನೋಡಿ ನಕ್ಕರು! ಆದರೆ ಆ ಶಿಲ್ಪದಲ್ಲಿರುವ ಜೀವಂತಿಕೆ ಬೇರೆಲ್ಲೂ ನೋಡಲು ಸಾಧ್ಯವಿಲ್ಲ.

**ಅಗಸ್ತ್ಯ ಸರೋವರ:**

ಸಂಜೆ ಸೂರ್ಯ ಮುಳುಗುವ ಸಮಯದಲ್ಲಿ ಅಗಸ್ತ್ಯ ಸರೋವರದ ಮೆಟ್ಟಿಲುಗಳ ಮೇಲೆ ಕುಳಿತುಕೊಂಡೆವು. ನೀರಿನಲ್ಲಿ ಪ್ರತಿಫಲಿಸುವ ಭೂತನಾಥ ದೇವಾಲಯದ ನೋಟವನ್ನು ನೋಡುವುದು ಎಷ್ಟು ಸುಂದರ ಗೊತ್ತೆ? ಆ ತಂಪಾದ ಗಾಳಿ ನನ್ನ ಇಡೀ ದಿನದ ಆಯಾಸವನ್ನು ಹೋಗಲಾಡಿಸಿತು.

**ಐಹೊಳೆ ದೇವಾಲಯಗಳ ತೊಟ್ಟಿಲು :** ಐಹೊಳೆಗೆ ಕಾಲಿಟ್ಟಾಗ ನಾನು ಯಾವುದೋ ಕಲ್ಲಿನ ಲೋಕಕ್ಕೆ ಬಂದೆನೇನೋ ಅನ್ನಿಸಿತು. ಅಲ್ಲಿ ಪ್ರತಿಯೊಂದು ಕಲ್ಲೂ ಒಂದೊಂದು ಕಥೆ ಹೇಳುವಂತಿದೆ. ಅಲ್ಲಿನ 'ಲಾಡಖಾನ' ದೇವಾಲಯದ ಮುಂದೆ ನಿಂತು ಫೋಟೋ ತೆಗೆಸಿಕೊಂಡಾಗ ನಾನು ಇತಿಹಾಸದ ಪುಟದೊಳಗೆ ಹೋಗಿ ಬಂದ ಅನುಭವವಾಯಿತು.

**ಪಟ್ಟದಕಲ್ಲಿನ ಭವ್ಯತೆ :** ಚಿಕ್ಕಪ್ಪ, ಪಟ್ಟದಕಲ್ಲಿನ ಆ ಭವ್ಯ ದೇವಾಲಯಗಳ ಮುಂದೆ ನಿಂತಾಗ ನನಗೆ ಕನ್ನಡ ಗೀತೆಯ ಈ ಪ್ರಸಿದ್ಧ ಸಾಲುಗಳು ಪದೇ ಪದೇ ನೆನಪಾಗುತ್ತಿದ್ದವು :

''ಕೇಳಿಸದೆ ಕಲ್ಲು ಕಲ್ಲಿನಲಿ ಕನ್ನಡ ನುಡಿ ಕನ್ನಡ ನುಡಿ. ಕಾಣಿಸದೆ ಹೊನ್ನ ಚರಿತೆಯಲಿ ಹಂಪೆಯ ಗುಡಿ ಹಂಪೆಯ ಗುಡಿ ವೈಭವದ ತವರು ಕೂಗಿದೆ ಪ್ರೀತಿಸುವ ಹೃದಯ ಬೇಡಿದೆ ಕೇಳು ನೀನು...''

ನಿಜಕ್ಕೂ ಚಿಕ್ಕಪ್ಪ, ಅಲ್ಲಿನ ಪ್ರತಿಯೊಂದು ಕಲ್ಲು ಕೂಡ ಮಾತನಾಡುತ್ತಿರುವಂತೆ ಭಾಸವಾಗುತ್ತಿತ್ತು. ನಾವು ಮೌನವಾಗಿ ನಿಂತು ಕೇಳಿಸಿಕೊಂಡರೆ, ಆ ಶಿಲ್ಪಗಳು ಚಾಲುಕ್ಯರ ವೈಭವದ ಕಥೆಯನ್ನು ನಮಗೆ ಹೇಳುತ್ತಿವೆ ಎಂದು ಅನಿಸಿತು. ಹಂಪೆಯ ಗುಡಿಯಂತೆ ಇಲ್ಲಿನ ಗುಡಿಗಳು ಕೂಡ ನಮ್ಮ 'ಹೊನ್ನ ಚರಿತ್ರೆ'ಗೆ ಸಾಕ್ಷಿಯಾಗಿವೆ. ಈ ವೈಭವವನ್ನು ನೋಡಲು ಕೇವಲ ಕಣ್ಣುಗಳಿದ್ದರೆ ಸಾಲದು, ಅದನ್ನು ಅನುಭವಿಸುವ ಮತ್ತು ಪ್ರೀತಿಸುವ ಹೃದಯವೂ ಬೇಕು ಎಂದು ನನಗೆ ಅನಿಸಿತು. ಇದಲ್ಲದೆ ನಮ್ಮ ಗುರುಗಳು ಪಟ್ಟದಕಲ್ಲು ವಿಶ್ವ ಪರಂಪರೆಗೆ ಸೇರಿದ ತಾಣವಾಗಿದೆ ಎಂದು ಹೇಳುತ್ತಿದ್ದರು.

ಚಿಕ್ಕಪ್ಪ, ಇವೆಲ್ಲವನ್ನೂ ನೋಡುವಾಗ ''ನಮ್ಮ ಕರ್ನಾಟಕದ ಕಲೆ ಎಷ್ಟು ಶ್ರೇಷ್ಠ!'' ಎಂದು ನನಗೆ ಹೆಮ್ಮೆ ಎನಿಸಿತು. ಈ ಇ-ಮೇಲ್ ಜೊತೆಗೆ ನಾನು ತಗೆದುಕೊಂಡ 'ಫೋಟೋ ಕೂಡ ಕಳುಹಿಸಿದ್ದೇನೆ!'

ನೀವೂ ಭಾರತಕ್ಕೆ ಬಂದಾಗ ನಾವು ಜೊತೆಯಾಗಿ ಅಲ್ಲಿಗೆ ಹೋಗೋಣ.

ನಿಮ್ಮ ಮರು ಇ-ಮೇಲ್‌ಗಾಗಿ ಕಾಯುತ್ತಿರುತ್ತೇನೆ.

ಇಂತಿ,

ನಿಮ್ಮ ಪ್ರೀತಿಯ,

ರಮ್ಯ

ಐತಿಹಾಸಿಕ ಪಯಣ.Jpg









## ನನಗೆ ತಿಳಿದಂತೆ

**ಅ) ಕೆಳಗೆ ಕೊಟ್ಟ ಪ್ರಶ್ನೆಗಳ ಸರಿಯಾದ ಉತ್ತರದ ಮುಂದೆ (✓) ಚಿಹ್ನೆ ತೋರಿಸಿ, ಆಯ್ಕೆ ಮಾಡಿದ ಉತ್ತರಗಳ ಕಾರಣ ಕುರಿತು ಗೆಳೆಯರೊಂದಿಗೆ ಚರ್ಚಿಸು.**

**1. ಬಾದಾಮಿ ಯಾವುದಕ್ಕಾಗಿ ಪ್ರಸಿದ್ಧವಾಗಿದೆ?**

| | | | |
|---|---|---|---|
| ಅ) ನದಿಗಳು | ☐ | ಇ) ಕಾಡು | ☐ |
| ಆ) ಗುಹೆಗಳು | ☐ | ಈ) ಬೆಟ್ಟಗಳು | ☐ |

**2. ಇ-ಮೇಲ್ ಪತ್ರಕ್ಕಿಂತ ವೇಗವಾಗಿರುವುದು ಏಕೆ?**

| | | | |
|---|---|---|---|
| ಅ) ಕಾಗದ ಬಳಕೆ | ☐ | ಇ) ಪೋಸ್ಟ್‌ಮ್ಯಾನ್ | ☐ |
| ಆ) ಇಂಟರ್ನೆಟ್ ಬಳಕೆ | ☐ | ಈ) ಲಿಫಾಫೆ | ☐ |

## ಸಾಲುಗಳ ಮೇಲೆ ಚರ್ಚೆ

1) ''ಕೇಳಿಸದೆ ಕಲ್ಲು ಕಲ್ಲಿನಲಿ ಕನ್ನಡ ನುಡಿ... ಕಾಣಿಸದೆ ಹೊನ್ನ ಚರಿತೆಯಲಿ ಹಂಪೆಯ ಗುಡಿ''

2) ಭಾರತ ಸರ್ಕಾರವು 50 ರೂಪಾಯಿ ನೋಟಿನ ಮೇಲೆ ಹಂಪಿಯ ಕಲ್ಲಿನ ರಥದ ಚಿತ್ರವನ್ನು ಏಕೆ ಮುದ್ರಿಸಿದೆ? ಇದರ ಉದ್ದೇಶವೇನು? ಚರ್ಚಿಸಿ






- ಕೆಳಗಿನ ಪದಗಳನ್ನು ಸರಿಯಾದ ಜಾಗದಲ್ಲಿ ಬರೆಯಿರಿ: (ಇಂದ, ಗೆ, ವಿಷಯ, ಕಂಪೋಸ್)

ಅ) ಯಾರು ಪತ್ರ ಕಳುಹಿಸುತ್ತಾರೋ ಅವರ ವಿಳಾಸ: ____________________

ಆ) ಯಾರಿಗೆ ಪತ್ರ ತಲುಪಬೇಕೋ ಅವರ ವಿಳಾಸ: ____________________

ಇ) ಪತ್ರದ ಮುಖ್ಯ ಉದ್ದೇಶ ಅಥವಾ ವಿಷಯ : ____________________

ಈ) ಹೊಸ ಪತ್ರ ಬರೆಯಲು ಒತ್ತಬೇಕಾದ ಬಟನ್ : ____________________

❖ **ರಚಿಸೋಣ ಬಾ.**

ರಮ್ಯಳ ಇ-ಮೇಲ್ ವಿಳಾಸ ramyapujari@gmail.com ಇದೆ. ಅದೇ ರೀತಿ ನಿನ್ನ ಇ-ಮೇಲ್ ವಿಳಾಸ ತಯಾರಿಸಿ ಬರೆ.

- ನಿಮ್ಮ ಸ್ನೇಹಿತರಿಗೆ /ಬಂಧುಗಳಿಗೆ ಸರಿಯಾದ ಮಾದರಿಯಲ್ಲಿ ಇ-ಮೇಲ್ ಬರೆಯಿರಿ.
- ವಿಷಯ: ನನ್ನ ಪ್ರವಾಸದ ಅನುಭವ (8-10 ವಾಕ್ಯಗಳು)

**ನಿನ್ನ ಹುಡುಕಾಟ**

ಅಂತರ್ಜಾಲದ ಸಹಾಯದಿಂದ ಬಾದಾಮಿ ಗುಹೆಗಳ ಚಿತ್ರ ಸಂಗ್ರಹಿಸಿ ವಿವರಣೆ ಬರೆಯಿರಿ

## ಪತ್ರಲೇಖನ

ನಾವು ದಿನನಿತ್ಯ ಅನೇಕರೊಂದಿಗೆ ವಿವಿಧ ರೀತಿಯಲ್ಲಿ ವ್ಯವಹರಿಸುತ್ತೇವೆ. ಇಂತಹ ವ್ಯವಹಾರದ ಮಾಧ್ಯಮಗಳಲ್ಲಿ ಪತ್ರಲೇಖನವೂ ಒಂದು.

### ಪತ್ರ ಲೇಖನದ ಪ್ರಕಾರಗಳು

- ಅನೌಪಚಾರಿಕ ಪತ್ರ (ಖಾಸಗಿ/ಕೌಟುಂಬಿಕ ಪತ್ರ)
- ಔಪಚಾರಿಕ ಪತ್ರ (ವ್ಯವಹಾರಿಕ ಪತ್ರ)
  - ವಿನಂತಿ ಪತ್ರ
  - ದೂರು/ತಕರಾರು ಪತ್ರ
  - ಬೇಡಿಕೆ ಪತ್ರ

### ಅನೌಪಚಾರಿಕ ಪತ್ರ

ಅನೌಪಚಾರಿಕ ಪತ್ರವು ನಮ್ಮ ಆತ್ಮೀಯರು, ಸ್ನೇಹಿತರು, ಕುಟುಂಬದ ಸದಸ್ಯರಿಗೆ ಬರೆಯುವ ಸರಳ ಮತ್ತು ಸ್ನೇಹಭರಿತ ಪತ್ರವಾಗಿದೆ.

**• ಅನೌಪಚಾರಿಕ ಪತ್ರದ ಲಕ್ಷಣಗಳು •**

★ ಸರಳ ಮತ್ತು ಸ್ನೇಹಪೂರ್ಣ ಭಾಷೆ.

★ ಕಟ್ಟುನಿಟ್ಟಾದ ನಿಯಮಗಳಿಲ್ಲ.

★ ಭಾವನೆಗಳು, ಅನುಭವಗಳು, ವೈಯಕ್ತಿಕ ವಿಚಾರಗಳು ಮುಖ್ಯ.

★ ಓದುಗರೊಂದಿಗೆ ಆತ್ಮೀಯತೆ ತೋರಿಸುವ ಶೈಲಿ.

## ಮಾದರಿ ಪತ್ರ

ಶೈಕ್ಷಣಿಕ ಪ್ರವಾಸಕ್ಕಾಗಿ ಹಣ ಕಳುಹಿಸುವಂತೆ ಕೋರಿ ತಂದೆಯವರಿಗೆ ಪತ್ರ.

ಇಂದ,

ರಶ್ಮಿ ರೆಡ್ಡಿ,

ಜಿ.ಪ.ಪ್ರಾಥಮಿಕ ಕನ್ನಡ ಶಾಲೆ,

ಸೋಲಾಪುರ-1.

ದಿನಾಂಕ: 14 ಡಿಸೆಂಬರ್ 2026

ಇವರಿಗೆ,

ವಿಶಾಲ ರೆಡ್ಡಿ

ರಾಯಚೂರು.

ಪೂಜ್ಯ ತಂದೆಯವರಿಗೆ, ನಿಮ್ಮ ಮಗಳು ರಶ್ಮಿ ಮಾಡುವ ಸಾಷ್ಟಾಂಗ ನಮಸ್ಕಾರಗಳು.

ಮನೆಯಲ್ಲಿ ನೀವೆಲ್ಲ ಕ್ಷೇಮವಾಗಿ ಇರುವಿರೆಂದು ಭಾವಿಸುತ್ತೇನೆ. ಇಲ್ಲಿ ನಾನೂ ನನ್ನ ಅಭ್ಯಾಸದೊಂದಿಗೆ ಕ್ಷೇಮವಾಗಿದ್ದೇನೆ.

ನಮ್ಮ ಶಾಲೆಯಲ್ಲಿ ಈಗ ಶೈಕ್ಷಣಿಕ ಪ್ರವಾಸವನ್ನು ಹಮ್ಮಿಕೊಂಡಿದ್ದಾರೆ. ಈ ಪ್ರವಾಸ ಮೂರು ದಿನಗಳದ್ದಾಗಿದೆ. ನಮ್ಮನ್ನು ಬಾದಾಮಿ, ಐಹೊಳೆ, ಪಟ್ಟದಕಲ್ಲು ಮತ್ತು ಮಹಾಕೂಟೇಶ್ವರಕ್ಕೆ ಕರೆದುಕೊಂಡು ಹೋಗುವವರಿದ್ದು ಇದಕ್ಕೆ 3500/- ರೂಪಾಯಿಗಳನ್ನು ತುಂಬಬೇಕು. ನನ್ನ ಸ್ನೇಹಿತೆಯರೆಲ್ಲ ಹೋಗುತ್ತಿದ್ದಾರೆ. ತಾವೂ ಸಹ ನನಗೆ ಪ್ರವಾಸಕ್ಕೆ ಹೋಗಲು ಅನುಮತಿಯೊಂದಿಗೆ ಹಣ ಕಳುಹಿಸಿ ಕೊಡುತ್ತೀರಿ ಎಂದು ನಂಬಿದ್ದೇನೆ.

ಮನೆಯಲ್ಲಿ ಎಲ್ಲ ಹಿರಿಯರಿಗೆ ನನ್ನ ಸಾಷ್ಟಾಂಗ ಪ್ರಣಾಮಗಳು. ತಮ್ಮೆಲ್ಲರ ಯೋಗಕ್ಷೇಮದ ಬಗ್ಗೆ ಪತ್ರ ಬರೆಯಿರಿ.

ಇಂತಿ ನಿಮ್ಮ ಪ್ರೀತಿಯ ಮಗಳು,

ರಶ್ಮಿ

ಇತಿಹಾಸ ತಿಳಿಯೋಣ, ಪರಂಪರೆಯನ್ನು ಕಾಪಾಡೋಣ

# 17. ಸಂದರ್ಶನ

**ಗುರುಗಳು :** ಮಕ್ಕಳೇ, ಭಾರತ ದೇಶ ಕೃಷಿ ಪ್ರಧಾನ ದೇಶವಾಗಿದೆ. ರೈತರು ನಮ್ಮ ದೇಶದ ಬೆನ್ನೆಲುಬು. ಅವರು ಶ್ರಮಿಸಿ ಆಹಾರ ಧಾನ್ಯಗಳನ್ನು ಬೆಳೆಸಿ ನಮ್ಮ ಹಸಿವನ್ನು ತಣಿಸುತ್ತಾರೆ. ಇಂದಿನ ಕಾಲದಲ್ಲಿ ಕೆಲವು ರೈತರು ಹೊಸ ತಂತ್ರಜ್ಞಾನ, ವೈಜ್ಞಾನಿಕ ವಿಧಾನಗಳು ಮತ್ತು ಸರಕಾರದ ಯೋಜನೆಗಳನ್ನು ಬಳಸಿಕೊಂಡು ಹೆಚ್ಚಿನ ಉತ್ಪಾದನೆ ಪಡೆಯುತ್ತಿದ್ದಾರೆ. ಇಂತಹ ರೈತರನ್ನೇ ಪ್ರಗತಿಪರ ರೈತರೆಂದು ಗುರುತಿಸಿ ಅವರನ್ನು ಸರಕಾರ ಸನ್ಮಾನಿಸುತ್ತದೆ. ನಮ್ಮ ಊರಿನ ನಾರಾಯಣಗೌಡರು ಈ ವರ್ಷದ 'ಪ್ರಗತಿಪರ ರೈತ'ರೆಂಬ ಸನ್ಮಾನಕ್ಕೆ ಪಾತ್ರರಾಗಿದ್ದಾರೆ. ಇಂದು ಅವರು ನಮ್ಮ ಶಾಲೆಗೆ ಬಂದಿದ್ದಾರೆ.

**ಸೌರಭ :** ಗುರುಗಳೇ, ಅವರು ನಮ್ಮ ಶಾಲೆಗೆ ಏಕೆ ಬಂದಿದ್ದಾರೆ?

**ಗುರುಗಳು :** ಏಕೆಂದರೆ ನಾವು ಅವರ ಸಂದರ್ಶನ ಮಾಡಿ ಅವರ ಕೆಲಸ ಕಾರ್ಯಗಳ ಬಗ್ಗೆ ತಿಳಿದುಕೊಂಡು ಮಾರ್ಗದರ್ಶನ ಪಡೆಯುವವರಿದ್ದೇವೆ.

**ಅಸ್ಮಿತಾ :** ಗುರುಗಳೇ, ಅವರ ಸಂದರ್ಶನವನ್ನು ಯಾರು ಮಾಡುತ್ತಾರೆ?

**ಗುರುಗಳು:** ಸರಿಯಾದ ಪ್ರಶ್ನೆ, ಅವರ ಸಂದರ್ಶನವನ್ನು ನಮ್ಮ ವರ್ಗದ ಸಾಹಿಲ್ ಮತ್ತು ನಿಧಿ ಮಾಡುತ್ತಾರೆ.

**ಮಕ್ಕಳು :** ಸರಿ ಗುರುಗಳೆ.

(ಅಷ್ಟರಲ್ಲಿ ನಾರಾಯಣಗೌಡರು ಅಲ್ಲಿಗೆ ಬಂದರು. ಎಲ್ಲರೂ ಸೇರಿ ಅವರನ್ನು ಸ್ವಾಗತಿಸಿ ಸಂದರ್ಶನವನ್ನು ಆರಂಭಿಸಿದರು)

**ಸಾಹಿಲ್ :** ನಮಸ್ಕಾರ, ನಾರಾಯಣಗೌಡರೇ ನಿಮಗೆ ನಮ್ಮ ಶಾಲೆಗೆ ಸ್ವಾಗತ. ನೀವು ಈ ವರ್ಷದ 'ಪ್ರಗತಿಪರ ರೈತ' ಪುರಸ್ಕಾರ



ಪಡೆದಿದ್ದೀರಿ. ಅದಕ್ಕಾಗಿ ನಿಮಗೆ ತುಂಬು ಹೃದಯದ ಅಭಿನಂದನೆಗಳು.

**ಗೌಡರು :** ನಮಸ್ಕಾರ ಮಕ್ಕಳೇ, ಹಾಗೂ ಧನ್ಯವಾದಗಳು.

**ನಿಧಿ :** ಗೌಡರೇ ತಾವು ಎಷ್ಟು ವರ್ಷಗಳಿಂದ ಒಕ್ಕಲುತನವನ್ನು ಮಾಡುತ್ತಿದ್ದೀರಿ?

**ಗೌಡರು :** ನಾನು 15 ವರ್ಷಗಳಿಂದ ಒಕ್ಕಲುತನ ಮಾಡುತ್ತಿದ್ದೇನೆ. ನನ್ನ ತಂದೆಯವರಿಂದ ಈ ವೃತ್ತಿಯನ್ನು ಕಲಿತೆ.

**ಸಾಹಿಲ್ :** ನಿಮ್ಮ ಜಮೀನಿನಲ್ಲಿ ಯಾವ ಯಾವ ಬೆಳೆಗಳನ್ನು ಬೆಳೆಯುತ್ತೀರಿ?

**ಗೌಡರು :** ಅಕ್ಕಿ, ರಾಗಿ, ಮೆಕ್ಕೆಜೋಳ (ಗೋವಿನ ಜೋಳ) ಹಾಗೂ ವಿವಿಧ ತರಕಾರಿಗಳನ್ನು ಬೆಳೆಸುತ್ತೇನೆ. ಜೊತೆಗೆ ಮಾವು ಮತ್ತು ಸೀತಾಫಲದ ತೋಟವಿದೆ.

**ನಿಧಿ :** ನೀವು ಯಾವ ಹೊಸ ವಿಧಾನಗಳನ್ನು ಅನುಸರಿಸುತ್ತೀರಿ?

**ಗೌಡರು :** ನಾನು ಹನಿ ನೀರಾವರಿ, ತುಷಾರ ಸಿಂಚನ ವಿಧಾನ, ಸಾವಯವ ಗೊಬ್ಬರ ತಯಾರಿಸಿ ಬಳಸುತ್ತೇನೆ. ಟ್ರ್ಯಾಕ್ಟರ್ ಮತ್ತು ಇತರ ಯಂತ್ರೋಪಕರಣಗಳನ್ನು ಉಪಯೋಗಿಸುತ್ತೇನೆ.

**ಸಾಹಿಲ್:** ಸಾವಯವ ಕೃಷಿಯ ಪ್ರಯೋಜನವೇನು?

**ಗೌಡರು :** ಸಾವಯವ ಕೃಷಿಯಿಂದ ಮಣ್ಣಿನ ಸತ್ವ ಹೆಚ್ಚುತ್ತದೆ. ಆರೋಗ್ಯಕರ ಆಹಾರ ಸಿಗುತ್ತದೆ. ಪರಿಸರಕ್ಕೂ ಹಾನಿಯಾಗುವುದಿಲ್ಲ.

**ನಿಧಿ :** ನಿಮಗೆ ಎದುರಾಗುವ ಸಮಸ್ಯೆಗಳು ಯಾವುವು?

**ಗೌಡರು :** ಅನಿಶ್ಚಿತ ಮಳೆ, ಕೀಟಕಗಳ ಹಾವಳಿ, ಬೆಳೆ ರೋಗಗಳು, ಮಾರುಕಟ್ಟೆ ಬೆಲೆ ಏರುಪೇರು ಇವು ಪ್ರಮುಖ ಸವಾಲುಗಳು.

**ಸಾಹಿಲ್ :** ನೀವು ಈ ಸಮಸ್ಯೆಗಳನ್ನು ಹೇಗೆ ಎದುರಿಸುತ್ತೀರಿ?

**ಗೌಡರು :** ಮಳೆಯ ನೀರು ಸಂಗ್ರಹಣೆ ಮಾಡುತ್ತೇನೆ, ಬೆಳೆ ವಿಮೆ ಮಾಡಿಸುತ್ತೇನೆ. ಕೃಷಿ ಇಲಾಖೆಯ ಸಲಹೆ ಪಡೆಯುತ್ತೇನೆ.

**ನಿಧಿ :** ವಿದ್ಯಾರ್ಥಿಗಳಿಗೆ ನಿಮ್ಮ ಸಂದೇಶ ಏನು?

**ಗೌಡರು :** ಇಂದಿನ ಕೃಷಿ ವಿಜ್ಞಾನಾಧಾರಿತವಾದ ವೃತ್ತಿ. ನೀವು ಕೃಷಿಯನ್ನು ಗೌರವಿಸಿ, ಹೊಸ ತಂತ್ರಜ್ಞಾನಗಳನ್ನು ಅಳವಡಿಸಿ ಅಭಿವೃದ್ಧಿಗೆ ಕೈಜೋಡಿಸಬೇಕು.

**ಸಾಹಿಲ್ :** ಗೌಡರೇ ಇಂದು ನೀವು ನಮಗೆ ಒಕ್ಕಲುತನದ ಕುರಿತು ಅನೇಕ ಮಾಹಿತಿ ಹಾಗೂ ನಿಮ್ಮ ಅನುಭವ ಹಂಚಿಕೊಂಡಿರುವಿರಿ. ನಮಗೆ ಮಾರ್ಗದರ್ಶನ ಕೂಡ ಮಾಡಿರುವಿರಿ, ಅದಕ್ಕಾಗಿ ತುಂಬು ಹೃದಯದ ಧನ್ಯವಾದಗಳು.

**ನಿಧಿ :** ನಮಗೆ ನಿಮ್ಮ ಬಗ್ಗೆ ತುಂಬಾ ಅಭಿಮಾನವಿದೆ. ನಿಮ್ಮನ್ನು ಭೇಟಿಯಾಗಿ ನಮಗೆ ತುಂಬಾ ಸಂತೋಷವಾಯಿತು.

**ಗೌಡರು :** ಧನ್ಯವಾದಗಳು ಮಕ್ಕಳೇ, ನನಗೂ ನಿಮ್ಮೊಂದಿಗೆ ಕಾಲ ಕಳೆದು ಆನಂದವಾಯಿತು. (ಗುರುಗಳು ಗೌಡರಿಗೆ ಧನ್ಯವಾದಗಳನ್ನು ಹೇಳಿ ಅವರನ್ನು ಬೀಳ್ಕೊಟ್ಟರು)

❖ **ವಿಶೇಷ ವಿಚಾರ :**

ಪ್ರಗತಿಪರ – ಹೊಸ ವಿಧಾನಗಳನ್ನು ಅನುಸರಿಸುವ

ಸಾವಯವ ಕೃಷಿ – ರಾಸಾಯನಿಕ ರಹಿತ ಕೃಷಿ

ಸಿಂಚನ – ಬೆಳೆಗಳಿಗೆ ನೀರು ಒದಗಿಸುವ ವಿಧಾನ

ಸಂಗ್ರಹಣೆ – ಒಟ್ಟು ಗೂಡಿಸುವುದು

❖ **ನನಗೆ ತಿಳಿದಂತೆ :**

- **ಯೋಗ್ಯ ಪರ್ಯಾಯ ಆರಿಸಿ ಅದರ ಮುಂದೆ ನಕ್ಷತ್ರ (★) ದ ಗುರುತು ಹಾಕು. ಅದರಂತೆ ಅದೇ ಉತ್ತರ ಆಯ್ಕೆ ಮಾಡಲು ಕಾರಣವೇನೆಂದು ಗೆಳೆಯರೊಂದಿಗೆ ಚರ್ಚಿಸು.**

**1) ಹನಿ ನೀರಾವರಿ ಎಂದರೆ:**

ಅ) ಹೆಚ್ಚು ನೀರು ಬಳಸುವುದು. ☐

ಬ) ಬೆಳೆಗಳಿಗೆ ಅಗತ್ಯವಿರುವಷ್ಟು ನೀರು ನೀಡುವುದು. ☐

ಕ) ಕಡಿಮೆ ನೀರು ಬಳಸುವುದು. ☐

ಡ) ನೀರನ್ನು ಹನಿ ಹನಿಯಾಗಿ ಚೆಲ್ಲುವುದು. ☐

**2) ಸಾವಯವ ಗೊಬ್ಬರ ಎಂದರೆ :**

ಅ) ರಾಸಾಯನಿಕ ಗೊಬ್ಬರ ☐

ಬ) ಸಾವಕಾಶವಾಗಿ ತಯಾರಿಸಿದ ಗೊಬ್ಬರ. ☐

ಕ) ಪ್ರಕೃತಿಯ ಪದಾರ್ಥಗಳಿಂದ ತಯಾರಿಸಿದ ಗೊಬ್ಬರ. ☐

ಡ) ಎಲೆಗಳಿಂದ ತಯಾರಿಸಿದ ಗೊಬ್ಬರ. ☐

**3) ನಾರಾಯಣ ಗೌಡರ ಸಂದರ್ಶನ ಮಾಡಿದವರು :**

ಅ) ಸೌರಭ–ಅಸ್ಮಿತಾ ☐ ಬ) ಅಸ್ಮಿತಾ –ನಿಧಿ ☐

ಕ) ನಿಧಿ–ಸೌರಭ ☐ ಡ) ಸಾಹಿಲ್–ನಿಧಿ ☐

**ಹೊಂದಿಸೋಣ ಬಾ :**

| ಅ | ಬ |
|---|---|
| 1) ರೈತ | ಅ) ಕೃಷಿ ಪ್ರಧಾನ ದೇಶ |
| 2) ಭಾರತ | ಬ) ದೇಶದ ಅಭಿವೃದ್ಧಿಗೆ ಕೈಜೋಡಿಸಬೇಕು |
| 3) ನಾರಾಯಣಗೌಡರು | ಕ) ದೇಶದ ಬೆನ್ನೆಲುಬು |
| 4) ಕೃಷಿ | ಡ) ಪ್ರಗತಿಪರ ರೈತ |
| 5) ಹೊಸ ಆಲೋಚನೆ ಕಲಿತು | ಇ) ವಿಜ್ಞಾನಾಧಾರಿತ ವೃತ್ತಿ |

## ಸಾಲುಗಳ ಮೇಲೆ ಚರ್ಚೆ :

1) ರೈತರು ನಮ್ಮ ದೇಶದ ಬೆನ್ನೆಲುಬು. ಅವರು ಶ್ರಮಿಸಿ ಆಹಾರ ಧಾನ್ಯಗಳನ್ನು ಬೆಳೆಸಿ, ನಮ್ಮ ಹಸಿವನ್ನು ತಣಿಸುತ್ತಾರೆ.

2) ಮಳೆಯ ನೀರು ಸಂಗ್ರಹಣೆ ಮಾಡುತ್ತೇನೆ. ಬೆಳೆ ವಿಮೆ ಮಾಡಿಸುತ್ತೇನೆ. ಕೃಷಿ ಇಲಾಖೆಯ ಸಲಹೆ ಪಡೆಯುತ್ತೇನೆ.

## ಯೋಚಿಸಿ ಬರೆ :

1) 'ಪ್ರಗತಿಪರ ರೈತ' ರೆಂಬ ಸನ್ಮಾನಕ್ಕೆ ಯಾರು ಪಾತ್ರರಾಗುತ್ತಾರೆ?

2) ನಾರಾಯಣಗೌಡರನ್ನು ಶಾಲೆಗೆ ಏಕೆ ಕರೆಸಿದ್ದರು?

3) ರೈತರ ಮುಂದಿರುವ ಸವಾಲುಗಳು ಯಾವವು?

4) ಇಂದಿನ ರೈತರು ಆಧುನಿಕ ಒಕ್ಕಲುತನದ ಸಲುವಾಗಿ ಯಾವ ಸಾಧನಗಳನ್ನು ಬಳಸುತ್ತಾರೆ?

5) ರಾಸಾಯನಿಕ ಗೊಬ್ಬರ – ಸಾವಯವ ಗೊಬ್ಬರ ಇವುಗಳಲ್ಲಿನ ವ್ಯತ್ಯಾಸ ಬರೆ.

❖ **ರಚಿಸೋಣ ಬಾ :**

**'ರೈತ ದೇಶದ ಬೆನ್ನೆಲುಬು'** ಈ ವಿಚಾರ ಕುರಿತು ವರ್ಣನಾತ್ಮಕ ನಿಬಂಧ ಬರೆ.

❖ **ತಿಳಿಯೋಣ ಬಾ:**

# ಪ್ರಗತಿಪರ ರೈತಮಹಿಳೆ ಕವಿತಾ ಯಶೋಗಾಥೆ..

## ಪ್ರತಿ ರೈತರಿಗೂ ಪ್ರೇರಣೆ

**ಪ್ರಗತಿಪರ ರೈತಮಹಿಳೆ ಕವಿತಾ ಮಿಶ್ರಾ :**

ಕವಿತಾ ಮಿಶ್ರಾ ಇವರು ವೃತ್ತಿಯಲ್ಲಿ ಮಾಹಿತಿ ತಂತ್ರಜ್ಞಾನದ ಇಂಜಿನೀಯರ್ ಆಗಿದ್ದಾರೆ. ಮಾನಸಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಾರೆ. ಇನ್ಫೋಸಿಸ್ ಸಂಸ್ಥೆಯಲ್ಲಿನ ಉದ್ಯೋಗವನ್ನು ನಿರಾಕರಿಸಿ ಕೃಷಿ ಕ್ಷೇತ್ರದ ಕಡೆಗೆ ಒಲವು ತೋರಿಸಿದರು. ಕೃಷಿಯಲ್ಲಿನ ಆಸಕ್ತಿಯಿಂದಾಗಿ ಬಂಜರು ಭೂಮಿಯನ್ನುಫಲವತ್ತಾದ ಭೂಮಿಯನ್ನಾಗಿ ಪರಿವರ್ತಿಸಿದ ಯಶಸ್ವಿ ರೈತ ಮಹಿಳೆ ಎನಿಸಿಕೊಂಡರು. ಎಂಟು ಎಕರೆ ಕಲ್ಲು ಭೂಮಿಯಲ್ಲಿ ಸಾವಿರಾರು ಶ್ರೀಗಂಧದ ಮರಗಳು, ಮಾವು, ಸೀಬೆ, ಸೀತಾಫಲ, ಪೇರಲ, ನುಗ್ಗೆಕಾಯಿ, ನೆಲ್ಲಿಕಾಯಿ ಹೀಗೆ ವಿವಿಧ ಬೆಳೆಗಳನ್ನು ಬೆಳೆದು ತೋಟಗಾರಿಕೆ, ಅರಣ್ಯ ಕೃಷಿ ಮಾಡಿದ್ದಾರೆ. ಆಧುನಿಕ ತಂತ್ರಜ್ಞಾನ, ಹನಿ ನೀರಾವರಿ ಮತ್ತು ಸಾವಯವ ಕೃಷಿ ಪದ್ಧತಿಯ ಮೂಲಕ ಬಂಜರ ಭೂಮಿಯನ್ನು ಕೃಷಿಯೋಗ್ಯ ಮಾಡಿದ್ದಾರೆ. ಪಶು ಸಂಗೋಪನೆ, ಹೈನುಗಾರಿಕೆ, ಕೃಷಿ, ತೋಟಗಾರಿಕೆ ಮಾಡುತ್ತಾ



ವರ್ಷಕ್ಕೆ ಲಕ್ಷಾಂತರ ರೂಪಾಯಿ ಆದಾಯ ಗಳಿಸುವ ಮಾರ್ಗ ತೋರಿಸಿಕೊಟ್ಟಿದ್ದಾರೆ. ಇದರಿಂದ ಅವರು ಇತರ ಮಹಿಳೆಯರಿಗೆ ಮಾದರಿಯಾಗಿದ್ದಾರೆ. ಕವಿತಾ ಮಿಶ್ರಾ ಅವರ ಈ ಸಾಧನೆಯಿಂದ ಅವರಿಗೆ ಅನೇಕ ರಾಜ್ಯ ರಾಷ್ಟ್ರ ಪ್ರಶಸ್ತಿಗಳು ದೊರೆತಿವೆ. ಇಂದಿನ ಮಹಿಳೆಯರಿಗೆ, ಯುವಕರಿಗೆ ಕವಿತಾ ಮಿಶ್ರಾ ಅವರು ಒಂದು ದಿವ್ಯ ಪ್ರೇರಣೆ.

❖ **ಭಾಷೆ ತಿಳಿಯೋಣ ಬಾ :**

**ಅ) ಕೊಟ್ಟ ಶಬ್ದಗಳನ್ನು ಬಳಸಿ ಅರ್ಥಪೂರ್ಣ ವಾಕ್ಯವನ್ನು ರಚಿಸು.**

1) ಬೆನ್ನೆಲುಬು : ______________________

2) ಸನ್ಮಾನ : ______________________

3) ಆರೋಗ್ಯಕರ : ______________________

4) ಸಂಗ್ರಹಣೆ : ______________________

**ಆ) ಕೊಡದಲ್ಲಿ ಕೊಟ್ಟ ಶಬ್ದಗಳನ್ನು ಪ್ರತ್ಯಯಯುಕ್ತ ಮತ್ತು ಉಪಸರ್ಗಯುಕ್ತ ಶಬ್ದಗಳಾಗಿ ವಿಂಗಡಿಸಿ ಬರೆ.**




- **ಕೆಳಗಿನ ಸಮಾಸ ಬಿಡಿಸಿ**

1) ಪ್ರಗತಿಯ +ಪರ = -------- = ತತ್ಪುರುಷ ಸಮಾಸ.

2) -------- + ಎಲುಬು = ಬೆನ್ನೆಲುಬು = --------.

**ನಿನ್ನ ಹುಡುಕಾಟ :**

1) ಅಂತರ್ಜಾಲದಲ್ಲಿ ಕವಿತಾ ಮಿಶ್ರಾ ಅವರ ಸಂದರ್ಶನವನ್ನು ಹುಡುಕಾಡಿ ಅದನ್ನು ನೋಡಿ ಬರೆದುಕೊಂಡು ಬಂದು ವರ್ಗದಲ್ಲಿ ಸಾದರಪಡಿಸು.

2) ನಿಮ್ಮ ಪರಿಸರದಲ್ಲಿ ಇರುವ ಅಂಗಡಿಕಾರ,ಚಿಕ್ಕ ಉದ್ಯಮಿ, ಬಡಿಗ, ಸ್ವಚ್ಛತಾ ಕಾರ್ಮಿಕ ಇವರಲ್ಲಿ ಯಾರಾದರೂ ಒಬ್ಬರ ಸಂದರ್ಶನ ಮಾಡಿ ಅದನ್ನು ಬರೆ.

- **ಹೊಲದಲ್ಲಿ ಬೆಳೆಯುವ ಬೆಳೆಗಳ ಪಟ್ಟಿ ಮಾಡಿರಿ.**

------------------------

------------------------

------------------------

**1) ಛೇಕಾನುಪ್ರಾಸ ಅಲಂಕಾರ :**

ಎರಡು ಅಥವಾ ಎರಡಕ್ಕಿಂತ ಹೆಚ್ಚು ವ್ಯಂಜನಾಕ್ಷರಗಳಿರುವ ಶಬ್ದವು ಪುನಃ ಪುನಃ ಬಂದಿದ್ದರೆ ಅದನ್ನು ಛೇಕಾನುಪ್ರಾಸ ಅಲಂಕಾರ ಎನ್ನುವರು.

ಮಾಡಿ ಮಾಡಿ ಕೆಟ್ಟರು ಮನವಿಲ್ಲದೆ **ನೀಡಿ ನೀಡಿ** ಕೆಟ್ಟರು ನಿಜವಿಲ್ಲದೆ.

**ಉದಾಹರಣೆ:** ಮೇಲಿನ ಪದ್ಯದ ಸಾಲುಗಳಲ್ಲಿ **'ಮಾಡಿ ಮಾಡಿ'** ಹಾಗೂ **'ನೀಡಿ ನೀಡಿ'**ಎಂಬ ಪದಗಳು ಪುನರಾವರ್ತಿತಗೊಂಡಿವೆ.

**ಹಾಡಿ ಹಾಡಿ ರಾಗ ಬಂತು**

**ಉಗುಳಿ ಉಗುಳಿ** ರೋಗ ಬಂತು.

**2) ಯಮಕ ಅಲಂಕಾರ :**

ಮೂರು ಅಥವಾ ಹೆಚ್ಚು ಅಕ್ಷರಗಳಿರುವ ಪದಗಳಾಗಲಿ, ಪದಭಾಗವಾಗಲಿ ಒಂದು ಪದ್ಯದ ಆದಿಯಲ್ಲಿ, ಮಧ್ಯದಲ್ಲಿ ಇಲ್ಲವೇ ಅಂತ್ಯದಲ್ಲಿ ಹೀಗೆ ನಿಯತ (ನಿರ್ದಿಷ್ಟ) ಸ್ಥಾನದಲ್ಲಿ ಬಂದಿದ್ದರೆ ಅದು ಯಮಕ ಅಲಂಕಾರ ಎನಿಸುವುದು.

**ಉದಾಹರಣೆ:** **ನುಡಿದರೆ** ಮುತ್ತಿನ ಹಾರದಂತಿರಬೇಕು.

**ನುಡಿದರೆ** ಮಾಣಿಕ್ಯದ ದೀಪ್ತಿಯಂತಿರಬೇಕು.

**ನುಡಿದರೆ** ಸ್ಫಟಿಕದ ಸಲಾಕೆಯಂತಿರಬೇಕು.

ಮೇಲಿನ ವಚನದಲ್ಲಿ ನುಡಿದರೆ ಎಂಬ ಪದವು ವಚನದ ಆದಿಯಲ್ಲಿ ನಿಯಮಿತವಾಗಿ ಉಪಯೋಗಿಸಲ್ಪಟ್ಟಿದೆ.

**ಜ್ಞಾನಿಗಳು** ತಾವಾದ ಬಳಿಕ ವಿಶ್ವಾಸ ಘಾತವ ಮಾಡಬಾರದು.

**ಜ್ಞಾನಿಗಳು** ತಾವಾದ ಬಳಿಕ ಪರದೂಷಣೆ ಮಾಡಬಾರದು.

**ಜ್ಞಾನಿಗಳು** ತಾವಾದ ಬಳಿಕ ಪರದ್ರವ್ಯವನು ಅಪಹರಿಸಬಾರದು.




❖ **ಮೇಲಿನ ಜಾಹೀರಾತನ್ನು ಓದಿ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ನೀಡಿ:**

1. ಜಾಹೀರಾತಿನ ಮುಖ್ಯ ಶೀರ್ಷಿಕೆ ಯಾವುದು?

___

2. ಶಿಬಿರವು ಯಾವ ತಿಂಗಳಲ್ಲಿ ನಡೆಯುತ್ತದೆ?

___

3. ಶಿಬಿರದಲ್ಲಿ ಕಲಿಸುವ ಯಾವುದಾದರೂ ಎರಡು ಕಲಾತ್ಮಕ ಚಟುವಟಿಕೆಗಳನ್ನು ಹೆಸರಿಸಿ.

i) ___ ii) ___

4. ಶಿಬಿರದ ಒಟ್ಟು ಅವಧಿ ಎಷ್ಟು ದಿನಗಳು?

___

5. ಶಿಬಿರದಲ್ಲಿ ಭಾಗವಹಿಸಲು ಪ್ರವೇಶ ಶುಲ್ಕ ಇದೆಯೇ? ಇದ್ದರೆ ಎಷ್ಟು?

___

6. ಶಿಬಿರವು ಯಾವ ಶಾಲೆಯಲ್ಲಿ ನಡೆಯುತ್ತದೆ?

___

ತಂತ್ರಜ್ಞಾನ ಬಳಸಿ, ಕೃಷಿಯಲ್ಲಿ ಯಶಸ್ಸು ಗಳಿಸಿ

# 18. ಬಣ್ಣ ಬಯಲಾಯಿತು

ಒಂದು ದಿನ ನರಿಯು ಆಹಾರವನ್ನು ಹುಡುಕುತ್ತ ಹುಡುಕುತ್ತ ಕಾಡಿನಿಂದ ಊರಿಗೆ ಬಂದಿತು. ಊರಿನಲ್ಲಿ ತಿರುಗಾಡುತ್ತಿರುವಾಗ ಊರಲ್ಲಿಯ ನಾಯಿಗಳು ನರಿಯನ್ನು **ಬೆನ್ನಟ್ಟಿದವು**. ಎಲ್ಲ ನಾಯಿಗಳು ನರಿಯನ್ನು ಕಚ್ಚಲು ಪ್ರಾರಂಭಿಸಿದವು ನರಿಗೆ **ದಿಕ್ಕು ತೋಚದಂತಾಗಿ**



ಅಲ್ಲಿಂದ **ಕಾಲಿಗೆ ಬುದ್ಧಿ ಹೇಳಿತು**. ಅದು ಓಡುತ್ತ ಓಡುತ್ತ ಬಟ್ಟೆಗೆ ಬಣ್ಣ ಮಾಡುವವನ ಮನೆಯಲ್ಲಿ ಸೇರಿತು. ಅವನು ಒಂದು ದೊಡ್ಡ ಪಾತ್ರೆಯಲ್ಲಿ ಬಣ್ಣವನ್ನು ತಯಾರಿಸಿದ್ದನು. ನರಿಯು ಆ ಪಾತ್ರೆಗೆ ಬಿದ್ದಿತು. ಆಗ ಅದರ ಮೈಯೆಲ್ಲ ನೀಲಿ ಬಣ್ಣವಾಯಿತು ಅಲ್ಲಿಂದ ಎದ್ದು ಪುನಃ ಓಡುವಷ್ಟರಲ್ಲಿ ಬೆನ್ನು ಹತ್ತಿದ ನಾಯಿಗಳು ಇದು ಯಾವುದೋ ಒಂದು ಬೇರೆ ಪ್ರಾಣಿ ಇರಬಹುದು ಎಂದು ಊಹಿಸಿ ಅಲ್ಲಿಂದ ನಾಯಿಗಳು ಭಯಭೀತವಾಗಿ **ಪಲಾಯನ ಮಾಡಿದವು**. ನರಿಗೆ ಆಶ್ಚರ್ಯವಾಯಿತು. ಹಾಗೂ ಹೀಗೂ ನರಿಯು ತನ್ನ ಕಾಡನ್ನು ಸೇರಿತು ಕಾಡಿನಲ್ಲಿರುವ ಪ್ರಾಣಿಗಳು ಆಶ್ಚರ್ಯದಿಂದ ಈ ನೀಲಿ ಬಣ್ಣದ ಪ್ರಾಣಿಯನ್ನು ನೋಡಿ ಹೆದರಿ ದೂರ ದೂರ ಓಡಿ ಹೋಗತೊಡಗಿದವು. ಆಗ ಅವುಗಳನ್ನು ತಡೆದು ನರಿಯು ಹೇಳಿತು, ''ನಾನು ಬೇರೆ ಲೋಕದಿಂದ ಬಂದಿದ್ದೇನೆ, ಇಲ್ಲಿಯ ಕಾಡಿಗೆ ನಾನೇ ಮಹಾರಾಜನಾಗಬೇಕು ಎಂದು ನನ್ನನ್ನು ಕಳಿಸಿದ್ದಾರೆ'' ಎಂಬ **ಕಟ್ಟುಕಥೆ** ಹೇಳಿತು. ನಾನು ಈ ಕಾಡಿನ ರಾಜ ನೀವೆಲ್ಲರೂ ಒಪ್ಪಿಕೊಳ್ಳಬೇಕೆಂದು **ಎದೆತಟ್ಟಿ ಹೇಳಿತು**. ಆಗ ಎಲ್ಲ ಪ್ರಾಣಿಗಳು ಒಪ್ಪಿಕೊಂಡು ರಾಜನ ಆಜ್ಞೆಯನ್ನು ಪಾಲಿಸಲು ತಯಾರಾದವು ಮತ್ತು ಅದರ **ತಾಳಕ್ಕೆ ಹೆಜ್ಜೆ** ಹಾಕಿದವು. ನರಿಗೆ ತನ್ನ **ಬಣ್ಣ ಬಯಲಾಗ**ಬಾರದೆಂದು ಎಲ್ಲ ನರಿಗಳನ್ನು ಕಾಡಿನ ಆಚೆ ಹಾಕಿತು. ಉಳಿದ ಎಲ್ಲ ಪ್ರಾಣಿಗಳ ಮೇಲೆ ರಾಜನಾಗಿ ಮೆರೆಯ ಹತ್ತಿತು. ಎಲ್ಲ ಪ್ರಾಣಿಗಳು ಈ ನೀಲಿ ಬಣ್ಣದ ಪ್ರಾಣಿಯನ್ನು ರಾಜನೆಂದು



ಒಪ್ಪಿಕೊಂಡು ಅದಕ್ಕೆ ಆಹಾರದ ಉಪಲಬ್ಧತೆಯನ್ನು ಮಾಡಿಕೊಡುತ್ತಿದ್ದವು. ಹೀಗೆ ತುಂಬಾ ದಿನ ಕಳೆದ ಮೇಲೆ ಒಂದು ದಿನ ಎಲ್ಲ ಪ್ರಾಣಿಗಳ ಸಭೆ ಕೂಡಿದಾಗ

ದೂರದಲ್ಲಿರುವ ಒಂದು ನರಿಯು ವೂ..... ವೂ..... ಎಂದು ಕೂಗಿತು. ಈ ನೀಲಿ ನರಿಯು ಆ ಧ್ವನಿ ಕೇಳಿ ತಾನು ಕೂಡ ತಕ್ಷಣ ವೂ...... ವೂ...... ಎಂದು ಕೂಗಿತು. ಆಗ ಎಲ್ಲ ಪ್ರಾಣಿಗಳಿಗೆ ಇದು ನರಿ ಎಂದು ಗೊತ್ತಾಯ್ತು. ಈ ನರಿ ನಮಗೆ ಮೋಸ ಮಾಡಿದೆ ಎಂದು ಗೊತ್ತಾಗಿ **ಕಿಡಿಕಾರಿದವು**. ಎಲ್ಲ ಪ್ರಾಣಿಗಳು ಕೂಡಿ ನರಿಯನ್ನು ಶಿಕ್ಷಿಸಲು **ಬೆನ್ನಟ್ಟಿದವು**. ಆಗ ನೀಲಿ ಬಣ್ಣದ ನರಿ ಉಳಿದ ಪ್ರಾಣಿಗಳಿಗೆ ಕ್ಷಮೆಗಾಗಿ **ಕೈಯೊಡ್ಡಿತು**. ಆಗ ಅವು ''ಮಾಡಿದ್ದುಣ್ಣೋ ಮಹಾರಾಯ'' ಎಂದು ಹೇಳಿ **ಗಂಟುಮೂಟೆ ಕಟ್ಟಲು** ಹೇಳಿದವು. ಆಗ ನರಿಗೆ ತನ್ನ ತಪ್ಪಿನ ಅರಿವಾಗಿ ಕಾಡಿನಿಂದ **ಕಂಬಿ ಕೀಳಿತು**.



### ❖ ನನಗೆ ತಿಳಿದಂತೆ

ಪಡೆನುಡಿಯ ಅರ್ಥವನ್ನು ಹುಡುಕಿ ಸರಿಯಾದ ಉತ್ತರಕ್ಕೆ ಗೋಲು ಹಾಕು.

**1) ಕಿಡಿ ಕಾರು**

1) ಕಿಡಿದಾದ ಕಾರು 3) ಬೆಂಕಿ ಹಚ್ಚು 3) ಸಿಟ್ಟಾಗು 4) ಕಾಡಿನಲ್ಲಿರು

**2) ಬಣ್ಣ ಬಯಲಾಗು**

1) ಬಣ್ಣ ಹಚ್ಚು 2) ತಿಳಿಯದಂತಾಗು 3) ನಿಜ ಗೊತ್ತಾಗು 4) ಬಣ್ಣಿಸು

**3) ಕಿವಿ ಊದು**

1) ಕಿವಿಯಲ್ಲಿ ಊದು 2) ಚಾಡಿ ಹೇಳು 3) ಕಿವಿ ಹಿಂಡು 4) ಕಿವಿಯಲ್ಲಿ ಹವೆ ತುಂಬು

**4) ಪಲಾಯನ ಮಾಡು**

1) ಪಾಲು ಮಾಡು 2) ಓಡಿ ಹೋಗು 3) ಸುದ್ದಿ ಮುಟ್ಟಿಸು 4) ಪಾಲು ಕೇಳು

### ಹೊಂದಿಸೋಣ ಬಾ.

| | |
|---|---|
| 1. ಕಲ್ಲು ಹಾಕು | ಅ) ಆಧಾರವಿಲ್ಲದ ಮಾತು |
| 2. ಟೋಪಿ ಹಾಕು | ಬ) ಕಾಡು, ಪೀಡಿಸು |
| 3. ತಲೆ ತಿನ್ನು | ಕ) ಮೋಸ ಮಾಡು |
| 4. ಗಾಳಿಮಾತು | ಡ) ತೊಂದರೆ ಉಂಟು ಮಾಡು |

### ಸಾಲುಗಳ ಮೇಲೆ ಚರ್ಚೆ

1. ನರಿಗೆ ದಿಕ್ಕು ತೋಚದಂತಾಗಿ ಅಲ್ಲಿಂದ ಕಾಲಿಗೆ ಬುದ್ಧಿ ಹೇಳಿತು.
2. ''ನಾನು ಬೇರೆ ಲೋಕದಿಂದ ಬಂದಿದ್ದೇನೆ. ಇಲ್ಲಿಯ ಕಾಡಿಗೆ ನಾನೇ ಮಹಾರಾಜನಾಗಬೇಕು ಎಂದು ನನ್ನನ್ನು ಕಳಿಸಿದ್ದಾರೆ'' ಎಂಬ ಕಟ್ಟು ಕಥೆ ಹೇಳಿತು

## ಯೋಚಿಸಿ ಬರೆ.

1. ನರಿಯು ಊರಿನಲ್ಲಿ ಏಕೆ ಬಂದಿತು?
2. ನೀಲಿ ನರಿಯ ಬಣ್ಣವು ಹೇಗೆ ಬಯಲಾಯಿತು?
3. ನರಿಗೆ ಗಂಟುಮೂಟೆ ಕಟ್ಟಲು ಏಕೆ ಹೇಳಿರಬಹುದು?

## ❖ ಭಾಷೆ ತಿಳಿಯೋಣ ಬಾ

**ಕೊಟ್ಟ ಪರ್ಯಾಯಗಳಲ್ಲಿ ಪಡೆನುಡಿ ಗುರುತಿಸು.**

ಅ) 1. ಕಾಲಿಗೆ ಬುದ್ಧಿ ಹೇಳು 2) ಹಾಡು 3) ಊಟ ಮಾಡು 4) ಗೊತ್ತಾಗು

ಬ) 1) ಕಾಲೆತ್ತು 2) ಕೈಯೊಡ್ಡು 3)ನೀರು ಬೇಡು 4) ಕೆಲಸ ಮಾಡು

- **ಗೆರೆ ಹೊಡೆದ ಪದದ ಬದಲಾಗಿ ಕಂಸದಲ್ಲಿಯ ಪಡೆನುಡಿಗಳನ್ನು ಉಪಯೋಗಿಸಿ ವಾಕ್ಯ ತಯಾರಿಸು.**

(ಪಲಾಯನ ಮಾಡು, ದಿಕ್ಕು ತೋಚದಂತಾಗು, ಬೆನ್ನಟ್ಟು)

1. ರಾಮ ಜೇನಿನ ಗೂಡಿಗೆ ಕಲ್ಲೆಸೆದಾಗ ಜೇನುನೊಣಗಳು ಅವನ <u>ಬೆನ್ನು ಹತ್ತಿದವು</u>.
2. ರಣಾಂಗಣದಲ್ಲಿ ಸಂಗೊಳ್ಳಿ ರಾಯಣ್ಣನು ಹೋರಾಡುವುದನ್ನು ನೋಡಿ ವಿರೋಧಿಗಳು <u>ಓಡಿ ಹೋದರು</u>.
3. ಆಕಸ್ಮಿಕವಾಗಿ ಆದ ಭೂಕಂಪದಿಂದಾಗಿ <u>ಎಲ್ಲಿ ಹೋಗಬೇಕೆಂದು ತಿಳಿಯಲಿಲ್ಲ</u>.

- **ಪದಬಂಧ**

ಕೆಳಗಿನ ಅಕ್ಷರಗಳನ್ನು ಯೋಗ್ಯ ಚೌಕಟ್ಟಿನಲ್ಲಿ ತುಂಬಿ ಪಡೆನುಡಿ ಪೂರ್ಣಗೊಳಿಸು.

(ಅ, ಡು, ಬೆ, ಕೈ, ಗು, ರೆ, ರು, ಳು)

| | | | | | | | | | | |
|---|---|---|---|---|---|---|---|---|---|---|
| ★ | ★ | ★ | ★ | ★ | ಬೆ | ★ | ★ | ★ | ★ | ★ |
| ---- | ಳಿ | ಲು | ಸೇ | ವೆ | ನ್ನು | ಹು | ★ | ---- | ಮೀ | ರು |
| ಗ್ನಿ | ★ | ★ | ★ | ★ | ಬೀ | ಳಿ | ★ | ಚಾ | ★ | ★ |
| ಪ | ಕ | ಣ್ಣೆ | ಗೆ | ಬೀ | ---- | ಹಿಂ | ಟ್ಟು | ಚು | ★ | ★ |
| ರೀ | ★ | ★ | ಕಿ | ವಿ | ಹಿಂ | ---- | ನ್ನ | ★ | ★ | ★ |
| ಕ್ಷೆ | ★ | ★ | ಮ್ಮೈ | ★ | ನಿ | ★ | ---- | ನ್ನು | ತ | ಟ್ಟು |
| ★ | ★ | ★ | ಮ | ★ | ಜ | ★ | ನ್ನು | ★ | ಕೆಂ | ★ |
| ಹೊ | ಟ್ಟೆ | ಹೊ | ---- | ★ | ಗೊ | ★ | ಹ | ★ | ಡ | ★ |
| ★ | ★ | ★ | ★ | ★ | ತ್ತಾ | ★ | ತ್ತು | ★ | ಕಾ | ★ |
| ಭ | ಯ | ಭೀ | ತ | ನಾ | ---- | ★ | ಬೇ | ರೂ | ---- | ★ |

## ನಿನ್ನ ಹುಡುಕಾಟ

1) ಗ್ರಂಥಾಲಯದ ಪುಸ್ತಕದಿಂದ ಕೆಲವು ಗಾದೆ ಮಾತುಗಳು ಮತ್ತು ಅವುಗಳ ಅರ್ಥ ಸಂಗ್ರಹಿಸಿ ಬರೆ.
2) ನೀವು ನಿಮ್ಮ ಪರಿಸರದಲ್ಲಿ ಎಲ್ಲೆಲ್ಲಿ ಗಾದೆ ಮಾತುಗಳನ್ನು ಬರೆದಿರುವುದನ್ನು ನೋಡಿದ್ದೀರಿ?

**ತಪ್ಪು ಮಾಡಿದವ ತಪ್ಪಿಸಿಕೊಳ್ಳಲಾರ**

# 19. ಭವ್ಯ ಭಾರತ

ವೀರಧೀರರಾಳಿದ ಭವ್ಯ ಭಾರತ ನಮ್ಮ ಭಾರತ
ಶಾಂತಿ ಸ್ನೇಹ ಸೌಹಾರ್ದ ಇಲ್ಲಿ ಸಂತತ ॥ ಪ ॥

ಉತ್ತರದಲಿ ಹಿಮಾಲಯವು ನಮಗೆ ಕಾವಲು
ಉಳಿದ ಕಡೆಗಳಲಿ ನಮಗೆ ಕಡಲು ಕಾವಲು
ವೈರಿ ಪಡೆಗಳ ಹಿಂದೆ ಮೆಟ್ಟುವ
ವಿಜಯ ಪಥದಿ ಅಡಿಗಳಿಟ್ಟು ಕಲಿಗಳಾಗುವ ॥ 1 ॥

ಲಕ್ಷ್ಮೀಬಾಯಿ ಚೆನ್ನಮ್ಮರ ವೀರ ಸಂತತಿ
ಬುದ್ಧ ಬಸವ ಚೈತನ್ಯರ ಪುಣ್ಯ ಸಂತತಿ
ಕಲೆಯು ಸಾವಿರ ಚೆಲುವಿನಾಗರ
ಈ ಮಣ್ಣ ಕಣಕಣವು ಸ್ವರ್ಗ ಸುಂದರ ॥ 2 ॥

ಧಮನಿ ಧಮನಿಯಲ್ಲಿ ದೇಶಪ್ರೇಮ ಮಿಡಿಯಲಿ
ಭಾರತೀಯರೆಂಬ ಹೆಮ್ಮೆ ನಮ್ಮದಾಗಲಿ
ಭಾರತಾಂಬೆಗೆ ನಾವು ನಮಿಸುವ
ಸತ್ಯಮೇವ ಜಯತೆ ಎಂದು ಜಗಕೆ ಸಾರುವ ॥ 3 ॥

ಕೆ. ರಾಜಕುಮಾರ





# ಶಬ್ದಕೋಶ

(ಅ)

ಅರ್ಚನೆ -(ಸಂ)(ನಾ)ಪೂಜೆ, ಸನ್ಮಾನ.

ಅತಿಥಿ -(ನಾ) ಆಮಂತ್ರಣವನ್ನು ಪಡೆದು ಅಥವಾ ಪಡೆಯದೆಯೇ ಬಂದ ಗೌರವಸ್ಥ.

ಅದ್ಭುತ -(ನಾ)ನವರಸಗಳಲ್ಲಿ ಒಂದು,(ಗು ಅತ್ಯಾಶ್ಚರ್ಯ ಕರವಾದ.

ಅನಕ್ಷರಸ್ಥ-(ನಾ) ಅಶಿಕ್ಷಿತ, ಅಕ್ಷರಜ್ಞಾನವಿಲ್ಲದವ.

ಅನಾಥ -(ನಾ) ದಿಕ್ಕಿಲ್ಲದ.

ಅರ್ಪಣೆ-(ಸಂ)(ನಾ) ಕಾಣಿಕೆ, ಕೊಡುವಿಕೆ, ಒಪ್ಪಿಸುವಿಕೆ.

ಅಭಿಪ್ರಾಯ-(ನಾ)ಆಶಯ, ತಾತ್ಪರ್ಯ, ಮತ.

ಅರಿ-(ನಾ) ಶತ್ರು, ಕತ್ತರಿಸು, ತಿಳಿ, ಗ್ರಹಿಸು.

ಅಂಶತಃ(ನಾ)ಭಾಗ, ಘಟಕ, ವಿವರ.

ಅಸೂಯೆ-(ನಾ) ಹೊಟ್ಟೆಕಿಚ್ಚು.

(ಆ)

ಆಜ್ಞೆ -(ಆ) ಅಪ್ಪಣೆ.

(ಉ)

ಉದಯ-(ನಾ) ಹುಟ್ಟು, ಅಭಿವೃದ್ಧಿ.

ಉದ್ದಿಮೆ-(ನಾ) ಉದ್ಯೋಗ, ಕೈಗಾರಿಕೆ.

ಉಪಲಬ್ಧ-(ಗು) ದೊರೆತ.

ಉರುಟು-(ಗು)ಒರಟಾದ, (ನಾ) ಗುಂಡಾಗಿರುವಿಕೆ, (ಕ್ರಿ) ಉರುಳಿಸು.

(ಏ)

ಏರ್ಪಾಡು- ವ್ಯವಸ್ಥೆ,ಸಿದ್ಧತೆ.

ಏರುಪೇರು- ಹಳ್ಳತಿಟ್ಟು, ತಗ್ಗು, ತಗ್ಗುದಿನ್ನೆ, ಹೆಚ್ಚು ಕಡಿಮೆ, ತಕ್ಕಡಿಯ ತೂಕ ಸಮ ಇಲ್ಲದಿರುವಿಕೆ.

(ಐ)

ಐತಿಹಾಸಿಕ -(ಉ)ಚಾರಿತ್ರಿಕ.

(ಒ)

ಒಡನಾಟ-(ನಾ)ಸಹವಾಸ, ಜೊತೆಯಲ್ಲಿರುವಿಕೆ.

ಒಪ್ಪಿಗೆ- ಅನುಮತಿ.

ಒಯ್ಯಾರ-(ನಾ) ಸೊಗಡು, ಬೆಡಗು.

ಒಳಿತು-(ನಾ) ಒಳ್ಳೆಯದು, ಶ್ರೇಷ್ಠ.

(ಕ)

ಕಕ್ಕಾಬಿಕ್ಕಿ-(ನಾ) ದಿಗ್ಭ್ರಮೆ

ಕಣ್ಮಣಿ-(ನಾ) ಕಣ್ಣುಗುಡ್ಡೆ,ಅಚ್ಚುಮೆಚ್ಚಿನ, ಪ್ರೀತಿಪಾತ್ರವಾದ.

ಕಣ್ಮರೆಯಾಗು-(ಕ್ರಿ) ಕಣ್ಣಿಗೆ ಕಾಣದಂತಾಗು, ಅದೃಶ್ಯವಾಗು.

ಕಂಬಿಕೀಳು-(ಕ್ರಿ)ಓಡಿಹೋಗು, ಪಲಾಯನಮಾಡು.

ಕಲಿ-(ನಾ) ವೀರ, ಕಲಿಪುರುಷ, ಅರಿತುಕೊಳ್ಳು, ತಿಳಿ, ಅಭ್ಯಾಸ ಮಾಡು.

ಕೃಷಿ- ಒಕ್ಕಲುತನ, ಬೇಸಾಯ.

ಕಾಡು-(ನಾ) ಕಾಂತಾರ, ಅಡವಿ, ವಿಪಿನ, ಅನಾಗರಿಕವಾದ, ಪೀಡಿಸು.

ಕಾಂಚನ-(ನಾ)ಚಿನ್ನ, ಹೇಮ, ಬಂಗಾರ, ಸುವರ್ಣ, ಕನಕ.

ಕೂಟ-(ನಾ) ಸೇರಿಕೆ,ರಾಶಿ,ಸಂಘ,ಬಿಡಿಸಲಾಗದ ಕಗ್ಗಂಟು.

ಕೇಡು-(ನಾ) ಆಪತ್ತು, ನಾಶ.

ಕೊಂಬೆ-(ನಾ)ಟೊಂಗೆ, ರೆಂಬೆ.

(ಗ)

ಗಗನಯಾತ್ರಿ-(ನಾ) ಆಕಾಶ ಪ್ರಯಾಣ ಮಾಡುವವ.

ಗಾಳಿ-(ನಾ) ವಾಯು, ಪವನ, ಹವೆ, ಮಾರುತ, ಸಮೀರ

ಗಿರಿಗಿಟಿ-(ನಾ) ಗಾಳಿಗೆ ತಿರುಗುವ ಆಟದ ಚಕ್ರ

ಗುರಾಣಿ-(ನಾ)ಆಯುಧದ ಏಟು ತಪ್ಪಿಸಲು

ಅಡ್ಡಹಿಡಿಯುವ ಸಾಧನ, ಢಾಲು.

(ಘ)

ಘೋಷಿಸು-(ಕ್ರಿ)ಗಟ್ಟಿಯಾಗಿ ಕೂಗು, ಸಾರು, ಡಂಗುರಹೊಡೆ, ಪ್ರಚಾರ ಮಾಡು, ಪ್ರಸಾರ ಮಾಡು.

(ಚ)

ಚಾಮರ-(ನಾ)ಚಮರಿಮೃಗದ ಕೂದಲುಗಳಿಂದ ಮಾಡಿದ ಬೀಸಣಿಕೆ.

ಚಿತ್ತಾರ-(ನಾ)ಚಿತ್ರ.

ಚಿಮ್ಮಟಿಗೆ-(ನಾ)ಇಕ್ಕಳ.

(ಜ)

ಜಗಳ-(ನಾ) ಕಲಹ, ಹೋರಾಟ.

ಜನನಿ-(ನಾ)ಹೆತ್ತವಳು, ತಾಯಿ, ಅಮ್ಮ, ಅವ್ವ.

ಜನಪ್ರಿಯ-(ನಾ) ಜನರ ಪ್ರೀತಿಗೆ ಪಾತ್ರವಾಗಿರುವಿಕೆ.

ಜನಾಂಗ-(ನಾ) ಒಂದು ದೇಶಕ್ಕೆ ಅಥವಾ ಪಂಗಡಕ್ಕೆ ಸೇರಿದ ಜನತೆ.

ಜೈವ-ಜೀವಿ.

(ತ)

ತಲ್ಲಣ-(ನಾ)ಹೆದರಿಕೆ, ತಳಮಳ.

ತಂಡ-(ನಾ)ಗುಂಪು, ಪಕ್ಷ.

ತಾಪಮಾನ-(ನಾ)ಉಷ್ಣತೆ.

ತಾಳಕ್ಕೆಹೆಜ್ಜೆ ಹಾಕು- ಹೇಳಿದಂತೆ ವರ್ತಿಸು, ಹೇಳಿದಂತೆ ಕುಣಿ.

ತಾರಕ-(ಗು)ಪಾರುಮಾಡುವವ, ಉದ್ದಾರ ಮಾರ್ಗ

ತುಷಾರ-(ನಾ)ಹಿಮ, ತುಂತುರು ಹನಿ ಸಿಂಪಡಿಸುವಿಕೆ.

(ದ)

ದಟ್ಟಣೆ-(ನಾ) ಒತ್ತೊತ್ತಾಗಿರುವಿಕೆ, ನಿಬಿಡತೆ.

ದಾಖಲೆ-(ನಾ)ರುಜುವಾತು, ಆಧಾರವಾದ ಕಾಗದ ಪತ್ರ.

ದಿಕ್ಕುತೋಚದಿರು-ಏನೂ ತಿಳಿಯದಂತಾಗು.

ದಿನಕರ-(ನಾ) ಸೂರ್ಯ,ರವಿ,ಭಾನು,ಅರುಣ,ಉದಯ.

ದ್ವಿದಳ ಧಾನ್ಯ-(ನಾ) ಎರಡು ದಳಗಳುಳ್ಳ ಅವರೆ, ಉದ್ದು, ಹೆಸರು ಕಾಳುಗಳು.

ದುರ್ದೈವ-(ನಾ) ಕೆಟ್ಟಸ್ಥಿತಿ.

ದುರಸ್ತಿ-(ನಾ) ಸರಿಪಡಿಸುವಿಕೆ, ರಿಪೇರಿ.

ದೂರವಾಣಿ-(ನಾ) ವಿದ್ಯುತ್ ಶಕ್ತಿಯ ಮೂಲಕ ಧ್ವನಿಯನ್ನು ಮುಖ್ಯವಾಗಿ ಮಾತುಗಳನ್ನು ಸಾಗಿಸುವ ಸಲಕರಣೆ

ದ್ವೇಷ -(ನಾ) ವೈರ.

(ಧ)

ಧರಿಸು-(ಕ್ರಿ)ತೊಡು, ಹಾಕಿಕೊಳ್ಳು. ಉಟ್ಟುಕೊಳ್ಳು.

ಧೊಪ್ಪನೆ-(ಕ್ರಿ) ಜೋರಾಗಿ ಅಪ್ಪಳಿಸು.

(ನ)

ನಕಲು-(ನಾ)ಪ್ರತಿ.

ನಭ-(ನಾ)ಆಕಾಶ, ಗಗನ,ಆಗಸ,ಮುಗಿಲು.

ನಾರಿ-(ನಾ)ವನಿತೆ,ಹೆಂಗಸು.

ನಿತ್ಯ-(ನಾ) ಪ್ರತಿದಿನ, ಶಾಶ್ವತ,ಯಾವಾಗಲೂ, ಸದಾ.

ನಿನಾದ-(ನಾ) ನಾದ, ಧ್ವನಿ, ಸ್ವರ.

ನಿಬ್ಬೆರಗಾಗು-(ನಾ)ಅತ್ಯಾಶ್ಚರ್ಯವಾಗು.

ನಿರ್ವಹಣೆ -(ಕ್ರಿ)ಹೊಣೆಗಾರಿಕೆ, ಕೆಲಸವನ್ನು ನೆರವೇರಿಸು.

ನಿ:ಶಬ್ದ(-ನಾ) ಸದ್ದಿಲ್ಲದಿರುವಿಕೆ,ಮೌನ

ನಿಷ್ಕರುಣೆ-(ಗ)ಕ್ರೂರ, ಉಗ್ರ, ದಯೆಯಿಲ್ಲದ.

(ಪ)

ಪಶು-(ನಾ)ಹಸು, ಆಕಳು, ದನ.

ಪರದಾಟ-(ನಾ)ತೊಳಲಾಟ, ಬವಣೆಪಡುವಿಕೆ.

ಪರಸ್ಪರ-(ಅ)ತಮ್ಮತಮ್ಮಲ್ಲಿ, ಅನ್ಯೋನ್ಯ.

ಪರ್ಯಂತ-(ಅ)ವರೆಗೆ, ತನಕ.

ಪ್ರಗತಿಶೀಲ-(ನಾ)ಏಳಿಗೆ ಹೊಂದಿದ, ಮುನ್ನಡೆ ಪಡೆದ.

ಪ್ರಜ್ವಲ-(ಗು)ಹೊಳೆಯುವ.

ಪ್ರತಿಭೆ-(ನಾ)ಹೊಳಪು, ವಿಶೇಷ.

ಪಾಳು-(ನಾ)ಹಾಳು, ಬೀಳುಬಿದ್ದ, ಬಂಜರುನೆಲ, ಕೆಟ್ಟದ್ದು, ಬರಿದಾದ.

ಪುರಸ್ಕಾರ-ಸನ್ಮಾನ, ಗೌರವ, ಒಪ್ಪಿಗೆ, ಬಹುಮಾನ.

ಪೈಪೋಟಿ-(ನಾ) ಸ್ಪರ್ಧೆ, ಮೇಲಾಟ.

ಪೊರೆ-(ನಾ) ರಕ್ಷಣೆ, ಸಲುಹು, ಸಮೀಪ.

ಪೋಕರಿ-(ನಾ)ಪೋಲಿ, ತುಂಟ.

### (ಫ)

ಫಲಿತಾಂಶ -(ನಾ) ಫಲಿತ, ಪರಿಣಾಮ, ಕೈಗೂಡಿದ, ಫಲಸಹಿತವಾದ.

### (ಬ)

ಬಣ್ಣಬಯಲಾಗು- ಸ್ವಭಾವ ಅಥವಾ ಧೋರಣೆಯನ್ನು ಬದಲಿಸುವ, ಒಂದೊಂದು ಸಲ ಒಂದೊಂದು ತೆರನಾಗಿ.

ಬಳುವಳಿ-(ನಾ) ಉಡುಗೊರೆ, ಕೊಡುಗೆ.

ಬಾಂದಳ-(ನಾ) ಆಕಾಶ, ಗಗನ, ನಭ, ಆಗಸ.

ಬೆತ್ತ-(ನಾ )ಸಣ್ಣಬಿದಿರು,ಬಳುಕುವ ಕಡ್ಡಿ, ವೇತ್ರ.

ಬೆನ್ನಟ್ಟು- ಹಿಂಬಾಲಿಸು, ಕಾಡು.

ಬೆನ್ನೆಲುಬು-(ನಾ) ಬೆನ್ನುಮೂಳೆ, ಕಶೇರು, ಆಧಾರ.

ಬೇರೂರು-(ಕ್ರಿ) ತೆರವಾಗಿ ನೆಲೆಸು, ತಳವೂರು.

ಬೋಜ್ಯ-(ನಾ) ಸವಿಯೂಟ, ಭಜಿಸಲು ಯೋಗ್ಯವಾದ.

### (ಭ)

ಭಕ್ಷ -(ನಾ) ತಿಂಡಿ,ಲಾಡು, ಹೋಳಿಗೆ, ಸಿಹಿ ತಿಂಡಿ.

ಭಾತೃತ್ವ -(ನಾ) ಒಡಹುಟ್ಟಿದವನು, ಸಹೋದರತ್ವ

### (ಮ)

ಮಜ್ಜನ-(ನಾ)ಸ್ನಾನ, ಜಳಕ.

ಮಡದಿ-(ನಾ) ಹೆಂಡತಿ, ಪತ್ನಿ

ಮಾರ್ಗದರ್ಶಕ- ಸರಿಯಾದ ಮಾರ್ಗದಲ್ಲಿ ನಡೆಯುವಂತೆ ಪ್ರೇರೇಪಿಸುವವ, ಸಲಹೆ ನೀಡುವವ.

ಮಾರ್ಮಿಕ-(ಗು)ಮನಸ್ಸಿಗೆತಾಗುವ, ಅಂತರಂಗಸ್ಪರ್ಶಿಯಾದ

ಮುಕುಟ-(ನಾ)ಕಿರೀಟ.

ಮೇರು-(ನಾ) ಒಂದು ಪರ್ವತದ ಹೆಸರು, ಶ್ರೇಷ್ಠವಾದದ್ದು.

### (ಯ)

ಯಾನ-(ನಾ) ಸಂಚಾರ ವಾಹನ, ಪಾತ್ರ,ದೋಣಿ, ನೌಕೆ.

### (ರ)

ರಂಜಕ-(ಗು)ಸಂತೋಷಗೊಳಿಸುವ, ಬಣ್ಣಹಾಕಿದ ಒಂದು ಅಲೋಹ ಮೂಲ.

ರಕ್ಷಣೆ-(ನಾ)ಕಾಪಾಡುವಿಕೆ.

ರಿಂಗಣ-(ನಾ) ಒಂದು ಬಗೆಯ ಕುಣಿತ, ನರ್ತನ.

ರೋಚಕ - ಮನಸೆಳೆಯುವ.

### (ಲ)

ಲೇಪನ-(ನಾ)ಲೇಪ

### (ವ)

ವನಿತೆ-(ನಾ)ನಾರಿ, ಹೆಂಗಸು.

ವೃತ್ತಾಕಾರ-ವರ್ತುಳ, ಗುಂಡಾದ, ಗುಂಡಗಿನ, ಬಳಸಿದ.

ವ್ಯಂಜನ-(ನಾ)ಅಭಿವ್ಯಕ್ತಿ, ನಂಜಿಕೊಳ್ಳುವ ಪದಾರ್ಥ, ಪರಿಕರ, ಕನ್ನಡದಲ್ಲಿ' ಕ'ಕಾ ರದಿಂದ ಹಿಡಿದು ಳ' ಕಾರದ ವರೆಗಿನ ಅಕ್ಷರಗಳ ಸಮೂಹ.

ವಾಡಿಕೆ-(ನಾ)ಸಂಪ್ರದಾಯ, ಪದ್ಧತಿ.

ವಾತ್ಸಲ್ಯ-(ನಾ)ಮಮತೆ, ಪ್ರೀತಿ.

ವಿಪುಲ-(ಗು)ದೊಡ್ಡ, ಬಹಳ.

ವೈಶಾಲ್ಯ-(ನಾ)ವಿಸ್ತಾರ, ಹರವು.

### (ಶ)

ಶಂಖವಾದನ-ಶಂಖ ಊದುವುದು.

ಶ್ರಮ-(ನಾ)ದಣಿವು, ಆಯಾಸ, ಕಷ್ಟ, ತೊಂದರೆ.

ಶಾಸ್ತ್ರ-(ನಾ)ಸಂಪ್ರದಾಯ,ನಿಯಮ, ವಿಜ್ಞಾನ, ಮತಗಳ ಬಗೆಗೆ ಬರೆದ ಗ್ರಂಥ.

ಶ್ರೇಷ್ಠ-(ನಾ)ಉತ್ತಮವಾದುದು.

ಶ್ರೋತೃ-(ನಾ)ಕೇಳುವವನು.

**(ಸ)**

ಸಕಲ-(ನಾ)ಎಲ್ಲವನ್ನು ತಿಳಿದವನು, (ಗು) ಸಂಪೂರ್ಣ, ಸಮಗ್ರ.

ಸಡಗರ-(ನಾ) ಉತ್ಸಾಹ, ಸಂಭ್ರಮ.

ಸತ್ವ-(ನಾ) ಇರುವಿಕೆ, ಸಾರ,ಜೀವಿ,ಬಲ, ಪ್ರಜ್ಞೆ.

ಸಮರ-(ನಾ) ಯುದ್ಧ,ಕದನ, ಹೋರಾಟ.

ಸಲಹು-(ಕ್ರಿ) ಕಾಪಾಡು, ರಕ್ಷಿಸು.

ಸ್ಮರಣೆ-(ನಾ) ನೆನಪು,ಧ್ಯಾನ.

ಸಮುದಾಯ-(ನಾ) ಗುಂಪು, ಸಮೂಹ.

ಸಂದರ್ಶನ-(ನಾ)ನೋಡುವುದು,ಆಯ್ಕೆಗಾಗಿಭೇಟಿ, ಮಾಧ್ಯಮಗಳ ಮೂಲಕ ವಿಚಾರ ವಿನಿಮಯ ಮಾಡುವುದು.

ಸಂದೇಶ-(ನಾ) ಸುದ್ದಿ, ನಿರೂಪಕ, ಮಹಾತ್ಮರ ಹೇಳಿಕೆ.

ಸಂಶಯ-(ನಾ)ಅನುಮಾನ, ಶಂಕೆ,ಸಂದೇಹ.

ಸಾವಯವ-(ನಾ) ಅವಯವಗಳಿಂದ ಕೂಡಿದ ಗೊಬ್ಬರ.

ಸಾಂಪ್ರದಾಯಿಕ-(ಗು) ಸಂಪ್ರದಾಯಕ್ಕೆ ಅನುಸಾರವಾದ.

ಸುಮ-(ನಾ)ಹೂವು, ಪುಷ್ಪ, ಕುಸುಮ, ಅಲರು.

ಸುಪ್ರಭಾತ-(ನಾ) ಸುಂದರವಾದ ಅರುಣೋದಯ, ಮುಂಜಾವದಲ್ಲಿ ಹಾಡುವ ಸ್ತೋತ್ರ.

ಸುಯ್ಯನೆ-(ಗು) ಗಾಳಿಯ ಶಬ್ದ.

ಸೌಹಾರ್ದ-(ನಾ)ಸಹೃದಯತೆ, ಸೌಜನ್ಯ.

**(ಹ)**

ಹಾವಳಿ- ತೊಂದರೆ,ಕಾಟ.

ಹಾಸ್ಯ-(ನಾ) ನವರಸಗಳಲ್ಲಿ ಒಂದು, ನಗು, ಅಣಕ.

ಹೊಗಳು-(ನಾ) ಕೊಂಡಾಡು, ಪ್ರಶಂಸೆ ಮಾಡು.

ಹೊನ್ನಕಿರಣ- ಚಿನ್ನದ ರೇಖೆ.

ಹೃದಯವಂತಿಕೆ-(ನಾ) ಸಹೃದಯತೆ, ಕಾರುಣ್ಯ.

ಪ್ರಿಯ ಮಕ್ಕಳೇ!

ಯಾರಾದರೂ ನಿಮ್ಮೊಂದಿಗೆ ಅಸಭ್ಯವಾಗಿ ಸ್ಪರ್ಶಿಸುತ್ತಿದ್ದಾರೆ ಎಂಬ ಅನುಭವವಾಗಿದ್ದರೆ, ನೀವೆಂದಿಗೂ ಮೌನವಾಗಿರಬಾರದು. ನೀವು ಈ ಕೆಳಗಿನ ವಿಚಾರಗಳನ್ನು ನೆನಪಿನಲ್ಲಿ ಇಟ್ಟುಕೊಳ್ಳಬೇಕು:

1. ನಿಮ್ಮನ್ನು ನೀವೇ ದೂಷಿಸಿಕೊಳ್ಳಬೇಡಿ.
2. ನೀವು ನಂಬಿದ ವ್ಯಕ್ತಿಗೆ ತಕ್ಷಣ ಹೇಳಿ.
3. ನೀವು POCSO e-box ಮೂಲಕ ಮಕ್ಕಳ ಹಕ್ಕು ರಕ್ಷಣಾ ರಾಷ್ಟ್ರೀಯ ಆಯೋಗ (NCPCR) ಕ್ಕೆ ಮಾಹಿತಿಯನ್ನು ತಿಳಿಸಬಹುದು.

**ನಿಮ್ಮನ್ನು ಅಸುರಕ್ಷಿತವಾಗಿ ಸ್ಪರ್ಶಿಸಿದಾಗ ನೀವು ಖಿನ್ನತೆ, ಗೊಂದಲ ಮತ್ತು ಸಹಾಯವಿಲ್ಲದಂತೆ ಎಂದು ಭಾವಿಸಬಾರದು. ಆದರೆ ಇದರಲ್ಲಿ ನಿಮ್ಮದೇನು ತಪ್ಪು ಇರುವದಿಲ್ಲ.**




**ಈ ಬಟನನ್ನುಒತ್ತಿರಿ**

POCSO e-box ಅನ್ನು NCPCR@gov.in ನಲ್ಲಿ ಸಂಪರ್ಕಿಸಬಹುದು.

**ನೀವು 18 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾದರೆ ಮತ್ತು ನೀವು ತಪ್ಪು ಗ್ರಹಿಕೆಗಳನ್ನು ಮಾಡಿಕೊಳ್ಳುವವರಾಗಿದ್ದರೆ ಅಥವಾ ತೊಂದರೆ ಅನುಭವಿಸುತ್ತಿದ್ದರೆ ಅಥವಾ ಯಾರಾದರೂ ತೊಂದರೆಯಲ್ಲಿ ಇದ್ದಾರೆಂದು ತಿಳಿದರೆ ತಕ್ಷಣ 1098 ಕ್ಕೆ ಕರೆಮಾಡಿ.... ಏಕೆಂದರೆ ಕೆಲವೊಂದು ಕರೆಗಳು ನಿಮ್ಮ ಹಾಗೂ ನಿಮ್ಮ ಸ್ನೇಹಿತರ ಜೀವನವನ್ನೇ ಬದಲಾಯಿಸಬಹುದು.**

CHILD LINE 1098 NIGHT & DAY

**ಚೈಲ್ಡ್‌ಲೈನ್ ೧೦೯೮ (ಹತ್ತು ಒಂಬತ್ತು ಎಂಟು) ಇದು ಒಂದು ೨೪ ಗಂಟೆ ಟೋಲಫ್ರೀ ರಾಷ್ಟ್ರೀಯ ಅಪತ್ಕಾಲಕದ ಫೋನ್ ಸೇವೆಯಾಗಿದೆ. ಇಂಡಿಯಾ ಫೌಂಡೇಶನ್‌ನ ಒಂದು ಉಪಕ್ರಮವಾಗಿದ್ದು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಬೆಂಬಲಿತವಾಗಿದೆ.**

नए समाज की ओर
Towards a new dawn

''ವಿದ್ಯಾರ್ಥಿಗಳಿಗೆ ಯೋಗ್ಯಸ್ಪರ್ಶ - ಅಯೋಗ್ಯಸ್ಪರ್ಶ ಇದರ ಬಗ್ಗೆ ಮಾಹಿತಿ ಕೊಡಿರಿ''

# राज्यगीत



जय जय महाराष्ट्र माझा, गर्जा महाराष्ट्र माझा
जय जय महाराष्ट्र माझा, गर्जा महाराष्ट्र माझा ।।धृ।।

भिती न आम्हा तुझी मुळी ही गडगडणाऱ्या नभा
अस्मानाच्या सुलतानीला जबाब देती जिभा
सह्याद्रीचा सिंह गर्जतो शिव शंभू राजा
दरी दरीतून नाद गुंजला महाराष्ट्र माझा
जय जय महाराष्ट्र माझा, गर्जा महाराष्ट्र माझा ।।१।।



काळ्या छातीवरी कोरली, अभिमानाची लेणी
पोलादी मनगटे खेळती, खेळ जीवघेणी
दारिद्र्याच्या उन्हात शिजला
निढळाच्या घामाने भिजला
देश गौरवासाठी झिजला
दिल्लीचे ही तख्त राखितो, महाराष्ट्र माझा
जय जय महाराष्ट्र माझा, गर्जा महाराष्ट्र माझा
जय जय महाराष्ट्र माझा ।।२।।



ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ - 411004.

बालभारती इयत्ता सहावी (कन्नड)

₹ 78.00